ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 1 ಬುಧವಾರ 2023

ಸಂಪುಟ: 44 | ಸಂಚಿಕೆ: 196 | ಪುಟಗಳು: 12 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರಲ್ಲಿ ಪ್ಯಾಲೆಸ್ಟೈನ್-ಇಸ್ರೇಲ್ ಯುದ್ಧದ ಪರ, ವಿರೋಧ ಪ್ರತಿಭಟನೆಗೆ ನಿರ್ಬಂಧ

ಸಾಮಾಜಿಕ ಜಾಲತಾಣದಲ್ಲಿ ಪ್ರಚೋದಕ ಹೇಳಿಕೆ, ಅಭಿಪ್ರಾಯ ಹಂಚಿಕೊಂಡರೆ ಪ್ರಕರಣ ದಾಖಲು: ಪೊಲೀಸ್ ಆಯುಕ್ತ ರಮೇಶ್ ಎಚ್ಚರಿಕೆ

ಮೈಸೂರು, ಅ.31(ಬಿಎಲ್‌ಯು)– ಪ್ಯಾಲೆಸ್ಟೈನ್ ಹಾಗೂ ಇಸ್ರೇಲ್ ಯುದ್ಧದ ವಿಚಾರವಾಗಿ ಮೈಸೂರಿನಲ್ಲಿ ಪರ ಅಥವಾ ವಿರೋಧ ವ್ಯಕ್ತಪಡಿಸಿ ಯಾರೂ ಪ್ರತಿಭಟನೆ ಇಲ್ಲವೇ ಮೆರವಣಿಗೆ ನಡೆಸಲು ಅವಕಾಶ ನೀಡುವುದಿಲ್ಲ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸ್ಪಷ್ಟವಾಗಿ ತಿಳಿಸಿದ್ದಾರೆ.

ಪ್ಯಾಲೆಸ್ಟೈನ್‌ನಲ್ಲಿ ನಡೆಯುತ್ತಿರುವ ಹಿಂಸಾಚಾರ ಖಂಡಿಸಿ ಯುದ್ಧ ಬೇಡ, ಶಾಂತಿ ಬೇಕು ಘೋಷವಾಕ್ಯದೊಂದಿಗೆ ಇಂದು ಪ್ರತಿಭಟನೆ ನಡೆಸಲು ಎಸ್‌ಡಿಪಿಐ ಅನುಮತಿ ಕೋರಿತ್ತು. ಆದರೆ ಇದಕ್ಕೆ ಅನುಮತಿ ನಿರಾಕರಿಸಲಾಗಿದೆ ಎಂದು ಹೇಳಿದರು.

ಇದು ಅಂತರರಾಷ್ಟ್ರೀಯ ವಿಚಾರವಾಗಿದ್ದು, ಪ್ರತಿಭಟನೆ ನಡೆಸಲು ಅನುಮತಿ ನೀಡಿದರೆ ಪರ ಹಾಗೂ ವಿರೋಧ ಪ್ರತಿಭಟನೆಗಳು ಜರುಗುತ್ತವೆ. ನಗರದಲ್ಲಿ ಮತೀಯ ಗಲಭೆ, ಹಿಂಸಾಚಾರದಿಂದ ಶಾಂತಿಗೆ ಭಂಗವಾಗಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುತ್ತದೆ ಎಂಬ ಗುಪ್ತಚರ ಮಾಹಿತಿಯ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಲು ಅವಕಾಶ ನಿರಾಕರಿಸಲಾಗಿದೆ. ಈ ಹಿಂದೆ ಕೂಡ ಅನುಮತಿ ನಿರಾಕರಿಸಲಾಗಿತ್ತು. ಈಗ ಮತ್ತೆ ಅದೇ ಕ್ರಮ ಕೈಗೊಳ್ಳಲಾಗಿದೆ ಎಂದು ರಮೇಶ್ ಸ್ಪಷ್ಟಪಡಿಸಿದ್ದಾರೆ.


ಬಿ.ರಮೇಶ್

ಪ್ಯಾಲೆಸ್ಟೈನ್ ವಿಚಾರವಾಗಿ ಪರ ಹಾಗೂ ವಿರೋಧವಾಗಿ ಯಾವುದೇ ರೀತಿಯ ಸಭೆ, ಸಮಾರಂಭ, ರ್‍ಯಾಲಿ ಹಾಗೂ ಪ್ರತಿಭಟನೆ ನಿಷೇಧಿಸಲಾಗಿದೆ ಎಂದು ಹೇಳಿದ್ದಾರೆ. ಇಸ್ರೇಲ್ ಹಾಗೂ ಪ್ಯಾಲೆಸ್ಟೈನ್ ವಿಚಾರದಲ್ಲಿ ಪರ, ವಿರೋಧ ವ್ಯಕ್ತಪಡಿಸಿ ಸೋಷಿಯಲ್ ಮೀಡಿಯಾದಲ್ಲಿ ಯಾರೂ ಯಾವುದೇ ಅಭಿಪ್ರಾಯ ಹಂಚಿಕೊಳ್ಳಬಾರದು ಎಂದು ರಮೇಶ್ ಎಚ್ಚರಿಸಿದ್ದಾರೆ.

ಈಗಾಗಲೇ ಈ ವಿಷಯವನ್ನು ವೈರಲ್ ಮಾಡಿದ ನಾಲ್ವರನ್ನು ವಶಕ್ಕೆ ಪಡೆದು, ಅವರ ವಿರುದ್ಧ ಸಿಆರ್‌ಪಿಸಿ 107ರ ಪ್ರಕಾರ ಪ್ರಕರಣ ದಾಖಲಿಸಲಾಗಿದೆ. ಇದೇ ರೀತಿ ಬೇರೆ ಯಾರಾದರೂ ಸೋಷಿಯಲ್ ಮೀಡಿಯಾದಲ್ಲಿ ಅಭಿಪ್ರಾಯ ಹಂಚಿಕೊಂಡರೆ ಅವರ ವಿರುದ್ಧವೂ ಇದೇ ಕ್ರಮ ಜರುಗಿಸಲಾಗುವುದು. ಈ ಹಿನ್ನೆಲೆಯಲ್ಲಿ ಯಾರೂ ಕೂಡ ಸೋಷಿಯಲ್ ಮೀಡಿಯಾದಲ್ಲಿ ಈ ವಿಚಾರವನ್ನು ವೈರಲ್ ಮಾಡಬಾರದು ಟಿವಿಗಳಲ್ಲಿ ಕೂಡ ಸುದ್ದಿ ಬಿತ್ತರಿಸಬಾರದು ಎಂದು ರಮೇಶ್ ಎಚ್ಚರಿಸಿದ್ದಾರೆ.

ಮೈಸೂರಿನ ಮಿಲಾದ್ ಪಾರ್ಕ್‌ನಲ್ಲಿ ಎಸ್‌ಡಿಪಿಐನವರು ಪ್ರತಿಭಟನೆ ನಡೆಸಲು ನಗರ ಪೊಲೀಸ್ ಆಯುಕ್ತರು ಅನುಮತಿ ನಿರಾಕರಿಸಿದ್ದರು. ಆದರೆ ನಿಷೇಧಾಜ್ಞೆ ಬಗ್ಗೆ ಮಾಹಿತಿ ಇಲ್ಲದೆ ಕೆಲವರು ಪ್ರತಿಭಟನೆಗೆ ಬಂದಿದ್ದರು. ಈ ಬಗ್ಗೆ ಮಾಹಿತಿ ನೀಡಿ ಪೊಲೀಸರು ಅವರನ್ನು ವಾಪಸು ಕಳುಹಿಸಿದರು. ಇಲ್ಲಿ ಪ್ರತಿಭಟನೆ ತಡೆಯಲು ಮಿಲಾದ್ ಪಾರ್ಕ್ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಕಮಾಂಡೊ ಪಡೆ, ಮಹಿಳಾ ಸಿಬ್ಬಂದಿಗಳು, ಮೀಸಲು ಪಡೆ ನಿಯೋಜಿಸಲಾಗಿತ್ತು. ಮೊಬೈಲ್ ಕಮಾಂಡೋ ಸೆಂಟರ್ ವಾಹನ ಕಾರ್ಯನಿರ್ವಹಿಸುತ್ತಿತ್ತು.


ಮೈಸೂರಿನ ಕೃಷ್ಣಮೂರ್ತಿಪುರಂನ ಕಾಂತರಾಜ ಅರಸ್ ರಸ್ತೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಆರ್ಯ ಆಸ್ಪತ್ರೆಯನ್ನು ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಚಿತ್ರದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮತ್ತಿತರರನ್ನು ಕಾಣಬಹುದು.

ಅಕ್ಕ ಸಮ್ಮೇಳನದಲ್ಲಿಯೂ ದಸರಾ ವಸ್ತುಪ್ರದರ್ಶನ ಸಂಸ್ಕೃತಿ ಪಸರಿಸಲಿ

ಮೈಸೂರು: ಅಮೆರಿಕಾದಲ್ಲಿ ನಡೆಯುವ ಅಕ್ಕ ಸಮ್ಮೇಳನದಲ್ಲಿಯೂ ಮುಂದಿನ ದಿನಗಳಲ್ಲಿ ನಾಡಹಬ್ಬ ದಸರೆ ಸಂಸ್ಕೃತಿಯನ್ನು ಬಿಂಬಿಸುವ ಕೆಲಸ ಆಗಲಿ ಎಂದು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ಪ್ರಭುದೇವ್ ಹೇಳಿದರು.



ನಗರದ ವಸ್ತುಪ್ರದರ್ಶನ ಆವರಣದಲ್ಲಿ ಸಂಗೀತ ಕಾರ್ಯಕ್ರಮದ ಮಳಿಗೆಗಳಿಗೆ ಭೇಟಿ ನೀಡಿ ಮಾತನಾಡಿದ ಅವರು, ಇಂತಹ ಕಾರ್ಯಕ್ರಮಗಳು ದೇಶ ವಿದೇಶದಲ್ಲಿಯೂ ನಡೆಯಬೇಕು. ಅಕ್ಕ ಸಮ್ಮೇಳನದಲ್ಲಿಯೂ ಮೈಸೂರಿನ ಸಂಸ್ಕೃತಿ ಬಿಂಬಿಸುವ ಮಳಿಗೆ ಸ್ಥಾಪಿಸಬೇಕು. ಅಂತೆಯೇ ಇಲ್ಲಿಯ ಕಲಾವಿದರನ್ನು ಅಲ್ಲಿಯೂ ಕರೆಸಿ ಪ್ರದರ್ಶನಕ್ಕೆ ಅವಕಾಶ ಕೊಡಬೇಕು. ಇತ್ತೀಚಿನ ದಿನಗಳಲ್ಲಿ ಈ ನಾಡಿನ ಸಂಸ್ಕೃತಿಯನ್ನು ಮರೆತು ಮೊಬೈಲ್ ಗೀಳಿನಲ್ಲಿ ತೊಡಗಿಸಿಕೊಂಡಿರುವುದು ವಿಷಾದನೀಯ ಎಂದರು.

ಅಕ್ಕಸಮ್ಮೇಳನದ ಸದಸ್ಯ ರಾಜೇಶ್ ಮುಂದಿನ ದಿನಗಳಲ್ಲಿ ದಸರಾ ಕಲಾವಿದರ ತಂಡ ಪ್ರದರ್ಶನಕ್ಕೆ ಅವಕಾಶ ಕೊಡುವಂತೆ ಮನವಿ ಕೋರಿದರೆ ಅದಕ್ಕೆ ಬೇಕಾಗುವ ಸಹಕಾರ ಕೊಡುವುದಾಗಿ ಹೇಳಿದರು.

ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್ ಜಿ.ಗೌಡ ಮಾತನಾಡಿ, ಇಂತಹ ನೂರಾರು ಮಂದಿಗೆ ಕರ್ನಾಟಕ ಲೋಕಸೇವಾ ಆಯೋಗ ಉದ್ಯೋಗ ಕೊಡಿಸುತ್ತಾ, ಮಾರ್ಗದರ್ಶನ ನೀಡುತ್ತಾ ಪ್ರೋತ್ಸಾಹಿಸುತ್ತಾ ಬಂದಿದೆ ಎಂದರು. ಇದೇ ವೇಳೆ ಗಣ್ಯರ ತಂಡ ಮಳಿಗೆಗಳಿಗೆ ಭೇಟಿ ನೀಡಿ ಅಲ್ಲಿನ ಉತ್ಪನ್ನಗಳನ್ನು ಸಂತಸದಿಂದ ಖರೀದಿಸಿದರು. ವಾದಕರಾದ ಯದುಕುಮಾರ್ ಮತ್ತು ತಂಡದ ಸ್ಯಾಕ್ಸೋಫೋನ್ ವಾದ್ಯಗೋಷ್ಠಿ ಹಾಗೂ ಹಂಸವೇಣಿ ತಂಡದ ಜನಪದ ಗೀತೆಯನ್ನು ಆಸ್ವಾದಿಸಿದ್ದು ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು

ಕನ್ನಡಕ್ಕೆ ಎರಡು ಸಾವಿರ ವರ್ಷದ ಇತಿಹಾಸವಿದೆ

ಲೇಖಕ ಪ್ರೊ. ರಾಮೇಗೌಡ ಅಭಿಪ್ರಾಯ

ಮೈಸೂರು,ಅ.31(ಬಿಎಲ್‌ಯು)– ಪ್ರಾಚೀನ ಭಾಷೆಯಾಗಿರುವ ಕನ್ನಡಕ್ಕೆ 2 ಸಾವಿರ ವರ್ಷಗಳ ಇತಿಹಾಸವಿದೆ ಎಂದು ಸಾಹಿತಿ ಪ್ರೊ.ರಾಮೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ನಡೆದ 15ನೇ ಶಾಸ್ತ್ರೀಯ ಕನ್ನಡ ಮಾನ್ಯತಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡಕ್ಕೆ ಪ್ರಾಚೀನ ಪರಂಪರೆ ಇದೆ. ಈ ಹಿನ್ನೆಲೆಯಲ್ಲಿ ಕನ್ನಡದ ಅಸ್ಮಿತೆಯನ್ನು ಕ್ರಿಸ್ತ ಪೂರ್ವಕ್ಕೂ ಹಿಂದಿನ ತನಕ ಕೊಂಡೊಯ್ಯಬಹುದು ಎಂದು ಹೇಳಿದರು.

ಒಂದು ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡಬೇಕಾದರೆ ಆ ಭಾಷೆಗೆ ಚರಿತ್ರೆ ಇರಬೇಕು, ಆ ಭಾಷೆಗೆ ಸಾವಿರ ವರ್ಷದ ಇತಿಹಾಸ ಇರಬೇಕು. ಈ ಎಲ್ಲಾ ಮಾನದಂಡದ ಆಧಾರದ ಮೇಲೆ ಶಾಸ್ತ್ರೀಯ ಸ್ಥಾನಮಾನ ನೀಡಲಾಗುತ್ತದೆ. ಈ ಎಲ್ಲಾ ಅರ್ಹತೆ ಇರುವ ಕಾರಣ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರಕಿದೆ. ಈ ವಿಚಾರವನ್ನು ಕನ್ನಡಿಗರು ಅಭಿಮಾನದಿಂದ ಹೇಳಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಕನ್ನಡಕ್ಕೆ ಈಗ ಶಾಸ್ತ್ರೀಯ ಸ್ಥಾನಮಾನ ದೊರೆತಿದೆ. ಆದರೆ ಶಾಸ್ತ್ರೀಯ ಎಂಬುದು ಶಾಸ್ತ್ರ ಎಂಬ ಪದದಿಂದ ಬಂದಿದೆ ಎಂದು ಕೆಲವರು ವಾದ ಮಾಡುತ್ತಾರೆ. ಅದೇನೇ ಇರಲಿ, ಕನ್ನಡಕ್ಕೆ ಈಗ ಅಧಿಕೃತವಾಗಿ ಶಾಸ್ತ್ರೀಯ ಸ್ಥಾನಮಾನ ದೊರೆತಿದೆ. ಆದರೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ನಂತರ ಏನು ಬದಲಾವಣೆಯಾಗಿದೆ ಎಂಬುದನ್ನು ಅವಲೋಕಿಸಬೇಕು ಎಂದರು. ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ನಿವೃತ್ತ ಪ್ರಾಧ್ಯಾಪಕಿ ಪ್ರೊ.ಸಂಧ್ಯಾರೆಡ್ಡಿ, ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಖಾಲಿ ಖುರ್ಚಿಗಳು ರಾರಾಜನೆ

ಭಾರತೀಯ ಭಾಷಾ ಸಂಸ್ಥಾನದಲ್ಲಿ ನಡೆದ 15ನೇ ಶಾಸ್ತ್ರೀಯ ಕನ್ನಡ ಮಾನ್ಯತಾ ದಿನಾಚರಣೆ ಕಾರ್ಯಕ್ರಮದಲ್ಲಿ ಖಾಲಿ ಖುರ್ಚಿಗಳು ರಾರಾಜಿಸುತ್ತಿದ್ದವು. ಕನ್ನಡ ರಾಜ್ಯೋತ್ಸವದ ಹಿಂದಿನ ದಿನವಾದ ಇಂದು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ದಿನವನ್ನು ಸಂಭ್ರಮಿಸಲು ಕಾರ್ಯಕ್ರಮ ಆಯೋಜಿಸಲಾಗಿತ್ತು. ಆದರೆ ಕಾರ್ಯಕ್ರಮದಲ್ಲಿ ಬೆರಳೆಣಿಕೆಯಷ್ಟು ಜನ ಮಾತ್ರ ಇದ್ದರು. ನೆರೆದಿದ್ದ ಕೆಲವರು ಭಾರತೀಯ ಭಾಷಾ ಸಂಸ್ಥಾನದಲ್ಲಿ ಬೇರೆ ಭಾಷೆ ಬಗ್ಗೆ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಾಗಿದ್ದರು. ಅವರಿಗೆ ಕನ್ನಡ ಭಾಷೆ ಗೊತ್ತಿಲ್ಲದಿದ್ದರೂ ಭಾಗವಹಿಸಿದ್ದರು.

68ನೇ ಕನ್ನಡ ರಾಜ್ಯೋತ್ಸವ ವಿಶೇಷ ಆಚರಣೆ

ಮೈಸೂರು, ಅ. 31– ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯ ಎಂದು ನಾಮಕರಣವಾಗಿ 50 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆ ಈ ವರ್ಷದ 68ನೇ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ವಿಶೇಷ ರೀತಿಯಲ್ಲಿ ಆಚರಿಸಲು ಮೈಸೂರು ಜಿಲ್ಲಾಡಳಿತ ತಿಳಿಸಿದೆ.



ಜಿಲ್ಲೆಯ ಎಲ್ಲಾ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳು ನವಂಬರ್ 1ರಂದು ಎಲ್ಲಾ ಮನೆಗಳ ಮುಂದೆ ಕೆಂಪು ಮತ್ತು ಹಳದಿ ಬಣ್ಣದ ರಂಗೋಲಿಗಳನ್ನು ಬಿಡಿಸಿ, "ಕರ್ನಾಟಕ ಸಂಭ್ರಮ –50 ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ" ಎಂಬ ಘೋಷವಾಕ್ಯವನ್ನು ಬರೆದು ಸಂಭ್ರಮಿಸಬೇಕಿದೆ. ಬೆಳಗ್ಗೆ 9 ಗಂಟೆಗೆ ಆಕಾಶವಾಣಿ ಕೇಂದ್ರಗಳಲ್ಲಿ ನಾಡಗೀತೆ ಪ್ರಸಾರವಾಗಲಿದ್ದು, ಆ ಸಮಯದಲ್ಲಿ ಕನ್ನಡ ನಾಡಿನ ಸಮಸ್ತ ನಾಗರಿಕರು ಎದ್ದು ನಿಂತು ರಾಷ್ಟ್ರಗೀತೆಗೆ ಗೌರವ ಸಲ್ಲಿಸುವ ಹಾಗೆಯೇ ನಾಡಗೀತೆಗೂ ಗೌರವ ಸಲ್ಲಿಸಬೇಕು. ಸಂಜೆ 5 ಗಂಟೆಗೆ ಸಾರ್ವಜನಿಕರಿಗೆ ಹತ್ತಿರವಿರುವ ಮೈದಾನಗಳಲ್ಲಿ ಕೆಂಪು ಹಳದಿ ಬಣ್ಣದ ಸಂಭ್ರಮ ಗಾಳಿಪಟ ಉತ್ಸವ ಮೂಲಕ ವಿಶೇಷವಾಗಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಬೇಕು. ಸಂಜೆ 7 ಗಂಟೆಗೆ ಜಿಲ್ಲೆಯ ಎಲ್ಲಾ ಸಾರ್ವಜನಿಕರು ತಮ್ಮ ಮನೆ ಹಾಗೂ ಅಂಗಡಿಗಳ ಮುಂದೆ ಹಣತೆ ಹಚ್ಚುವ ಮೂಲಕ ಕನ್ನಡ ಜ್ಯೋತಿ ಬೆಳಗಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ವೆಸ್ಟ್ ಬ್ಯಾಂಕ್‌ನಲ್ಲಿನ ಹಮಾಸ್ ಉಪನಾಯಕನ ಮನೆ ಧ್ವಂಸಗೊಳಿಸಿದ ಇಸ್ರೇಲ್ ಸೇನೆ



ವೆಸ್ಟ್ ಬ್ಯಾಂಕ್,ಅ.31– ಗಾಜಾದಲ್ಲಿ ಇಸ್ಲಾಮಿಕ್ ಗುಂಪು ಹಮಾಸ್ ವಿರುದ್ಧ ಯುದ್ಧ ನಡೆಯುತ್ತಿರುವ ಇಸ್ರೇಲಿ ಸೇನೆ ಇದೀಗ ಗಡಿಪಾರು ಮಾಡಲಾಗಿರುವ ಹಮಾಸ್ ನಂಬರ್ 2 ಉಗ್ರ ಸಲೇಹ್ ಅಲ್–ಅರುರಿಯ ವೆಸ್ಟ್ ಬ್ಯಾಂಕ್ ಮನೆಯನ್ನು ಧ್ವಂಸಗೊಳಿಸಿದೆ.

ಇಸ್ರೇಲ್ ಸೇನೆ ರಾಮಲ್ಲಾಹ್ ಬಳಿಯ ಅರೂರಾ ಗ್ರಾಮಕ್ಕೆ ಪ್ರವೇಶಿಸಿದೆ. ಅಲ್ಲಿ ಮನೆಯನ್ನು ಧ್ವಂಸಗೊಳಿಸುವ ಸಮಯದಲ್ಲಿ ತಮ್ಮ ಮೇಲೆ ಸ್ಥಳೀಯರು ಕಲ್ಲುಗಳನ್ನು ಎಸೆದಿದ್ದು ಅವರ ಮೇಲೆ ಗುಂಡು ಹಾರಿಸಲಾಗಿದೆ ಎಂದು ಇಸ್ರೇಲಿ ಮಿಲಿಟರಿ ಹೇಳಿದೆ. ಅರೂರಿ ಹಲವಾರು ದಾಳಿಗಳ ಮಾಸ್ಟರ್ ಮೈಂಡ್ ಎಂದು ಇಸ್ರೇಲ್ ಆರೋಪಿಸಿದೆ ಅರೂರಿ 2017ರಲ್ಲಿ ಹಮಾಸ್ ಮುಖ್ಯಸ್ಥ ಇಸ್ಮಾಯಿಲ್ ಹನಿಯೆಹ್‌ಗೆ ಉಪನಾಯಕರಾಗಿ ಆಯ್ಕೆಯಾಗಿದ್ದನು. ಅಧಿಕೃತವಾಗಿ ಗುಂಪಿನ ಎರಡನೇ ಮುಖಂಡ ಎಂದು ಹೆಸರಿಸಲಾಯಿತು. ಅ. 21ರಂದು ಅರುರಿಯ ಸಹೋದರ ಮತ್ತು ಅವರ ಒಂಬತ್ತು ಸೋದರಳಿಯರು ಸೇರಿದಂತೆ ಸುಮಾರು 20 ಜನರನ್ನು ಇಸ್ರೇಲಿ ಮಿಲಿಟರಿ ಬಂಧಿಸಿದೆ ಎಂದು ಗ್ರಾಮದ ಮೇಯರ್ ಅಲಿ ಅಲ್–ಖಾಸಿಬ್ ತಿಳಿಸಿದ್ದಾರೆ. ಇಸ್ರೇಲಿ ಕಾರಾಗೃಹಗಳಲ್ಲಿ ಸುಮಾರು 2 ದಶಕಗಳನ್ನು ಕಳೆದ ನಂತರ, ಅರೂರಿ ದೇಶಭ್ರಷ್ಟನಾಗಿ 2010ರಲ್ಲಿ ಬಿಡುಗಡೆಯಾಗಿದ್ದನು.

ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ



ಮೈಸೂರು, ಅ.31– ನಗರದ ಡಾ. ರಾಜ್‌ಕುಮಾರ್ ಕಲಾ ಟ್ರಸ್ಟ್ ವತಿಯಿಂದ ಇತ್ತೀಚೆಗೆ ಡಾ.ಪುನೀತ್ ರಾಜ್‌ಕುಮಾರ್ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಪುರಭವನ ಆವರಣದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಮಾಜಿ ಶಾಸಕ ಎಸ್.ಬಾಲರಾಜ್ ಚಾಲನೆ ನೀಡಿದರು. ಮೇಲುಕೋಟೆ ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೈ.ಡಿ. ರಾಜಣ್ಣ, ಪಿಎಸ್‌ಆರ್ ಗ್ರೂಪ್‌ನ ವ್ಯವಸ್ಥಾಪಕ ಚಂದ್ರಹಾಸ್, ಟ್ರಸ್ಟ್‌ನ ಪದಾಧಿಕಾರಿಗಳಾದ ಸುಧೀಂದ್ರ, ನಂದಕುಮಾರ್, ಸುರೇಶ್, ಸರ್ವಮಂಗಳ ಭಾಗವಹಿಸಿದ್ದರು. ಸುಮಾರು 200ಕ್ಕೂ ಅಧಿಕ ಮಂದಿ ಕಣ್ಣಿನ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದು, ಅದರಲ್ಲಿ 21 ಮಂದಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿ ಮಾಡಿಸಲಾಯಿತು. ಶಸ್ತ್ರಚಿಕಿತ್ಸೆ ಆದ ರೋಗಿಗಳನ್ನು ಇಂದು ಮೈಸೂರಿಗೆ ಕರೆತರಲಾಯಿತು.

ಇದರ ಸಂಪೂರ್ಣ ನೇತೃತ್ವ ಹಾಗೂ ಆಯೋಜನೆ ಟ್ರಸ್ಟ್ ಅಧ್ಯಕ್ಷ ಮೈಸೂರು ಜಯರಾಂ ವಹಿಸಿಕೊಂಡಿದ್ದರು.

ಆರ್.ಲೋಹಿತ್‌ಗೆ ಪಿಹೆಚ್.ಡಿ



ಮೈಸೂರು, ಅ.31– ಡಾ.ಸಿ.ಬಸವರಾಜು ಅವರ ಮಾರ್ಗದರ್ಶನದಲ್ಲಿ ಆರ್. ಲೋಹಿತ್ ಅವರು ಕಾನೂನು ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.11.2023 ಬುಧವಾರ, ಮಳೆ ನಕ್ಷತ್ರ: ಸ್ವಾತಿ, 25.10.2023ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಗಳಿಕೆ–ಉಳಿಕೆ– ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ– ಮೂಕನಹಳ್ಳಿ ರಂಗಸ್ವಾಮಿ, 6.40 ರೈತರಿಗೆ ಸಲಹೆ, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 7.15 ಭಾವಗೀತೆಗಳು, 9.00 ಮನೋನಂದನ–ಮರೆವಿನ ಕಾಯಿಲೆ ಕುರಿತು–ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಅಭಿಜಿತ್ ಅವರೊಂದಿಗೆ ಮಾತುಕತೆ, 10.00 ಪಂಡಿತ್ ನರಸಿಂಹಲು ವಡವಾಟಿ–ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎ.ಎನ್.ಕಿಶನ್– ವೀಣಾ ವಾದನ, 4.00 ಮಹಿಳಾರಂಗ–ಸ್ತ್ರೀ ಚೇತನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಸಾವಯವ ಕೃಷಿಯಲ್ಲಿ ಹಸಿರೆಲೆ ಗೊಬ್ಬರದ ಪ್ರಾಮುಖ್ಯತೆ ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ರವೀಂದ್ರ ಕಟ್ಟಿ, 9.30 ನಾಸಿರ್ ಅಹಮದ್–ಹಿಂದೂಸ್ಥಾನಿ ಮ್ಯಾಂಡೋಲಿನ್, 10.00 ಜನಪದ ಸಂಗೀತ, 10.30 ಸವಿನೆನಪು

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಕನ್ನಡ ರಾಜ್ಯೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಮುಖ್ಯ ಅತಿಥಿಗಳು : ಸಹ ಪ್ರಾಧ್ಯಾಪಕ ಡಾ.ಎನ್.ಆರ್. ಚಂದ್ರೇಗೌಡ, ಪ್ರಾಂಶುಪಾಲರಾದ ಡಾ. ಎಸ್. ಪ್ರತಿಭಾ, ಎಸ್. ಸೋಮಶೇಖರ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಸಪ್ನ ಬುಕ್ ಹೌಸ್ :** 68ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ರಿಯಾಯಿತಿ ಕನ್ನಡ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಸಪ್ನ ಬುಕ್ ಹೌಸ್, ದೇವರಾಜ ಮೊಹಲ್ಲಾ, ಬೆಳಗ್ಗೆ 10 ರಿಂದ.

■ **ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ :** ಕನ್ನಡ ರಾಜ್ಯೋತ್ಸವ ಆಚರಣೆ, ಪುಷ್ಪಾರ್ಚನೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತಿ ಚಿಂತಕ ಡಾ. ರಘುರಾಂ ವಾಜಪೇಯಿ, ಒಕ್ಕಲಿಗರ ಮಹಾಸಭಾ ರಾಜ್ಯಾಧ್ಯಕ್ಷ ಎನ್. ಬೆಟ್ಟೇಗೌಡ, ಸ್ಥಳ: ಸಂಘದ ಕಚೇರಿ ಆವರಣ, ಮಧ್ಯಾಹ್ನ 12.30ಕ್ಕೆ.

■ **ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಪತಂಜಲಿ ಯೋಗ ಪ್ರತಿಷ್ಠಾನ, ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ :** ಶ್ರೀ ಪತಂಜಲಿ ಯೋಗ ಮಂದಿರದ ಪ್ರವೇಶೋತ್ಸವ ಮತ್ತು ಲೋಕಾರ್ಪಣೆ ಕಾರ್ಯಕ್ರಮ, ಸಂಜೆಯಿಂದ ಪೂಜಾ ಕಾರ್ಯಕ್ರಮ, ರಾತ್ರಿ 8ಕ್ಕೆ ಪ್ರಸಾದ, ಸ್ಥಳ: ಶ್ರೀ ಪತಂಜಲಿ ಯೋಗ ಮಂದಿರ, ಕೆ.ಆರ್. ಶ್ರೀನಿವಾಸನ್ ಐಪಿಎಸ್ ನಗರ.

■ **ಚಾಮುಂಡಿ ಚಿಲ್ಡ್ರನ್ಸ್ ಹೋಂ:** ಕನ್ನಡ ಧ್ವಜಾರೋಹಣ ಕಾರ್ಯಕ್ರಮ, ಸನ್ಮಾನ: ಡಾ.ಜೆ.ವಿ. ನಾರಾಯಣ್, ಸ್ಥಳ:ಚಾಮುಂಡಿ ಮಕ್ಕಳ ಮನೆ, ಬೆಳಗ್ಗೆ 9ಕ್ಕೆ.

■ **ಶಾಶ್ವತ ಸೇವಾ ಚಾರಿಟೆಬಲ್ ಟ್ರಸ್ಟ್:** ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ: ಟ್ರಸ್ಟ್ ಸಂಸ್ಥಾಪಕ ಬಿ.ಲೋಕೇಶ್, ಆರೋಗ್ಯ ಶಿಬಿರಕ್ಕೆ ಚಾಲನೆ: ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಸಂಸದ ಪ್ರತಾಪ್ ಸಿಂಹ, ಸ್ಥಳ: ಮಾರ್ವೆಲ್ ಪಿಯು ಕಾಲೇಜು, ಬೆಳಗ್ಗೆ 9.30ಕ್ಕೆ.

■ **ಜಿಲ್ಲಾಡಳಿತ :** 68ನೇ ಕನ್ನಡ ರಾಜ್ಯೋತ್ಸವ, ಘನ ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಧ್ವಜಾರೋಹಣ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉಪಸ್ಥಿತರು: ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ: ಓವಲ್ ಮೈದಾನ, ಬೆಳಗ್ಗೆ 9ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ ಮತ್ತು ಕನ್ನಡ ರಾಜ್ಯೋತ್ಸವ, ಬೆಳಗ್ಗೆ 10ಕ್ಕೆ ಧ್ವಜಾರೋಹಣ, ಸಮಿತಿ ಸದಸ್ಯರಿಂದ ಕನ್ನಡ ಗೀತೆಗಳ ಗಾಯನ, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.

■ **ಲರ್ನರ್ಸ್ ಗ್ಲೋಬಲ್ ಪಿಯು ಕಾಲೇಜು :** ಪದ್ಮಶ್ರೀ ವಿಜೇತ ಭೌತಶಾಸ್ತ್ರಜ್ಞ ಡಾ. ಹೆಚ್.ಸಿ. ವರ್ಮಾ ಅವರಿಂದ ಶೈಕ್ಷಣಿಕ ಕಾರ್ಯಕ್ರಮ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11.30ರಿಂದ.


■ **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ :** 68ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ, ಬೆಳಗ್ಗೆ 9ಕ್ಕೆ ಕಲಾ ತಂಡಗಳಿಂದ ಪ್ರದರ್ಶನ, 9.30ಕ್ಕೆ ಧ್ವಜಾರೋಹಣ, ಬೆಳಗ್ಗೆ 10ಕ್ಕೆ ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಪಂಡಿತಾರಾಧ್ಯ, ಪ್ರೊ. ಪಿ.ಕೆ. ರಾಜಶೇಖರ್, ಅಧ್ಯಕ್ಷತೆ : ಭಾರತೀಯ ಭಾಷಾ ಸಂಸ್ಥಾನ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್, ಮಧ್ಯಾಹ್ನ 12.30ಕ್ಕೆ ಬಹುಮಾನ ವಿತರಣೆ, ಸ್ಥಳ: ಸಂಸ್ಥೆ ಸಭಾಂಗಣ, ಭಾರತೀಯ ಭಾಷಾ ಸಂಸ್ಥಾನ.

■ **ಭಾರತ ವಿಕಾಸ ಪರಿಷದ್, ರಾಮ್‌ಸನ್ಸ್ ಕಲಾ ಪ್ರತಿಷ್ಠಾನ, ಬೊಂಬೆ ಮನೆ :** ದಸರಾ ಬೊಂಬೆ ಜೋಡಣಾ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭ, ರಾಜ್ಯೋತ್ಸವದ ಉದ್ಘಾಟನೆ: ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಹುಮಾನ ವಿತರಣೆ : ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಆರ್.ಜಿ. ಸಿಂಗ್, ಮುಖ್ಯ ಅತಿಥಿಗಳು : ಡಾ. ವಾಮನರಾವ್ ಬಾಪಟ್, ಆರ್. ನಾಗಭೂಷಣ, ಅಧ್ಯಕ್ಷತೆ : ಭಾರತ ವಿಕಾಸ ಪರಿಷದ್‌ನ ಡಾ. ಬಿ.ಎನ್. ರಂಗನಾಥ ರಾವ್, ಸ್ಥಳ: ಬೊಂಬೆ ಮನೆ, ಪ್ರತಿಮಾ ಗ್ಯಾಲರಿ, ನಜರ್‌ಬಾದ್, ಸಂಜೆ 4.30ಕ್ಕೆ.

■ **ವಾಯುವಿಹಾರಿಗಳ ಒಕ್ಕೂಟ :** 68ನೇ ಕನ್ನಡ ರಾಜ್ಯೋತ್ಸವ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 5ರಿಂದ ಶ್ರೀ ರಾಮಕೃಷ್ಣ ಪರಮಹಂಸ ಉದ್ಯಾನವನದಲ್ಲಿ ಜನಪದ ಗೀತೆ, ಭಾವಗೀತೆ, ಭಕ್ತಿಗೀತೆ, ಹಳೇ ಕನ್ನಡಗೀತೆ ಕಾರ್ಯಕ್ರಮ, ಸಂಜೆ 6.30 ರಿಂದ ರಂಗಾನಂದ ಕಲಾ ಸಂಘದವರಿಂದ ಕಾಕೋಳು ಸರೋಜರಾವ್ ವಿರಚಿತ 'ಕರ್ನಾಟಕ ರಮಾರಮಣ ಶ್ರೀ ಕೃಷ್ಣದೇವರಾಯ' ಐತಿಹಾಸಿಕ ನಾಟಕ ಪ್ರದರ್ಶನ, ನಿರ್ದೇಶನ : ಕಲಾವಲ್ಲಭ ರಂಗಸ್ವಾಮಿ, ವಸ್ತ್ರಾಲಂಕಾರ : ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ, ಹಿನ್ನೆಲೆ ಸಂಗೀತ : ಎಂ.ಎಸ್. ಪಾಟೀಲ್, ಜಗದೀಶ್, ಬೆಳಕು : ಡಿ. ನಾಗೇಂದ್ರ ಕುಮಾರ್.

■ **ಶ್ರೀರಾಂಪುರ ಗೆಳೆಯರ ಬಳಗ (ಸಾಂಸ್ಕೃತಿಕ ಮತ್ತು ಸೇವಾ ವೇದಿಕೆ):** ರಾಜ್ಯೋತ್ಸವದ ಅಂಗವಾಗಿ ಗಂಗಾವತಿ ಪ್ರಾಣೇಶ್ ಮತ್ತು ತಂಡದವರಿಂದ 'ನಗೆಹಬ್ಬ', ಸ್ಥಳ: ಶಿವ ದೇವಾಲಯ ವೃತ್ತ ಶ್ರೀರಾಂಪುರ, ಸಂಜೆ 7ಕ್ಕೆ


ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

2.11.2023 ಗುರುವಾರ, ಮಳೆ ನಕ್ಷತ್ರ: ಸ್ವಾತಿ, 25.10.2023ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್.ರವಿಶಂಕರ್, 6.40 ರೈತರಿಗೆ ಸಲಹೆ, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ– ಮೈಸೂರು ಉಮೇಶ್, 10.00 ಡಾ.ಎನ್‌ರಮಣಿ–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆ, 1.30 ಮುಂಬೈನಲ್ಲಿ ನಡೆಯಲಿರುವ ಭಾರತ ಹಾಗೂ ಶ್ರೀಲಂಕಾ ತಂಡಗಳ ನಡುವೆ ನಡೆಯಲಿರುವ ಏಕದಿನ ವಿಶ್ವ ಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

■ **ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್:** 44ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ, ಘನ ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಅತಿಥಿಗಳು: ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಧ್ವಜಾರೋಹಣ: ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್, ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್, ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಪತಂಜಲಿ ಯೋಗ ಪ್ರತಿಷ್ಠಾನ, ಶ್ರೀ ಪತಂಜಲಿ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ:** ಯೋಗ ಮಂದಿರದ ಲೋಕಾರ್ಪಣೆ ಕಾರ್ಯಕ್ರಮ, ಬೆಳಗ್ಗೆ 9ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮಧ್ಯಾಹ್ನ 1ಕ್ಕೆ ಮಹಾಪ್ರಸಾದ, ಸ್ಥಳ: ಶ್ರೀ ಪತಂಜಲಿ ಯೋಗ ಮಂದಿರ, ಕೆ.ಆರ್. ಶ್ರೀನಿವಾಸನ್ ಐಪಿಎಸ್ ನಗರ.

■ **ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್:** ಕನ್ನಡ ಹಬ್ಬ–2023, ತಾಯಿ ಭುವನೇಶ್ವರಿ ಶೋಭಾ ಯಾತ್ರೆ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಹರೀಶ್‌ಗೌಡ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ, ಗೌರವ ಡಾಕ್ಟರೇಟ್ ಪುರಸ್ಕೃತರಾದ ಡಾ.ಕೆ.ಬಿ.ಗಣಪತಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಧಾನ ಭಾಷಣ : ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಸ್ಥಳ:ಕಲಾಮಂದಿರ, ಬೆಳಗ್ಗೆ 11.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್:** ಪಂಡಿತ್ ಕೃಷ್ಣರಾಜ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು – ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 1 ಬುಧವಾರ 2023

ಸಂಪುಟ: 44 | ಸಂಚಿಕೆ: 196 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಕರ್ನಾಟಕ ಕಗ್ಗತ್ತಲು ಭೀತಿ

ನಾಲ್ಕೈದು ದಿನದಲ್ಲಿ ಕಲ್ಲಿದ್ದಲು ಪೂರೈಕೆ ಆಗದಿದ್ದರೆ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳು ಸ್ಥಗಿತ



ಬೆಂಗಳೂರು, ಅ.31(ಕೆಎಂಶಿ)– ಶಾಖೋತ್ಪನ್ನ ವಿದ್ಯುತ್ ಘಟಕಗಳಿಗೆ ಕಲ್ಲಿದ್ದಲು ಇಲ್ಲದೆ ಕರ್ನಾಟಕ ಕಗ್ಗತ್ತಲಿನತ್ತ ಸಾಗಲಿದೆ.

ಗ್ಯಾರಂಟಿ ಯೋಜನೆಗಳಿಗೆ ಹಣ ಕ್ರೋಢೀಕರಿಸುವ ಹಿನ್ನೆಲೆಯಲ್ಲಿ, ಕಲ್ಲಿದ್ದಲು ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸು ಕೊರತೆಯಿಂದ ಕರ್ನಾಟಕ ವಿದ್ಯುತ್ ಕ್ಷಾಮ ಎದುರಿಸುವಂತಾಗಿದೆ.

ರಾಜ್ಯದ 19 ಶಾಖೋತ್ಪನ್ನ ವಿದ್ಯುತ್ ಘಟಕಗಳ ಪೈಕಿ ಕಲ್ಲಿದ್ದಲ ಕೊರತೆಯಿಂದ ಕೇವಲ 11 ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ, ಹಾಲಿ ಇರುವ ಕಲ್ಲಿದ್ದಲು ದಾಸ್ತಾನು ಕೇವಲ ನಾಲ್ಕೈದು ದಿನಗಳಿಗೆ ಸಾಕಾಗಲಿದೆ. ಇಷ್ಟರೊಳಗೆ ಕಲ್ಲಿದ್ದಲು ಖರೀದಿಸದಿದ್ದರೆ, ಇಡೀ ಕರ್ನಾಟಕ ಕತ್ತಲಲ್ಲಿ ಮುಳುಗಲಿದೆ. ಎಲ್ಲಾ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳು ಕಾರ್ಯನಿರ್ವಹಿಸಿದರೆ ಪ್ರತಿನಿತ್ಯ 11 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗಲಿದೆ. ಕಲ್ಲಿದ್ದಲು ಕೊರತೆಯಿಂದ ಈಗಾಗಲೇ 8 ಸ್ಥಾವರಗಳು ಮುಚ್ಚಿದ್ದು, ಇದರಿಂದ 5 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಕೊರತೆಯಾಗಿದೆ.

ಇನ್ನು ನಾಲ್ಕೈದು ದಿನಗಳಲ್ಲಿ ಸ್ಥಾವರಗಳಿಗೆ ಅಗತ್ಯ ಕಲ್ಲಿದ್ದಲು ಪೂರೈಕೆ ಆಗದಿದ್ದರೆ, ಕಾರ್ಯ ಸಂಪೂರ್ಣ ಸ್ಥಗಿತಗೊಳ್ಳಲಿವೆ. ರಾಯಚೂರು, ●9ನೇ ಪುಟಕ್ಕೆ



ಇಸ್ರೋ ಮುಖ್ಯಸ್ಥ ಸೋಮನಾಥನ್, ನ್ಯಾ.ಗೋಪಾಲಗೌಡ, ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ಡಾ.ರಾಮಚಂದ್ರ ಸೇರಿ

68 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ

10 ಸಂಘ–ಸಂಸ್ಥೆಗಳಿಗೂ ಪುರಸ್ಕಾರ



ಸೋಮನಾಥನ್ | ನ್ಯಾ.ಗೋಪಾಲಗೌಡ | ಡಾ.ರಾಮಚಂದ್ರ | ಬ್ಯಾಂಕ್ ಜನಾರ್ಧನ್ | ಡಿಂಗ್ರಿ ನಾಗರಾಜ್ | ಮಾಯಾ ಶರ್ಮ

ಬೆಂಗಳೂರು, ಅ.31(ಕೆಎಂಶಿ)– ಇಸ್ರೋ ಮುಖ್ಯಸ್ಥ ಸೋಮನಾಥನ್, ಸುಪ್ರೀಂಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ ನಿರ್ದೇಶಕ ಡಾ. ರಾಮಚಂದ್ರ, ಮಾಧ್ಯಮ ಕ್ಷೇತ್ರದ ಮಾಯಾ ಶರ್ಮ, ಸ್ವಾತಂತ್ರ್ಯ ಹೋರಾಟಗಾರ ಪುಟ್ಟಸ್ವಾಮಿಗೌಡ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪ್ರೊ. ಗೋಪಾಲನ್ ಜಗದೀಶ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ 68 ಸಾಧಕರಿಗೆ ಹಾಗೂ 10 ಸಂಘ–ಸಂಸ್ಥೆಗಳು ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನವಾಗಿವೆ.

ನವೆಂಬರ್ 1ರಂದು ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಧಕರನ್ನು ಗೌರವಿಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಪುರಸ್ಕೃತರಿಗೆ ಐದು ಲಕ್ಷ ನಗದು ಹಾಗೂ 25 ಗ್ರಾಂ ಚಿನ್ನದ ಪದಕ ನೀಡಿ ಗೌರವಿಸಲಾಗುವುದು ಎಂದರು.

ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ನೇತೃತ್ವದ ಉನ್ನತ ಮಟ್ಟದ ಸಮಿತಿ, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದನ್ನು ಗುರುತಿಸಿ, ಮಾಡಿದ ಶಿಫಾರಸ್ಸನ್ನು ಸರ್ಕಾರ ಮಾನ್ಯ ಮಾಡಿದೆ ಎಂದರು.

ಪುರಸ್ಕೃತರ ಪಟ್ಟಿ ಇಂತಿದೆ: ಸಮಾಜಸೇವೆ ಕ್ಷೇತ್ರದಲ್ಲಿ ಹುಚ್ಚಮ್ಮ ಬಸಪ್ಪ ಚೌದ್ರಿ (ಕೊಪ್ಪಳ), ಚಾರ್ಮಾಡಿ ಹಸನಬ್ಬ ದ.ಕನ್ನಡ), ಕೆ. ರೂಪ್ಲಾನಾಯಕ್ (ದಾವಣಗೆರೆ), ನಿಜಗುಣಾನಂದ ಸ್ವಾಮೀಜಿ (ನಿಷ್ಕಲ ಮಂಟಪ, ಬೆಳಗಾವಿ), ಜಿ.ನಾಗರಾಜು(ಬೆಂಗಳೂರು) ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆಡಳಿತ ಕ್ಷೇತ್ರದಲ್ಲಿ ಜಿ.ವಿ.ಬಲರಾಮ್ (ತುಮಕೂರು), ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಲಾಗಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಸಿ. ರಾಮಚಂದ್ರ(ಬೆಂಗಳೂರು), ಡಾ. ಪ್ರಶಾಂತ್ ಶೆಟ್ಟಿ(ದ.ಕನ್ನಡ), ಸಾಹಿತ್ಯ ಕ್ಷೇತ್ರದಲ್ಲಿ ಪ್ರೊ. ಸಿ.ನಾಗಣ್ಣ (ಚಾಮರಾಜನಗರ), ಸುಬ್ಬು ಹೊಲೆಯಾರ್ (ಹೆಚ್.ಕೆ.ಸುಬ್ಬಯ್ಯ, ಹಾಸನ), ಸತೀಶ್ ಕುಲಕರ್ಣಿ ●7ನೇ ಪುಟಕ್ಕೆ

ಮೈಸೂರಲ್ಲಿ ಆರು, ಚಾ.ನಗರ ಇಬ್ಬರು, ಕೊಡಗು, ಮಂಡ್ಯ, ಹಾಸನದ ತಲಾ ಒಬ್ಬರಿಗೆ ರಾಜ್ಯೋತ್ಸವ ಪ್ರಶಸ್ತಿ



ಜವರಪ್ಪ | ಗಂಗಾಧರಸ್ವಾಮಿ | ದಯಾನಂದ್ | ಭಾರದ್ವಾಜ್ | ಪಿ.ಗೌರಯ್ಯ | ಮಹದೇವು

ಮೈಸೂರು, ಅ.31(ಎಸ್‌ಬಿಡಿ)–ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮೈಸೂರಿನ ಆರು ಮಂದಿ, ಚಾಮರಾಜನಗರದ ಇಬ್ಬರು, ಕೊಡಗು, ಮಂಡ್ಯ ಹಾಗೂ ಹಾಸನದ ತಲಾ ಒಬ್ಬರು ಈ ಬಾರಿ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜೊತೆಗೆ ಮೈಸೂರಿನ ಪುಸ್ತಕ ಪ್ರಕಾಶನ ಸಂಸ್ಥೆಯೊಂದು ಈ ಪ್ರಶಸ್ತಿ ಗರಿ ಮುಡಿದಿದೆ.

ಮೈಸೂರಿನ ರಂಗಭೂಮಿ ಕ್ಷೇತ್ರದಿಂದ ಪಿ.ಗಂಗಾಧರ ಸ್ವಾಮಿ, ಶಿಲ್ಪಕಲೆ/ಚಿತ್ರಕಲೆ/ಕರಕುಶಲ ಕ್ಷೇತ್ರದಿಂದ ಪಿ.ಗೌರಯ್ಯ, ಜಾನಪದ ಕ್ಷೇತ್ರದಿಂದ ಮಹದೇವು, ಸಂಕೀರ್ಣ ಕ್ಷೇತ್ರದಿಂದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಮಿಮಿಕ್ರಿ ದಯಾನಂದ್,

56 ವರ್ಷದಿಂದ ಪತ್ರಿಕಾ ವಿತರಣೆಯಲ್ಲಿ ತೊಡಗಿಸಿಕೊಂಡಿರುವ ಹಿರಿಯ ಶ್ರಮಜೀವಿ ಜವರಪ್ಪರಿಗೆ ಸಂದಿದ ಗೌರವ

ಮಾಧ್ಯಮ ಕ್ಷೇತ್ರದಿಂದ ಜವರಪ್ಪ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಬಿ.ಎನ್.ಶ್ರೀರಾಮ ಪುಸ್ತಕ ಪ್ರಕಾಶನ ಸಂಸ್ಥೆಗೂ ಪ್ರಶಸ್ತಿ ದಕ್ಕಿದೆ. ಚಾಮರಾಜನಗರದಿಂದ ಪ್ರೊ. ಗೋಪಾಲನ್ ಜಗದೀಶ್ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ ಹಾಗೂ ಪ್ರೊ.ಸಿ.ನಾಗಣ್ಣ ಸಾಹಿತ್ಯ ಕ್ಷೇತ್ರದಿಂದ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕೊಡಗಿನ ಲೆ.ಜ.ಕೊಡನ ಪೂವಯ್ಯ ಕಾರ್ಯಪ್ಪ ಸಂಕೀರ್ಣ ಕ್ಷೇತ್ರದಿಂದ, ಮಂಡ್ಯದ ಕೆ.ಟಿ.ಚಂದು ಶಿಕ್ಷಣ ಕ್ಷೇತ್ರದಿಂದ ಹಾಗೂ ಹಾಸನದ ಸುಬ್ಬು ಹೊಲೆಯಾರ್ (ಎಚ್.ಕೆ. ಸುಬ್ಬಯ್ಯ) ಸಾಹಿತ್ಯ ಕ್ಷೇತ್ರದಿಂದ ಪ್ರಶಸ್ತಿಗೆ ಬಾಜನರಾಗಿದ್ದಾರೆ.






ಸಿ.ನಾಗಣ್ಣ | ಪ್ರೊ.ಗೋಪಾಲನ್ | ಕೆ.ಟಿ.ಚಂದು | ಕೆ.ಪಿ.ಕಾರ್ಯಪ್ಪ | ಎಚ್.ಕೆ.ಸುಬ್ಬಯ್ಯ

ಪತ್ರಿಕಾ ವಿತರಕರಿಗೆ ಸಂದ ಗೌರವ

ಮಾಧ್ಯಮ ಕ್ಷೇತ್ರದಿಂದ ಮೊದಲ ಬಾರಿಗೆ ಪತ್ರಿಕಾ ವಿತರಕರೊಬ್ಬರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಗುರುತಿಸಿರುವುದು ಪ್ರಶಸ್ತಿಯ ಮೌಲ್ಯ ಹೆಚ್ಚಿಸಿದೆ. ಕಳೆದ 56 ವರ್ಷದಿಂದ ಪತ್ರಿಕಾ ವಿತರಕರಾಗಿ ಶ್ರಮಿಸುತ್ತಿರುವ ಮೈಸೂರಿನ ಕೆ.ಆರ್.ಮೊಹಲ್ಲಾದ ಚಾಮುಂಡಿಪುರಂನ ನಿವಾಸಿ ಜವರಪ್ಪ(71 ವರ್ಷ) ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ ಮೊದಲ ಪತ್ರಿಕಾ ವಿತರಕ. 15ನೇ ವಯಸ್ಸಿನಲ್ಲಿಯೇ ಪತ್ರಿಕಾ ವಿತರಕರಾಗಿ ಕೆಲಸ ಆರಂಭಿಸಿರುವ ಇವರು, ಈಗಲೂ ಈ ವೃತ್ತಿಯಿಂದಲೇ ●7ನೇ ಪುಟಕ್ಕೆ

ಶುಭಾಶಯಗಳು



ಬಿಡುವು

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 2.11.2023ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಪಾರಂಪರಿಕವಾಗಿ ಕುಟುಂಬಗಳಲ್ಲಿ ವನ್ಯಜೀವಿ ಉತ್ಪನ್ನಗಳ ಸಂಗ್ರಹಿಸಿದ್ದರೆ ಆತಂಕಪಡುವ ಅಗತ್ಯ ಇಲ್ಲ

ಉದುರಿದ ನವಿಲು ಗರಿ, ಜಿಂಕೆ ಕೊಂಬು, ಆನೆ ದಂತದಿಂದ ಮಾಡಿದ ಪದಾರ್ಥಗಳು ಪೂರ್ವಜರ ಕಾಲದಿಂದ ಸಂಗ್ರಹಿಸಿಟ್ಟಿದ್ದರೆ ಅಪರಾಧವಲ್ಲ

'ಹುಲಿ ಉಗುರು' ಪ್ರಕರಣದಿಂದ ಆತಂಕಗೊಂಡಿರುವ ಕೊಡಗಿನ ಜನತೆಗೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ ಅಭಯ

- ಕಾನೂನು ಅರಿಯದೆ ಅರಣ್ಯಾಧಿಕಾರಿಗಳಿಂದ ಕಾರ್ಯಾಚರಣೆ
- ಅರಣ್ಯ ಸಚಿವರು, ಮುಖ್ಯಮಂತ್ರಿಗಳೊಂದಿಗೆ ಚರ್ಚೆ
- ನ.4ರಂದು ಅರಣ್ಯಾಧಿಕಾರಿಗಳೊಂದಿಗೆ ಬೆಂಗಳೂರಲ್ಲಿ ಸಭೆ



ಮಡಿಕೇರಿ, ಅ.31– 'ಹುಲಿ ಉಗುರು' ಪ್ರಕರಣದ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಸಾಕಷ್ಟು ಗೊಂದಲಗಳು ಉದ್ಭವಿಸಿದ್ದು, ಪಾರಂಪರಿಕವಾಗಿ ಮನೆಗಳಲ್ಲಿ ವನ್ಯಜೀವಿಗಳ ನಾನಾ ಪದಾರ್ಥಗಳಿದ್ದಲ್ಲಿ ಯಾವುದೇ ಸಮಸ್ಯೆ ಇಲ್ಲ. ಇದಕ್ಕೆ ವಿನಾಯಿತಿ ಇದೆ. ಜಿಲ್ಲೆಯ ಜನತೆ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಲಿ ಉಗುರು ಪ್ರಕರಣದ ಬೆನ್ನಲ್ಲೇ ಅರಣ್ಯಾಧಿಕಾರಿಗಳು ●9ನೇ ಪುಟಕ್ಕೆ

ಮಡಿಕೇರಿಯಲ್ಲಿ ಭೂ ಕುಸಿತ; ಮೂವರು ಸಾವು

ಕಾಂಪೌಂಡ್ ನಿರ್ಮಾಣಕ್ಕೆ ಪಾಯ ತೆಗೆಯುತ್ತಿದ್ದಾಗ ದುರಂತ



- ಮೂವರು ಗಾಯಾಳುಗಳು ಆಸ್ಪತ್ರೆಗೆ ದಾಖಲು
- ಸ್ಥಳಕ್ಕೆ ಶಾಸಕರು, ಡಿಸಿ, ಎಸ್ಪಿ, ಜನಪ್ರತಿನಿಧಿಗಳು ಭೇಟಿ
- ನಿರ್ಲಕ್ಷ್ಯದಿಂದ ಅನಾಹುತ; ಪೊಲೀಸ್ ವರಿಷ್ಠಾಧಿಕಾರಿ



ಮಡಿಕೇರಿ, ಅ.31–ನಿರ್ಮಾಣ ಹಂತದ ಕಟ್ಟಡದ ಸುತ್ತ ಕಾಂಪೌಂಡ್ ನಿರ್ಮಾಣಕ್ಕಾಗಿ ಪಾಯ ತೆಗೆಯುತ್ತಿದ್ದ ಸಂದರ್ಭದಲ್ಲಿ ಭೂ ಕುಸಿತದಿಂದ ಮೂವರು ಕಾರ್ಮಿಕರು ಜೀವಂತ ಸಮಾಧಿಯಾದರೆ, ಉಳಿದ ಮೂವರು ಗಾಯಗೊಂಡಿರುವ ಘಟನೆ ಪಟ್ಟಣದ ಸ್ಟುವರ್ಟ್ ಹಿಲ್ ಬಳಿಯ ರೆಡ್‌ಕ್ರಾಸ್ ಕಟ್ಟಡದ ಹಿಂಭಾಗ ಸಂಭವಿಸಿದೆ. ಹುಬ್ಬಳ್ಳಿ ಮೂಲದ ಬಸವ (35), ಲಿಂಗಪ್ಪ (45) ಮತ್ತು ಹಾವೇರಿಯ ಆನಂದ್ (35) ಅವರುಗಳು ಮೃತಪಟ್ಟಿದ್ದು, ಓರ್ವ ಕಾರ್ಮಿಕ ರಾಜು (35)ವನ್ನು ಕಾರ್ಮಿಕರು ರಕ್ಷಿಸಿದ್ದಾರೆ. ಕೆಲಸದಲ್ಲಿ ನಿರತರಾಗಿದ್ದ ಚಿತ್ರದುರ್ಗ ಮೂಲದ ಮಂಜು (38) ಸೇರಿದಂತೆ ಇಬ್ಬರು ಕಾರ್ಮಿಕರಿಗೆ ಸಣ್ಣಪುಟ್ಟ ಗಾಯಗಳಾಗಿ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸ್ಥಳೀಯರು ●9ನೇ ಪುಟಕ್ಕೆ

ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರು ಖದೀಮರ ಬಂಧನ

35 ಲಕ್ಷ ಮೌಲ್ಯದ ಚಿನ್ನಾಭರಣ ವಶ



ಮೈಸೂರು, ಅ.31(ಬಿಎಲ್‌ಯು)– ಮೈಸೂರಿನಲ್ಲಿ ಎರಡು ಪ್ರತ್ಯೇಕ ಕಳ್ಳತನ ಪ್ರಕರಣ ಭೇದಿಸಿರುವ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, 35 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ಒಂದು ಪ್ರಕರಣದಲ್ಲಿ ಆರೋಪಿಯನ್ನು ಮೈಸೂರಿನ ಹನುಮಂತ ಸರ್ಕಲ್ ಬಳಿ ಬಂಧಿಸಿ ವಿಚಾರಣೆ ಮಾಡಲಾಯಿತು. ಆತನ ಅಪರಾಧ ಹಿನ್ನೆಲೆಯನ್ನು ಪರಿಶೀಲಿಸಿದಾಗ ಕೆಲವು ಕಡೆ ಕಳ್ಳತನ ನಡೆಸಿರುವುದು ಬೆಳಕಿಗೆ ಬಂದಿತು. ಆರೋಪಿಯು ನಜರ್‌ಬಾದ್, ಆಲನಹಳ್ಳಿ ಹಾಗೂ ಕುವೆಂಪುನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿರುವುದು ಪತ್ತೆಯಾಯಿತು ಎಂದು ತಿಳಿಸಿದರು.


ಮೂರು ಕಡೆ ಕಳ್ಳತನ ಮಾಡಿದ್ದ ಆರೋಪಿಯಿಂದ 23 ಲಕ್ಷ ರೂಪಾಯಿ ಮೌಲ್ಯದ 402 ಗ್ರಾಂ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಮತ್ತೊಂದು ಪ್ರಕರಣದಲ್ಲಿ ಮೈಸೂರಿನ ರಾಜೀವ್‌ನಗರದ ಸೂರ್ಯ ನಾರಾಯಣ ಸ್ವಾಮಿ ದೇವಸ್ಥಾನದ ಬಳಿ ಒಬ್ಬ ಆರೋಪಿಯನ್ನು ಬಂಧಿಸಿ, ವಿಚಾರಣೆಗೊಳಪಡಿಸಿದಾಗ ಮೈಸೂರಿನ ವಿದ್ಯಾರಣ್ಯಪುರಂ, ದಾವಣಗೆರೆ ಜಿಲ್ಲೆಯ ಹರಿಹರ ನಗರದಲ್ಲಿ ಕಳ್ಳತನ ಮಾಡಿರುವ ಮಾಹಿತಿ ದೊರಕಿತು. ಆರೋಪಿಯಿಂದ 12 ಲಕ್ಷ ರೂಪಾಯಿ ಮೌಲ್ಯದ 20 ಗ್ರಾಂ ಚಿನ್ನಾಭರಣ, 29 ಗ್ರಾಂ ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಮೇಶ್ ಹೇಳಿದರು. ಕಳೆದ ವರ್ಷಕ್ಕೆ ಹೋಲಿಸಿದರೆ ಮೈಸೂರು ನಗರದಲ್ಲಿ ಸರಗಳ್ಳತನ ಪ್ರಕರಣಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. 2022ರಲ್ಲಿ 72 ಸರಗಳ್ಳತನ ಪ್ರಕರಣ ನಡೆದಿತ್ತು. ಈ ವರ್ಷ ಜನವರಿಯಿಂದ ಇಲ್ಲಿ ತನಕ 12 ಸರಗಳ್ಳತನ ಪ್ರಕರಣಗಳು ನಡೆದಿದೆ ಎಂದು ಅಂಕಿ ಅಂಶಗಳ ವಿವರ ನೀಡಿದರು.

ಮೈಸೂರು ದಸರಾ ವೇಳೆ ಡ್ರಗ್ಸ್ ಮಾರಾಟ ಯತ್ನ: ಕೇರಳ ಮೂಲದ ಇಬ್ಬರ ಬಂಧನ

20 ಲಕ್ಷ ಮೌಲ್ಯದ ಎಂಡಿಎಂಎ ಮಾದಕ ವಸ್ತು ವಶ

- ಬಂಧಿತರಲ್ಲಿ ಓರ್ವ ಕಾನೂನು ವಿದ್ಯಾರ್ಥಿ
- 8 ಲಕ್ಷ ಮೌಲ್ಯದ 15 ಕೆ.ಜಿ. ಗಾಂಜಾ ವಶ



ಮೈಸೂರು, ಅ.31(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಸಂದರ್ಭದಲ್ಲಿ ಡ್ರಗ್ಸ್ ಮಾರಾಟಕ್ಕೆ ಯತ್ನಿಸಿದ್ದ ಇಬ್ಬರು ಪೆಡ್ಲರ್‌ಗಳನ್ನು ಬಂಧಿಸಿ 12 ಲಕ್ಷ ರೂ. ಮೌಲ್ಯದ ಎಂಡಿಎಂಎ ಮಾದಕ ವಸ್ತುಗಳನ್ನು ವಶ ಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ಮೈಸೂರು ಪೊಲೀಸ್ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿ ಯಲ್ಲಿ ಈ ವಿಚಾರ ತಿಳಿಸಿದ ಬಿ.ರಮೇಶ್, ಮೈಸೂರಿನ ನಜರ್‌ಬಾದ್‌ನ ಸರ್ಕಾರಿ ಅತಿಥಿ ಗೃಹದ ಕಾಂಪೌಂಡ್ ಬಳಿ ನಿಂತಿದ್ದ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಪ್ರಕರಣ ಬೆಳಕಿಗೆ ಬಂದಿದೆ ಎಂದು ಹೇಳಿದರು.

ಈ ಇಬ್ಬರು ಆರೋಪಿಗಳು ಕೇರಳ ಮೂಲದವರಾಗಿದ್ದು, ಇವರಲ್ಲಿ ಒಬ್ಬ ಕಾನೂನು ವಿದ್ಯಾರ್ಥಿಯಾಗಿದ್ದಾನೆ. ಮುಂಬೈನಲ್ಲಿ ಲೈಟ್ ಮನ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಈಗ ಮೈಸೂರಲ್ಲಿ ವಾಸವಾಗಿದ್ದಾನೆ. ಅವನ ಸಂಪರ್ಕದಿಂದ ಮೈಸೂರಿನಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡಲು ಯೋಜನೆ ರೂಪಿಸಿದ್ದರು. ಬೆಂಗಳೂರಿನಿಂದ ಎಂಡಿಎಂಎ ಮಾದಕ ವಸ್ತು ತಂದು ಮಾರಾಟ ಮಾಡಲು ಯತ್ನಿಸಿರುವುದು ವಿಚಾರಣೆ ವೇಳೆ ತಿಳಿದು ಬಂದಿದೆ ಎಂದು ರಮೇಶ್ ವಿವರಿಸಿದರು. ಮೈಸೂರು ದಸರಾಗೆ ದೇಶ–ವಿದೇಶದಿಂದ ಹೆಚ್ಚು ಜನರು ಬರುತ್ತಾರೆ. ಈ ವೇಳೆ ಸುಲಭವಾಗಿ ಡ್ರಗ್ಸ್ ಮಾರಾಟ ಮಾಡಿ ಹಣ ಗಳಿಸಬಹುದು ಎಂಬ ಲೆಕ್ಕಾಚಾರ ಇಟ್ಟುಕೊಂಡು ಕೇರಳದಿಂದ ಮೈಸೂರಿಗೆ ಬಂದಿದ್ದರು ಎಂದರು. ಇಬ್ಬರು ಆರೋಪಿಗಳಿಂದ 12 ಲಕ್ಷ ರೂಪಾಯಿ ಮೌಲ್ಯದ ●9ನೇ ಪುಟಕ್ಕೆ

ಕೋಮಾಗೆ ತಳ್ಳುವ ಇಲ್ಲವೇ ಪ್ರಾಣಕ್ಕೆ ಕುತ್ತು ತರುವ ಎಂಡಿಎಂಎ

ಮೈಸೂರು ನಗರದಲ್ಲಿ ಇದೇ ಮೊದಲ ಬಾರಿಗೆ ದುಬಾರಿ ಬೆಲೆಯ, ಅತ್ಯಧಿಕ ನಶೆ ಬರಿಸುವ ಎಂಡಿಎಂಎ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ.

ಡ್ರಗ್ಸ್‌ಗಳಲ್ಲಿ ಎಂಡಿಎಂಎ ಹೆಚ್ಚು ನಶೆ ಬರಿಸುವ ಮಾದಕ ವಸ್ತುವಾಗಿದೆ. ಇದನ್ನು ಒಂದು ಗ್ರಾಂಗೆ 5,500 ರೂಪಾಯಿಗೆ ಮಾರಾಟ ಮಾಡಲಾಗುತ್ತದೆ. ಎಂಡಿಎಂಎ ಡ್ರಗ್ಸ್ ಖರೀದಿಸುವ ವ್ಯಕ್ತಿ ಒಂದೇ ಬಾರಿ ಒಂದು ಗ್ರಾಂ ಸೇವಿಸಲು ಸಾಧ್ಯವಿಲ್ಲ. ಒಂದು ವೇಳೆ ಒಂದು ಗ್ರಾಂ ಒಟ್ಟಿಗೆ ಸೇವಿಸಿದರೆ ಅಧಿಕ ನಶೆಯಿಂದ ಸಾಮಾನ್ಯ ಸ್ಥಿತಿಗೆ ಬರುವುದು ಹಲವು ಗಂಟೆಗಳಾಗುತ್ತದೆ. ದೈಹಿಕ ಸಾಮರ್ಥ್ಯವಿಲ್ಲದ ಕೆಲವರು ಒಂದು ಗ್ರಾಂ ಒಟ್ಟಿಗೆ ಸೇವಿಸಿದರೆ ಕೋಮಾಗೆ ಹೋಗಬಹುದು. ಇಲ್ಲವೇ ಸಾವಿಗೀಡಾಗುವ ●9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ಎಲ್ಲಾ ಮದುವೆಗಳಲ್ಲಿ ವಧು ಎಡಗಡೆಗೆ ಮತ್ತು ವರ ಬಲಗಡೆಗೆ ಯಾಕೆ ಕೂತಿರುತ್ತಾರೆ?"

ಗಂಡ : "ಲಾಭ ಮತ್ತು ನಷ್ಟದ ಸ್ಟೇಟ್‌ಮೆಂಟ್ ಅಕೌಂಟ್ಸ್‌ನ ಪ್ರಕಾರ ಎಲ್ಲಾ ಆದಾಯ ಬಲ ಬದಿಗೆ ಇರುತ್ತದೆ ಮತ್ತು ಖರ್ಚುಗಳು ಎಡ ಬದಿಗೆ ಇರುತ್ತದೆ ಅದಕ್ಕೆ!"

ಮೈಸೂರು ಮಿತ್ರ

ಬುಧವಾರ, 1 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಎಲ್ಲಾ ಮಹಾನ್ ಸಾಧನೆಗಳು ದಿಢೀರ್ ಎಂದು ಆಗುವುದಿಲ್ಲ. ಸಾಕಷ್ಟು ಸಮಯ ಬೇಕಾಗುತ್ತದೆ. ತಾಳ್ಮೆ ಮುಖ್ಯ. – ಮಾಯಾ ಏಂಜೆಲೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಗ ಸಣ್ಣವನಾದರೂ, ಮಾತು ಸಣ್ಣದಲ್ಲ

ನಿಮ್ಮ ಪತ್ರಗಳು

ನದಿ ಮೂಲ, ಋಷಿ ಮೂಲ ಉಗುರು ಮೂಲ!

ಮಾನ್ಯರೆ,

ಹುಲಿಯುಗುರಿನ ಪ್ರಕರಣಗಳು ತಾರ್ಕಿಕ ಅಂತ್ಯ ಕಾಣಲು ಸಾಧ್ಯವಿಲ್ಲ. ಹುಲಿಯುಗುರಿನ ಮೂಲವನ್ನು ಕೆದಕುತ್ತಾ ಹೋದರೆ ಅದು ಅರಣ್ಯಾಧಿಕಾರಿಗಳ ಬುಡಕ್ಕೇ ಬಂದು ನಿಲ್ಲುತ್ತದೆ. ಹುಲಿ, ಸಿಂಹ ಆನೆ ಮುಂತಾದ ಹಲವಾರು ವನ್ಯಮೃಗಗಳು ನಾನಾ ಕಾರಣಗಳಿಂದ ಅರಣ್ಯದಲ್ಲಿ ಅಸುನೀಗಿರುತ್ತವೆ. ಅಂತಹ ಮೃಗಗಳ ಮೃತದೇಹವನ್ನು ಅರಣ್ಯದಲ್ಲಿ ಮಣ್ಣಾಗಿಸುವ ಮುನ್ನ ಅರಣ್ಯ ಇಲಾಖೆಯವರೇ ಆ ಮೃತದೇಹಗಳ ಉಗುರುಗಳನ್ನು ತೆಗೆದು ತಮಗಿಷ್ಟಬಂದವರಿಗೆ ಹಸ್ತಾಂತರಿಸಿರುತ್ತಾರೆ. ಇಂತಹ ಉಗುರುಗಳು ಕೈಬದಲಾಯಿಸುತ್ತಾ ಸೆಲೆಬ್ರಿಟಿಗಳ ಕೊರಳನ್ನಲಂಕರಿಸಿರುತ್ತವೆ.

ಈ ಪ್ರಕರಣದ ತನಿಖೆಯು ಸಮರ್ಪಕವಾಗಿ ನಡೆದರೆ ಅರಣ್ಯಾಧಿಕಾರಿಗಳು ಜೈಲುಪಾಲಾಗುವುದರಲ್ಲಿ ಸಂಶಯವಿಲ್ಲ. ಈ ಕಾರಣದಿಂದ ಅರಣ್ಯಾಧಿಕಾರಿಗಳು ಹುಲಿಯುಗುರಿನ ಮೂಲವನ್ನು ಕಂಡುಹಿಡಿಯಲು ಪ್ರಯತ್ನ ಪಡುವುದಿಲ್ಲ. ಇದು ನದಿ ಮೂಲ, ಋಷಿ ಮೂಲ ಹುಡುಕಿದಂತಾಗುತ್ತದೆ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಅರ್ಹರನ್ನು ಗುರುತಿಸಿ ಪ್ರಶಸ್ತಿ ನೀಡಲಿ

ಮಾನ್ಯರೆ,

2023 ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಗಣ್ಯರಿಗೆ ನೀಡಲು ಸಾರ್ವಜನಿಕರಿಂದ ಅರ್ಜಿ ಸಲ್ಲಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ ಹೊರಡಿಸಿತ್ತು,

ಪ್ರಶಸ್ತಿಗಾಗಿ ಸುಮಾರು 20 ಸಾವಿರ ಅರ್ಜಿಗಳು ಬಂದಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಬೇಕಾದ್ದು ಸರ್ಕಾರದ ಕೆಲಸವಾಗಬೇಕಿತ್ತು. ಅದು ಬಿಟ್ಟು ನೀವು ಪ್ರಶಸ್ತಿಗಾಗಿ ಅರ್ಜಿ ಹಾಕಿಕೊಳ್ಳಿ ಎಂದು ಹೇಳುವುದು. ಸಾಧಕರನ್ನು ಭಿಕ್ಷುಕರನ್ನಾಗಿ ಮಾಡುವ ಸರ್ಕಾರದ ಕೆಲಸ ಎಷ್ಟರ ಮಟ್ಟಿಗೆ ಸರಿ ಎನಿಸುತ್ತದೆ.

68 ಜನರಿಗೆ ಈ ವರ್ಷ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡುವುದಾಗಿ ಸರ್ಕಾರ ಹೇಳಿದೆ. ಅಂದರೆ ಸುಮಾರು 400 ಅರ್ಜಿಗೆ ಒಬ್ಬರನ್ನು ಆಯ್ಕೆ ಮಾಡುವ ಕಸರತ್ತು ಆಯ್ಕೆ ಸಮಿತಿಯದು.

ಇಲ್ಲೂ ರಾಜಕೀಯ ಲಾಬಿ, ಮತ್ತು ಜಾತಿಯಂತಹ ವಿಷಯಗಳು ಪ್ರಬಲವಾಗಿ ಕೆಲಸ ಮಾಡುವುದರಿಂದ, ಅರ್ಹರಿಗೆ ಪ್ರಶಸ್ತಿ ಸಿಗದೇ ಹೋಗಬಹುದು ಮತ್ತು ಪ್ರಶಸ್ತಿ ಪಡೆದವರಲ್ಲಿ ರಾಜಕೀಯ ವಾಸನೆ ಇದ್ದೇ ಇರುತ್ತದೆ.

–ಬೂಕನಕೆರೆ ವಿಜೇಂದ್ರ, ಲೇಖಕರು, ಮೈಸೂರು

ರಾಜಕಾರಣಿಗಳು, ಸೆಲೆಬ್ರಿಟಿಗಳು ನಕಲಿ ಹುಲಿ ಉಗುರು ಧರಿಸುವರೇ?

ಮಾನ್ಯರೆ,

ಬಿಗ್‌ಬಾಸ್‌ನಲ್ಲಿದ್ದ ವರ್ತೂರು ಸಂತೋಷ್ ಎಂಬ ರೈತ ಸ್ಪರ್ಧಿಯ ಕೊರಳಿನಲ್ಲಿದ್ದ ಹುಲಿ ಉಗುರಿನ ಚಿನ್ನದ ಲಾಕೆಟ್ ಗಮನಿಸಿ, (ರೈತರೂ ಈ ರೀತಿಯಾಗಿ ಚಿನ್ನದ ಭಾರೀ ಗಾತ್ರದ ಸರಗಳು, ಲಾಕೆಟ್, ಉಂಗುರ, ಬ್ರೇಸ್ಲೇಟ್, ಕಡಗ ಧರಿಸಿರುತ್ತಾರೆ ಎನ್ನುವುದನ್ನು ಮಾಧ್ಯಮಗಳಲ್ಲಿ ಅವರ ಚಿತ್ರ ನೋಡಿದಾಗಲೇ ನನಗೆ ತಿಳಿದದ್ದು!!) ಅವರನ್ನು ಅರಣ್ಯ ಇಲಾಖೆ ಸಿಬ್ಬಂದಿ ಬಂಧಿಸಿದ್ದು ಬಾರಿ ಸುದ್ದಿ ಮಾಡುತ್ತಿದೆ.

ಅನಂತರ ಈ ರೀತಿ ಚಿನ್ನದ ಸರಕ್ಕೆ ಹುಲಿ ಉಗುರಿನ ಲಾಕೆಟ್ ಧರಿದ್ದವರೆಲ್ಲ ಈಗ ಇದು ಪ್ಲಾಸ್ಟಿಕ್, ಕೃತಕ ಎಂದು ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಪುಣ್ಯಕ್ಕೆ ಇದು ಹುಲಿ ಉಗುರಲ್ಲ. ನಾನು ಪ್ರತಿದಿನ ಲಾಕೆಟ್‌ಗೆ ಬೆಳ್ಳುಳ್ಳಿ ಬೇಳೆಯನ್ನು ಲಾಕ್ ಮಾಡಿಕೊಂಡು ಹಾಕಿಕೊಳ್ಳುತ್ತೇನೆ. ಇದು ಬೆಳ್ಳುಳ್ಳಿ ಬೆಳೆಯೇ ಬೇಕಾದರೆ ಅರಣ್ಯ ಇಲಾಖೆ ಸಿಬ್ಬಂದಿ ಬಂದು ಪರಿಶೀಲಿಸಲಿ ಎಂದು ಯಾರೂ ಹೇಳಿಕೆ ನೀಡಿಲ್ಲ!

ಹುಲಿ ಉಗುರಿನ ಬೆಲೆ ಏನು? ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಅರಣ್ಯ ಕಾಯಿದೆ ಪ್ರಕಾರ ಅದನ್ನು ಹಾಕಿಕೊಳ್ಳುವುದು ಅಪರಾಧ ಎಂದಿದ್ದ ಮೇಲೆ ಅದು ಕಳ್ಳ ಬೇಟೆಗಾರರ ಮೂಲಕ ಕಳ್ಳ ಮಾರ್ಗದಲ್ಲಿಯೇ ಅದು ಬಯಸಿದವರಿಗೆ ತಲುಪುತ್ತದೆ. ವಿಐಪಿ ಜನರೇ ಇದನ್ನು ಪೈಪೋಟಿಯಲ್ಲಿ ಧರಿಸಿರುವುದನ್ನು ನೋಡಿದರೆ ಇದು ಜೋತಿಷ್ಯಗಾರರ, ಜ್ಯುವೆಲರಿ ವ್ಯಾಪಾರಸ್ಥರ ಸಂಬಂಧ ವ್ಯವಹಾರಕ್ಕೆ ತಳುಕು ಹಾಕಿಕೊಂಡಿರುವಂತೆ ಕಾಣುತ್ತದೆ.

ಇದೀಗ ಅನೇಕ ವಿಐಪಿಗಳು ಇದು ಹುಲಿ ಉಗುರಲ್ಲ, ಇದು ಕೃತಕ ಎಂದು ಹೇಳಿ ದ್ದಾರೆ. ಆದರೆ ಪ್ಲಾಸ್ಟಿಕ್ ಹುಲಿ ಉಗುರಿನ ಲಾಕೆಟ್ ಧರಿಸಲು ಈ ವಿಐಪಿ ಜನರೇನು ಬುದ್ಧಿಯಿಲ್ಲದವರೇ? ಎಂಬ ಅನುಮಾನ ಕಾಡುತ್ತದೆ.

ಅದೇನೇ ಇರಲಿ ಇನ್ನು ಮುಂದಾದರೂ ಈ ರೀತಿ, ಹುಲಿ, ಆನೆ, ನವಿಲು ಮುಂತಾದ ಪ್ರಾಣಿಗಳನ್ನು ಕಳ್ಳ ಬೇಟೆಯಾಡಿ ಪ್ರಾಣಿಗಳ ಅಂಗಗಳನ್ನು ಮಾರಾಟ ಮಾಡುವ ದಂಧೆಗೆ ಕಡಿವಾಣ ಬೀಳಬಹುದೆಂದು ಆಶೀಸೋಣ.

ಅಂದ ಹಾಗೆ ಕಾಡು ಪ್ರಾಣಿಗಳ ಕಳ್ಳಬೇಟೆಯಾಡಿ ಅಂಗಾಂಗ ಮಾರಾಟ ಮಾಡುವ ಇಂತಹ ದಂಧೆ ಕಾಯಿದೆ ಜಾರಿಯಾದ ಹಲವು ದಶಕಗಳ ನಂತರವೂ ನಡೆಯುತ್ತಿದ್ದರೂ, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ, ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುವಂತೆ ಅತ್ಯುತ್ತಮವಾಗಿಯೇ ನಟಿಸಿವೆ ಎನ್ನುವುದು ಕೂಡ ವಾಸ್ತವವೇ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಐ–ಹನಿ

ಮಾನ್ಯರೆ,

1. **ನಿಧನ–ವಿದಾಯ :** ಬೆಳಗ್ಗೆ ಪತ್ರಿಕೆ ಬಂದ ಕೂಡಲೇ ನಾನು ಮೊದಲು 'ನೋಡು'ವುದು 'ನಿಧನ ವಾರ್ತೆ'ಗಳನ್ನು (ನಿರ್ಗಮಿತರಿಗೆ ವಿದಾಯ ಹೇಳುವುದು ಕರ್ತವ್ಯ). ಆಮೇಲೆ ಓದುವುದು ನಿರ್ಧನದ, ಸ–ಧನದ ಸುದ್ದಿಗಳನ್ನು!

2. **ವಾದ್ಯ :** ಸ್ಯಾಕ್ಸೋಫೋನ್ ಎಂಬುದೊಂದು ವಾದ್ಯ. ಆದರೆ ಜನಜೀವನದಲ್ಲಿ ಬಹುತೇಕ ಸದ್ದು ಮಾಡುವುದು 'ಸೆಕ್ಸೋಫೋನ್' ಎನ್ನಬಹುದೆ? (ಪರೋಕ್ಷವಾಗಿ ಇಲ್ಲವೆ ಪ್ರತ್ಯಕ್ಷವಾಗಿ).

3. **ಮೆಂಟಲ್ :** ಪ್ರೊ. ಕೆ.ಎಸ್. ಭಗವಾನರಿಗೆ ಏನಾಗಿದೆ? ಕೆಲವರು ಆರೋಪಿಸುವಂತೆ, ಅವರು 'ಮೆಂಟಲ್ ಗಿರಾಕಿ' ಇರಬಹುದೆ? ('ಸೆಂಟಿಮೆಂಟಲ್' ಅಲ್ಲ!)

4. **ಹಣೆಬರಹ :** ಇತ್ತೀಚೆಗೆ ಒಡಿಷಾ ರಾಜ್ಯಕ್ಕೆ ಹೋಗಿದ್ದೆ. ಅಲ್ಲೂ ಕರ್ನಾಟಕದ್ದೇ 'ಹಣೆಬರಹ' : ಬಹುಪಾಲು ನಾಮಫಲಕಗಳು ಇಂಗ್ಲಿಷಿನಲ್ಲಿ ! ಆಹಾ! ಆಂಗ್ಲ ಮೋಹವೇ!

5. **ಸವ್ಯಸಾಚಿ :** ಮಾನ್ಯ ಕೆ.ಬಿ. ಗಣಪತಿಯವರಿಗೆ ಹಾರ್ದಿಕ ಅಭಿನಂ(ವಂ)ದನೆಗಳು! (ರಘು ಲೇಖನ ಸ್ತುತ್ಯ). ಅಂತೂ 'ಸವ್ಯಸಾಚಿ' ಕೆಬಿಜಿ!

–ಸಿಪಿಕೆ, ಹಿರಿಯ ಸಾಹಿತಿಗಳು

ಸಮಯೋಚಿತ



ಜೆ.ಬಿ. ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ : 94490–10009

ಕಗ್ಗಂಟಾಗಿದ್ದ 'ಕರ್ನಾಟಕ'!; ಅರಸು ಕನಸು ಅಂತೂ ನನಸು





> ಒಂದೇ ಒಂದು ವಿರೋಧವಿಲ್ಲದೆ ಕರ್ನಾಟಕ ರಾಜ್ಯ ಹೆಸರು ಅಂಗೀಕಾರವಾಯಿತು. 1–11–1973ರಲ್ಲಿ ನಾಮಕರಣವಾಯಿತು. ಅಂದೇ ಕನ್ನಡ ರಾಜ್ಯೋತ್ಸವ ನಡೆಯಿತು. ನಂತರದಲ್ಲಿ ಕನ್ನಡವೇ ಆಡಳಿತ ಭಾಷೆಯೆಂದು ಘೋಷಿಸಿದವರೂ ಅವರೇ. ನಾನಾ ವಿರೋಧಗಳ ನಡುವೆ ಕರ್ನಾಟಕ ರಾಜ್ಯವೆಂಬ ಶಾಶ್ವತ ಹೆಸರನ್ನಿಟ್ಟು, ಅಖಂಡ ಕರ್ನಾಟಕವನ್ನು ರೂಪಿಸಿದ ಕೀರ್ತಿ ಶ್ರೀ ದೇವರಾಜ ಅರಸ್‌ರದ್ದು. ಅವರನ್ನು ಸ್ಮರಿಸಬೇಕಾದದ್ದು ಅವರಿಗೆ ಮಾಡುವ ಮೆಹರ್ಬಾನಿಯಲ್ಲ. ನಾವು ಸಲ್ಲಿಸಬೇಕಾದ ಕೃತಜ್ಞತೆ.

ಕರ್ನಾಟಕ ಸಂಭ್ರಮ–50ರ ಹೊಸ್ತಿಲಲ್ಲಿ ಕರ್ನಾಟಕವೆಂಬ ಹೆಸರನ್ನು 'ಅಣ್ಣ ಬಸವಣ್ಣನ ನಾಡು' ಎಂದು ಬದಲಾಯಿಸಿ! ಎಂದು ಕೆಲ ಸಚಿವರು, ಮಠಾಧೀಶರು ಮತ್ತು ಸಾಹಿತಿಗಳು ಒತ್ತಾಯಿಸಿದ್ದಾರೆ.

ಅಣ್ಣ ಬಸವಣ್ಣನವರ ಹೆಸರು ವಿಶ್ವಮಾನ್ಯ. ಅವರ ಸಂದೇಶ ವಿಶ್ವ ಕುಲಕೋಟಿಗೇ ಅನ್ವಯ. ಇಂತಹವರ ತತ್ವಗಳನ್ನು ಚಿರಸ್ಥಾಯಿಗೊಳಿಸಬಲ್ಲ ಅನೇಕ ಸರ್ವೋತ್ತಮ ಮಾರ್ಗಗಳಿವೆ. ಬಸವಣ್ಣನವರ ವಿಶ್ವ ಶ್ರೇಷ್ಠತೆಯನ್ನು ಪ್ರಾದೇಶಿಕ ಮಟ್ಟಕ್ಕೆ ಇಳಿಸುವುದು ಥರವೇ?

ಈ ಹಿಂದೆಯೂ ಮೈಸೂರು ರಾಜ್ಯದ ಹೆಸರನ್ನು ಬದಲಾಯಿಸಲು ನೂರಾರು ಹೊಸ ಹೆಸರುಗಳು ಚರ್ಚೆಯಲ್ಲಿದ್ದವು. 1956ರ ಕರ್ನಾಟಕ ಏಕೀಕರಣದ ನಂತರ ಹೊಸ ಹೆಸರು ನೀಡಲು ಸಾವಿರ ಸಲಹೆಗಳು ಬಂದಿದ್ದವು. ಬರೀ ಚರ್ಚೆ, ವಾಗ್ವಾದಗಳಲ್ಲೇ ಎರಡು ದಶಕಗಳು ಸವೆದಿದ್ದವು. ಆದರೂ ಒಮ್ಮತದ ನಿರ್ಧಾರ ಕಾಣದೆ ಹೊಸ ಹೆಸರನ್ನಿಡಲು ಸಾಧ್ಯವಾಗಿರಲಿಲ್ಲ. ಯಾವ ಹೆಸರೊಂದನ್ನು ಅಧ್ಯಯನಪೂರ್ಣವಾಗಿ ಮಂಡಿಸಿದರೂ ಇನ್ನೊಂದು ಪಂಥದವರು ಒಪ್ಪುವ ಮಾತೇ ಇಲ್ಲ. ತಾವು ಹೇಳಿದ್ದೇ ನಡೆಯಬೇಕೆಂಬ ಹಠ. ಎಲ್ಲಕ್ಕೂ ಚರ್ಚೆ, ಮರು ಚರ್ಚೆ, ವಾಗ್ವಾದ, ವಾಕ್ಸಮರಗಳೇ ನಡೆದು ಹೋಗಿದ್ದವು.

ಗಟ್ಟಿ ದನಿಯಲ್ಲಿ ಹೊಸ ಹೆಸರಿಗಾಗಿ ಒತ್ತಾಯಿಸುತ್ತಿದ್ದ ಕನ್ನಡದ ಕಟ್ಟಾಳುಗಳಾದ ಅನಕೃ, ಮ. ರಾಮಮೂರ್ತಿ ಮುಂತಾದವರು ಅದಾಗಲೇ ಅಸ್ತಂಗತರಾಗಿದ್ದರು. ದನಿ ಎತ್ತುವ ಧೀರರೂ ಇರಲಿಲ್ಲ.

1972ರ ಅದೊಂದು ದಿನ ಮುಖ್ಯಮಂತ್ರಿ ದೇವರಾಜ ಅರಸರು ಮೈಸೂರಿನ ಜಲದರ್ಶಿನಿಯಲ್ಲಿ ತಂಗಿದ್ದರು. ವಿಷಯ ತಿಳಿದ ಸಾಹಿತಿ ತರಾಸು ಅವರು ಲೇಖಕ ಡಾ.ಎಂಜಿಆರ್ ಅರಸ್‌ರೊಂದಿಗೆ ಮುಖ್ಯಮಂತ್ರಿಗಳನ್ನು ಖುದ್ದಾಗಿ ಕಂಡು ಮನವಿ ಪತ್ರ ಕೊಟ್ಟರು.

"ಇನ್ನೇನು ಕೆಲವಾರು ತಿಂಗಳಲ್ಲಿ ಸ್ವಾತಂತ್ರ್ಯ ಬಂದು ಇಪ್ಪತ್ತೈದು ವರ್ಷ ತುಂಬುತ್ತಿದೆ (1973). ಈ ವೇಳೆಯಲ್ಲಾದರೂ ಮೈಸೂರು ರಾಜ್ಯಕ್ಕೆ ಹೊಸ ಹೆಸರಾಗಬೇಕು. ಈಗ ಆಗದಿದ್ದರೆ ಇನ್ನೆಂದೂ ಆಗುವುದಿಲ್ಲ. ಒಣಚರ್ಚೆಯ ಪ್ರಹಸನಗಳು ಮುಂದುವರೆಯುತ್ತಾ ಹೋಗುತ್ತದೆ. ನಿಮ್ಮ ಸಂಪುಟಕ್ಕೆ ಸರಿತೋರಿದ ಯಾವ ಹೆಸರನ್ನಾದರೂ ಚರ್ಚಿಸಿ ಇಡಿ. ಅಭ್ಯಂತರವಿಲ್ಲ. ಒಟ್ಟಾರೆ 1973ರ ಆಗಸ್ಟ್ 15 ರೊಳಗೆ ನಿಮ್ಮ ತೀರ್ಮಾನ ಪ್ರಕಟವಾಗಬೇಕು. ಈ ಕೆಲಸವು ನಿಮ್ಮಿಂದಲ್ಲದೆ ಬೇರ‍್ಯಾರಿಂದಲೂ ಸಾಧ್ಯವಾಗದು" ಎಂದು ಕೇಳಿಕೊಂಡರು.

ನಾಲ್ಕಾರು ಪುಟವಿದ್ದ ಮನವಿ ಪತ್ರವನ್ನು ಓದಿ ಅರಸ್ ಚಕಿತಗೊಂಡರು. ಎಲ್ಲ ಹೊಸ ಹೆಸರುಗಳನ್ನೂ ಪ್ರಸ್ತಾಪಿಸಿದ್ದ ತರಾಸು ಯಾವ ಹೆಸರಿಟ್ಟರೆ ಸೂಕ್ತ ಮತ್ತು ಬಳಕೆಗೆ ಸುಲಭ ಎಂಬುದನ್ನು ನಿರೂಪಿಸಿದ್ದರು. ಅರಸು ಅವರ ಮನದಲ್ಲಿ ಆಗಲೇ ಹೊಸ ಸಂಕಲ್ಪವೊಂದು ಮೂಡಿತ್ತು. ತರಾಸುರೊಂದಿಗೆ ಕೆಲ ಕಾಲ ಚರ್ಚಿಸಿ ನೀವು ಸೂಚಿಸಿರುವ ಎರಡು ಹೆಸರುಗಳಲ್ಲಿ ಒಂದನ್ನು ಅಂತಿಮಗೊಳಿಸುವುದಂತೂ ನಿಶ್ಚಿತ ಎಂದು ಹೇಳಿ ಬೀಳ್ಕೊಂಡರು.

ಈ ವಿವಾದವನ್ನು ಬೇಗನೆ ಕೊನೆಗೊಳಿಸಿ ಶಾಶ್ವತವಾದ ಹೆಸರನ್ನಿಡುವುದು ಅತ್ಯಗತ್ಯವಾಗಿತ್ತು. ಇಪ್ಪತ್ತೈದನೇ ಸ್ವಾತಂತ್ರ್ಯೋತ್ಸವ ಬೇರೆ ಹತ್ತಿರವಾಗುತ್ತಿದೆ. ಅದಾಗಲೇ ಅನೇಕ ರಾಜ್ಯಗಳೂ ಹೊಸ ನಾಮಕರಣ ಮಾಡಿಕೊಂಡಿವೆ. ತಡ ಮಾಡುವಂತಿಲ್ಲ. ಆದರೆ ಶಾಸನ ಸಭೆಯ ಒಪ್ಪಿಗೆ ಪಡೆಯದೆ ಮುಂದುವರೆಯುವಂತಿಲ್ಲ.

ಒಂದೆರಡು ತಿಂಗಳಲ್ಲಿ ಅಂದರೆ ದಿನಾಂಕ 27–07–1972 ರಂದು ಶಾಸನ ಸಭೆಯಲ್ಲಿ ಒಂದು ಠರಾವನ್ನು ಮಂಡಿಸಿದರು ದೇವರಾಜ ಅರಸರು. ಅದನ್ನು ಓದಿದ ತರಾಸು ಅವರ ಆನಂದಕ್ಕೆ ಪಾರವೇ ಇಲ್ಲದಾಯಿತು. ಇಡೀ ಸದನ ಠರಾವನ್ನು ಒಕ್ಕೊರಲಿನಿಂದ ಅನುಮೋದಿಸಿತು. ನಂತರ 1–11–1973 ರಂದು ಅವಿರೋಧವಾಗಿ ಅನುಷ್ಠಾನಕ್ಕೆ ಬಂದ ಹೆಸರು **ಕರ್ನಾಟಕ!**

ಅದರ ಮುಂದಿನ ಹೆಜ್ಜೆಯಾಗಿ ಕನ್ನಡವೇ ಆಡಳಿತ ಭಾಷೆಯೆಂದು ದೇವರಾಜ ಅರಸರು ಘೋಷಿಸಿದರು.

ಈಗ ಸ್ವಾತಂತ್ರ್ಯ ಸಂಭ್ರಮ–50 ನಡೆಯುತ್ತಿದೆ. ಈ ಸಮಯದಲ್ಲಿ ಇಷ್ಟೆಲ್ಲ ವಿರೋಧ –ಪ್ರತಿರೋಧಗಳ ಸಮನ್ವಯ ಮಾಡಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನನೆಗುದಿಗೆ ಬಿದ್ದಿದ್ದ ಕರ್ನಾಟಕ ಎಂಬ ಹೆಸರನ್ನು ಖಾಯಂಗೊಳಿಸಿದ ವ್ಯಕ್ತಿಯನ್ನೇ ಯಾಕೋ ಮರೆತಂತೆ ಕಾಣುತ್ತದೆ.

ಕರ್ನಾಟಕದ ಮೊದಲ ಮುಖ್ಯಮಂತ್ರಿ ಯಾರು? ವಿಧಾನ ಸೌಧದ ನಿರ್ಮಾತೃ ಯಾರು? ಮೊದಲ ಕನ್ನಡಿಗ ಪ್ರಧಾನಿ ಯಾರು? ಎಂದೊಡನೆ ಹೆಸರುಗಳು ಫಕ್ಕನೆ ಹೊಳೆಯುತ್ತವೆ. ಕರ್ನಾಟಕ ಎಂಬ ಹೆಸರನ್ನು ಅಧಿಕೃತಗೊಳಿಸಿದವರು ಯಾರು ಎಂದರೆ ಅನೇಕರು ಗೊಂದಲಗೊಳ್ಳುತ್ತಾರೆ. ಯಾರು? ಎಂದು ಮರು ಪ್ರಶ್ನಿಸುತ್ತಾರೆ. ಬಹುಶಃ ಆ ಹೆಸರನ್ನು ಎಲ್ಲರೂ ಒಮ್ಮತದಿಂದ ಒಪ್ಪುವಂತೆ ಶ್ರಮಿಸಿದ ವ್ಯಕ್ತಿ ಯಾರು ಎಂಬುದು ಪ್ರಶ್ನಾರ್ಥಕವಾಗಿ ಉಳಿಯಬಾರದು.

ವೈಯಕ್ತಿಕವಾಗಿ ನೋಡಿದರೆ ಅರಸರ ಮೊದಲ ಒಲವು ಇದ್ದದ್ದು ಅದೇ ಹಳೇ ಮೈಸೂರೆಂಬ ಹೆಸರಿನ ಮೇಲೆ. ತಾವು ಹುಟ್ಟಿ ಬೆಳೆದ ಪ್ರದೇಶವೆಂಬ ಮಮತೆ ಅವರಿಗೆ. ಹಿಂದೊಮ್ಮೆ ಶ್ರೀರಂಗಪಟ್ಟಣದಲ್ಲಿ ಅದೇ ಸಂಗತಿ ಹೇಳಿ ತೀವ್ರ ವಿವಾದಕ್ಕೀಡಾಗಿದ್ದರು. ವಿರೋಧಗಳು ಹೆಚ್ಚಾದಾಗ ತಮ್ಮ ಸ್ವಂತದ ಒಲವನ್ನು ಮರೆತರು. ಕರ್ನಾಟಕ ಹೆಸರಿನ ಐತಿಹಾಸಿಕ ಮಹತ್ವವನ್ನು ಮನಗಂಡು ಅದೇ ಹೆಸರನ್ನು ಅನುಷ್ಠಾನಕ್ಕೆ ತಂದರು.

ಶಾಸನ ಸಭೆಯಲ್ಲಿ ಠರಾವನ್ನು ಮಂಡಿಸುವಾಗ ವಿವಾದಿತ ಅಂಶಗಳನ್ನೆಲ್ಲಾ ಪ್ರಸ್ತಾಪಿಸಿ ಅದ್ಭುತವಾದ ಭಾಷಣವನ್ನು ಮಾಡಿದರು. "ಈವರೆಗಿನ ನಾನಾ ಚರ್ಚೆಗಳಿಂದ ನಾನು ಅರಿತಿರುವಂತೆ, ಇದರಲ್ಲಿ ಇನ್ನು ಮುಂದೆ ಯಾವುದೇ ಚರ್ಚೆಗೂ ಅವಕಾಶವಿಲ್ಲ. ಅದೀಗ ಬೇಕೂ ಇಲ್ಲ. ಬದಲಾವಣೆಯನ್ನು ಮಾಡಬೇಕು ಎಂದರೆ ಕರ್ನಾಟಕ ಒಂದೇ ಮಾಡಬೇಕು ಎಂಬ ನಿರ್ಣಯವನ್ನು ಇಂದು ಮಂಡಿಸಿದ್ದೇನೆ. ಕರ್ನಾಟಕ ಎಂಬ ಹೆಸರನ್ನು ನಮ್ಮ ನಾಡಿನ ರಾಜರುಗಳು ಹೆಮ್ಮೆಯಿಂದ ಉಪಯೋಗಿಸುತ್ತಿದ್ದರು. ಇದರಂತೆ ವಿಜಯನಗರದ ರಾಜರು, ಹೊಯ್ಸಳರು, ಕದಂಬರು ಮೊದಲಾದವರೂ ಕರ್ನಾಟಕ ಸಿಂಹಾಸನಾಧೀಶ್ವರರೇ! ಹೀಗೆ ಕರ್ನಾಟಕವೆಂಬ ಹೆಸರು ಪ್ರಾಚೀನ ಕಾಲದಿಂದ ಒಂದಲ್ಲ ಒಂದು ಬಗೆಯಲ್ಲಿ ಬಳಕೆಯಲ್ಲಿ ಬರುತ್ತಲೇ ಇತ್ತು. ಬಹಳಷ್ಟು ಸಾಹಿತಿಗಳು, ಭಾಷಾ ವಿದ್ವಾಂಸರುಗಳು ಅಭಿಪ್ರಾಯಪಟ್ಟಂತೆ ಕರ್ಣಾಟಕವೂ ಸರಿಯೇ. ಮೈಸೂರು ಕನ್ನಡನಾಡು, ಮೈಸೂರು ಕರ್ನಾಟಕ ಎಂದಿಟ್ಟರೆ ಸೂಕ್ತವೇ? ಎಂದು ವಿಫುಲವಾದ ಚರ್ಚೆ ಕೊನೆ ಮೊದಲಿಲ್ಲದೆ ನಡೆಯುತ್ತಲೇ ಇತ್ತು. ಇದು ಎಲ್ಲಿಯವರೆಗೆ ಹೋಯಿತೆಂದರೆ, ತಿರುಪತಿ ದೇವಾಲಯದಲ್ಲಿದ್ದ ತಿಮ್ಮಪ್ಪನ ಆನೆಗೆ ಹಾಕುವ ನಾಮ ತೆಂಕಲಗ ಶೇಪ್ ಇರಬೇಕೇ? ಅಥವಾ ಬಡಗಲಗಿ ಇರಬೇಕೇ ಎಂದು ಸುಪ್ರೀಂವರೆಗೆ ಹೋಗಿ ತೀರ್ಮಾನವಾಗುವ ಮೊದಲೇ ಆ ಆನೆಯೇ ಸತ್ತು ಹೋಯಿತು. ಆ ರೀತಿ ಆಗುವುದು ಬೇಡ. ದಿನ ಬಳಕೆಗೆ ಕರ್ನಾಟಕ ಎನ್ನುವುದು ಹೆಚ್ಚು ಸುಲಭ. ನಮ್ಮ ಸಂಪುಟದ ಬಹಳಷ್ಟು ಶಾಸಕರು ಅಭಿಪ್ರಾಯಪಟ್ಟಿರುವಂತೆ ನಮ್ಮ ರಾಜ್ಯಕ್ಕೆ ಒಂದು ಶಾಶ್ವತವಾದ ಹೊಸ ಹೆಸರನ್ನಿಟ್ಟು ಈಗಿನ ವಿವಾದವನ್ನು ಕೊನೆಗೊಳಿಸುವ ಅಂತಿಮ ನಿರ್ಧಾರಕ್ಕೆ ಬಂದಿದ್ದೇನೆ. ಭೇದ ಭಾವಗಳೇನೇ ಇರಲಿ, ಕರ್ನಾಟಕ ಎಂಬ ಹೆಸರನ್ನಿಡಲು ಒಮ್ಮತದಿಂದ ಎಲ್ಲರೂ ಒಪ್ಪಿಗೆ ನೀಡಿದ್ದಾರೆ" ಎಂದು 27–07–1972ರಂದು ಠರಾವನ್ನು ಮಂಡಿಸಿದರು.

ಒಂದೇ ಒಂದು ವಿರೋಧವಿಲ್ಲದೆ ಕರ್ನಾಟಕ ರಾಜ್ಯ ಹೆಸರು ಅಂಗೀಕಾರವಾಯಿತು. 1–11–1973ರಲ್ಲಿ ನಾಮಕರಣವಾಯಿತು. ಅಂದೇ ಕನ್ನಡ ರಾಜ್ಯೋತ್ಸವ ನಡೆಯಿತು. ನಂತರದಲ್ಲಿ ಕನ್ನಡವೇ ಆಡಳಿತ ಭಾಷೆಯೆಂದು ಘೋಷಿಸಿದವರೂ ಅವರೇ.

ನಾನಾ ವಿರೋಧಗಳ ನಡುವೆ ಕರ್ನಾಟಕ ರಾಜ್ಯವೆಂಬ ಶಾಶ್ವತ ಹೆಸರನ್ನಿಟ್ಟು, ಅಖಂಡ ಕರ್ನಾಟಕವನ್ನು ರೂಪಿಸಿದ ಕೀರ್ತಿ ಶ್ರೀ ದೇವರಾಜ ಅರಸ್‌ರದ್ದು. ಅವರನ್ನು ಸ್ಮರಿಸಬೇಕಾದದ್ದು ಅವರಿಗೆ ಮಾಡುವ ಮೆಹರ್ಬಾನಿಯಲ್ಲ. ನಾವು ಸಲ್ಲಿಸಬೇಕಾದ ಕೃತಜ್ಞತೆ. ಆ ಭಾಷಣವನ್ನು ವಿದ್ಯಾರ್ಥಿಗಳೆಲ್ಲರೂ ಓದುವಂತೆ ಈಗೊಂದು ಕರಪತ್ರ ಪ್ರಕಟಿಸಿದರೆ ಉತ್ತಮ. ಕರ್ನಾಟಕ ಎಂಬ ಹೆಸರು ಅನುಷ್ಠಾನಕ್ಕೆ ಬರಲು ಏನೆಲ್ಲಾ ತಕರಾರುಗಳು ನಡೆದಿದ್ದವು ಎಂಬುದು ವಿದ್ಯಾರ್ಥಿಗಳಿಗೆ ತಿಳಿದೀತು.

ಟಿಪ್ಪಣಿ: 1

ಮೈಸೂರು ರಾಜ್ಯವು ಕರ್ನಾಟಕವೆನಿಸಿಕೊಂಡು ಈ ನವೆಂಬರ್ ಒಂದಕ್ಕೆ ಐವತ್ತು ವರ್ಷ ಪೂರ್ಣಗೊಳ್ಳಲಿದೆ. ಈ ಸಂದರ್ಭವನ್ನು ಸ್ಮರಣೀಯಗೊಳಿಸಲು ಸರ್ಕಾರ ನಾನಾ ಕಾರ್ಯಕ್ರಮ ಯೋಜಿಸಿದೆ. ಕನ್ನಡದ ಐದು ಪ್ರಾತಿನಿಧಿಕ ಗೀತೆಗಳನ್ನು ಕಲಿತು ಸಮಾರಂಭಗಳಲ್ಲಿ ಕಡ್ಡಾಯವಾಗಿ ಹಾಡುವ ಮೂಲಕ ನುಡಿ ನಮನ ಸಲ್ಲಿಸುವಂತೆ ಸರ್ಕಾರ ಆದೇಶಿಸಿದೆ.

ಕರ್ನಾಟಕ ಸಂಭ್ರಮ–50ರ ಹಿನ್ನೆಲೆಯಲ್ಲಿ, ನವೆಂಬರ್ ಒಂದರಿಂದ ಇಡೀ ವರ್ಷ ಕರ್ನಾಟಕದ ಇತಿಹಾಸ, ಪರಂಪರೆ, ಕಲೆ, ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳಿವೆ. ಯುವಜನತೆಯಲ್ಲಿ ಕನ್ನಡ–ಕನ್ನಡಿಗ–ಕರ್ನಾಟಕ ಕುರಿತು ಅಭಿಮಾನ, ಹೆಮ್ಮೆ ಮೂಡಿಸುವ ಯೋಜನೆ ಹಮ್ಮಿಕೊಂಡಿದೆ. ಇದೊಂದು ಶ್ಲಾಘನೀಯ ನಡೆ 'ಕನ್ನಡವೆಂದರೆ ಕುಣಿ ಕುಣಿದಾಡುವುದು ಎನ್ನೆದೆ.' ನವೆಂಬರ್ ಒಂದರ ರಾಜ್ಯೋತ್ಸವ ಸಮಾರಂಭಗಳಲ್ಲಿ ಕನ್ನಡ ಧ್ವಜಾರೋಹಣ, ರಾಷ್ಟ್ರಗೀತೆ, ನಾಡಗೀತೆ ಮತ್ತು ಕನ್ನಡ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಬೇಕು. ನಂತರ ಕನ್ನಡದ ಈ ಐದು ಪ್ರಾತಿನಿಧಿಕ ಗೀತೆಗಳನ್ನು ಕಡ್ಡಾಯವಾಗಿ ಹಾಡಬೇಕು.

1) ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು (ಹುಯಿಲುಗೋಳ ನಾರಾಯಣರಾಯರು)
2) ಎಲ್ಲಾದರೂ ಇರು. ಎಂತಾದರೂ ಇರು. ಎಂದೆಂದಿಗೂ ನೀ ಕನ್ನಡವಾಗಿರು (ಕುವೆಂಪು)
3) ಒಂದೇ ಒಂದೇ ಕರ್ನಾಟಕವೊಂದೇ (ದ.ರಾ. ಬೇಂದ್ರೆ)
4) ಹೊತ್ತಿತೋ ಹೊತ್ತಿತು ಕನ್ನಡದ ದೀಪ (ಕಾವ್ಯಾನಂದ)
5) ಹೆಸರಾಯಿತು ಕರ್ನಾಟಕ. ಉಸಿರಾಗಲಿ ಕನ್ನಡ (ಚನ್ನವೀರ ಕಣವಿ) ಹೀಗೂ ಐದಾಗಿವೆ. ಆರನೇಯದಾಗಿ ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿನುಡಿಯ ದೀಪ (ಡಿ.ಎಸ್.ಕರ್ಕಿ) ವನ್ನೂ ಸೇರಿಸಬಹುದಿತ್ತು. ಸಂಭ್ರಮ ಸಡಗರದಿಂದ ಹಾಡಬಲ್ಲ ಸ್ಫೂರ್ತಿ ಈ ಗೀತೆಗಿದೆ.

ಟಿಪ್ಪಣಿ: 2

ಹೆಸರಾಯಿತು ಕರ್ನಾಟಕ. ಮತ್ತು ಉಸಿರಾಯಿತು ಆಡಳಿತ ಭಾಷೆಯಾಗಿ ಕನ್ನಡ!

ಮೈಸೂರು ರಾಜ್ಯಕ್ಕೆ ಪುನರ್ ನಾಮಕರಣ ಮಾಡಬೇಕು ಎಂದಾಗ ಒದಗಿದ ಅಡಚಣೆ, ಪ್ರತಿರೋಧಗಳು ಒಂದೆರಡಲ್ಲ. ಈ ಹೆಸರೇ ಬೇಕು. ಅದು ಬೇಡ. ಇದೇ ಹೆಸರಿರಲಿ ಎಂದು ವಾದ–ವಿವಾದ ಮಾಡಿದವರ ಸಂಖ್ಯೆ ಅಗಣಿತ. ಕರ್ಣಾಟ, ಕರ್ನಾಟಕ, ಕರುನಾಡು, ಕನ್ನಡ ನಾಡು, ಕರ್ಣಾಟಕ ಹೀಗೆ ನಾನಾ ಹೆಸರುಗಳು. ಎಂದಿಗೂ ಮೂಡದ ಒಮ್ಮತ. 1956 ರಿಂದಲೂ ಶಾಸನ ಸಭೆಯಲ್ಲಿ ನಾನಾ ಪ್ರಸ್ತಾವಗಳು ಮಂಡಿತವಾಗುತ್ತಲೇ ಇದ್ದವು. ಆದರೆ ಆ ಹೆಸರು ಬೇಡ. ಇದೇ ಹೆಸರಿರಲಿ ಎಂಬ ವಿರೋಧಗಳು ಬರಲಾಗಿ ಪ್ರಸ್ತಾವಗಳು ಬರಿಯ ಒಣ ಚರ್ಚೆಯಲ್ಲಿ ಮುಕ್ತಾಯವಾಗುತ್ತಿದ್ದವು. ಯಾರಿಗೂ ವಿರೋಧವನ್ನು ಲೆಕ್ಕಿಸದೆ ಮುಂದಡಿ ಇಡುವ ಇಚ್ಛಾಶಕ್ತಿ ಇರಲಿಲ್ಲ. ಚರ್ಚೆ ಜಾರಿಯಲ್ಲಿತ್ತೇ ಹೊರತು ಎರಡು ದಶಕ ಉರುಳಿದರೂ ಅನುಷ್ಠಾನಕ್ಕಂತೂ ಬರಲಿಲ್ಲ. ಇನ್ನೆಂದೂ ಹೊಸ ಹೆಸರು ಬರಲಾರದು ಎಂದು ಜನ ಉತ್ಸಾಹ ಕಳೆದುಕೊಂಡಿದ್ದರು.

ಅಂತಹ ದಿನಗಳಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಪ್ಪಿಸಿ, ಕರ್ನಾಟಕ ಎಂಬ ಹೆಸರನ್ನು ಅವಿರೋಧವಾಗಿ ಅನುಷ್ಠಾನಗೊಳಿಸಿದವರು ಅಂದಿನ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು. ನಂತರದ ದಿನಗಳಲ್ಲಿ ಕನ್ನಡವನ್ನೇ ಆಡಳಿತ ಭಾಷೆಯನ್ನಾಗಿ ಘೋಷಿಸಿದವರೂ ಅವರೇ.

1978ರ ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅನೇಕ ಸಾಹಿತಿಗಳು ಮಾತಾಡಿದರು.

ಅದನ್ನು ಡಾ.ಹಾ.ಮಾ.ನಾಯಕರು ವರ್ಣಿಸಿದ್ದು ಹೀಗೆ: "ಸಮ್ಮೇಳನದಲ್ಲಿ ಸಾಹಿತಿಗಳೆಲ್ಲರೂ ರಾಜಕಾರಣಿಗಳಂತೆ ಮಾತಾಡಿದರೆ, ಮುಖ್ಯಮಂತ್ರಿ ದೇವರಾಜ ಅರಸರು ಮಾತ್ರ ಸಾಹಿತಿಯಂತೆ ಮಾತಾಡಿದರು!".

ಅರಸರ ಕನ್ನಡತನವೆಂದರೆ ಇದು.

ಕನ್ನಡ ಸಂಭ್ರಮ–50ರ ಆಚರಣೆ ಸಮಾರಂಭಗಳಲ್ಲಿ ಅವರ ಭಾವಚಿತ್ರವನ್ನಿಟ್ಟು ಗೌರವ ಸಲ್ಲಿಸಬೇಕಿದೆ.

'ಮೇರಿ ಮಾಟಿ, ಮೇರಾ ದೇಶ್' ಅಭಿಯಾನ ಸಮಾರೋಪ
ಭಾರತೀಯ ಯುವಕರು ಒಂದಾಗಿ ಗುರಿ ಸಾಧಿಸುವುದಕ್ಕೆ ಉದಾಹರಣೆ

ದೆಹಲಿ, ಅ. 31– 'ಮೇರಿ ಮಾಟಿ ಮೇರಾ ದೇಶ್' (Meri Maati Mera Desh) ಅಭಿಯಾನದ ಸಮಾರೋಪ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಕರ್ತವ್ಯ ಪಥದಲ್ಲಿ ಅಮೃತ ಕಲಶಕ್ಕೆ ಮಣ್ಣನ್ನು ಅರ್ಪಿಸಿದರು. ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, 'ಮೇರಿ ಮಾಟಿ ಮೇರಾ ದೇಶ್' ಅಭಿಯಾನವು ಭಾರತದ ಯುವಕರು ಹೇಗೆ ಒಂದಾಗಬಹುದು ಮತ್ತು ಪ್ರತಿಯೊಂದು ಗುರಿಯನ್ನು ಸಾಧಿಸಬಹುದು ಎಂಬುದಕ್ಕೆ ನೇರ ಉದಾಹರಣೆಯಾಗಿದೆ ಎಂದು ಹೇಳಿದರು.

ದಂಡಿ ಯಾತ್ರೆಯು ಜನರನ್ನು ಒಟ್ಟುಗೂಡಿಸಿತು, ಅದೇ ರೀತಿ ಆಜಾದಿ ಕಾ ಅಮೃತ್ ಮಹೋತ್ಸವವು ಜನರ ಭಾಗವಹಿಸುವಿಕೆಯ ಪ್ರಮಾಣದಲ್ಲಿ ಹೊಸ ಇತಿಹಾಸವನ್ನು ನಿರ್ಮಿಸಿತು ಎಂದಿದ್ದಾರೆ ಮೋದಿ. ಅಮೃತ ಕಲಶಕ್ಕೆ ಮಣ್ಣನ್ನು ಅರ್ಪಿಸುವ ಹಿಂದಿನ ಕಾರಣದ ಕುರಿತು ಮಾತನಾಡಿದ ಪ್ರಧಾನಿ ಮೋದಿ, ಅನೇಕ ಮಹಾನ್ ನಾಗರಿಕತೆಗಳು ಕೊನೆಗೊಂಡಿವೆ. ಆದರೆ ಪ್ರಾಚೀನ ಕಾಲದಿಂದ ಇಂದಿನವರೆಗೂ ಈ ದೇಶವನ್ನು ಉಳಿಸಿದ ಪ್ರಜ್ಞೆ ಭಾರತದ ಮಣ್ಣಿನಲ್ಲಿದೆ ಎಂದು ಹೇಳಿದರು.

ಪವಿತ್ರ ಮಣ್ಣು ಪ್ರೇರಣೆಯ ಚಿಲುಮೆಯಾಗಿ ಕಾರ್ಯನಿರ್ವಹಿಸುತ್ತದೆ, 'ವಿಕಸಿತ್ ಭಾರತ'ದ ನಮ್ಮ ದೃಷ್ಟಿಯನ್ನು ಸಾಕಾರಗೊಳಿಸುವತ್ತ ನಮ್ಮ ಪ್ರಯತ್ನಗಳನ್ನು ದ್ವಿಗುಣಗೊಳಿಸಲು ನಮ್ಮನ್ನು ಪ್ರೇರೇಪಿಸುತ್ತದೆ ಎಂದು ಅವರು ಹೇಳಿದರು. ಪ್ರಧಾನಿ ಮೋದಿ ಅವರು ಯುವಕರಿಗಾಗಿ ಮೇರಾ ಯುವ ಭಾರತ್ (MY ಭಾರತ್) ವೇದಿಕೆಯನ್ನು ಪ್ರಾರಂಭಿಸಿದ್ದು, ವರ್ಚುವಲ್ ಆಗಿ 'ಅಮೃತ್ ಮಹೋತ್ಸವ ಸ್ಮಾರಕ ಮತ್ತು ಅಮೃತ ವಾಟಿಕಾ'ದ ಅಡಿಪಾಯವನ್ನು ಹಾಕಿದರು. "ಸ್ಮಾರಕವು ಇಂದಿನ ಐತಿಹಾಸಿಕ ಘಟನೆಯನ್ನು ಮುಂದಿನ ಪೀಳಿಗೆಗೆ ನೆನಪಿಸುತ್ತದೆ" ಎಂದು ಪ್ರಧಾನಿ ಮೋದಿ ಹೇಳಿದರು.

ಒಬಿಸಿ ಪ್ರಮಾಣ ಪತ್ರ ಕಡ್ಡಾಯ ಬೇಡ: ಸಿಎಂ

ಬೆಂಗಳೂರು: ರಾಜ್ಯ ನಾಗರಿಕ ಸೇವಾ ಹುದ್ದೆಗಳಿಗೆ ಮೀಸಲಾತಿಯಿಂದ ಯಾವುದೇ ರಿಯಾಯಿತಿ ಪಡೆಯದೇ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ವರ್ಗದ ಹುದ್ದೆಗಳಿಗೆ ಆಯ್ಕೆಗೊಂಡ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಸಿಂಧುತ್ವ ಪ್ರಮಾಣ ಪತ್ರ ಕಡ್ಡಾಯಗೊಳಿಸದಂತೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ನಿರ್ದೇಶನ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಈ ಸಂಬಂಧ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ.

ಮೀಸಲಾತಿ ಕೋರಿ ಸರ್ಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಂತಿಮ ಆಯ್ಕೆ ಪಟ್ಟಿಯಲ್ಲಿ ಸಾಮಾನ್ಯ ವರ್ಗದ ಹುದ್ದೆಗಳಿಗೆ ಎದುರಾಗಿ ಆಯ್ಕೆಗೊಂಡಾಗಲೂ ಸಿಂಧುತ್ವ ಪ್ರಮಾಣ ಪತ್ರ ಸಲ್ಲಿಸುವಂತೆ ಕೆಲವು ಪ್ರಾಧಿಕಾರಿಗಳು ಅಭ್ಯರ್ಥಿಗಳಿಗೆ ಸೂಚಿಸುತ್ತಿವೆ. ಇದರಿಂದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಮೆರಿಟ್ ಆಧಾರದಲ್ಲಿ ಸಾಮಾನ್ಯವರ್ಗದ ಹುದ್ದೆಗಳಿಗೆ ಎದುರಾಗಿ ಆಯ್ಕೆಯಾದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಅನಾವಶ್ಯಕ ತೊಂದರೆ ಆಗುತ್ತಿದೆ ಎಂಬ ದೂರು ಬಂದಿದೆ ಎಂದು ಹೇಳಿದ್ದಾರೆ.

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ನೇಮಕಾತಿ ನಿಯಮ 1992 ರ ಅನ್ವಯ ರಾಜ್ಯ ನಾಗರಿಕ ಸೇವಾ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಳ್ಳುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಅಂತಿಮ ಆಯ್ಕೆ ಪಟ್ಟಿಯಲ್ಲಿ ವಿವಿಧ ಮೀಸಲಾತಿಯಡಿ ಆಯ್ಕೆ ಹೊಂದುವ ಮತ್ತು ಮೀಸಲಾತಿಯಿಂದ ರಿಯಾಯಿತಿ ಪಡೆಯುವ ಅಭ್ಯರ್ಥಿಗಳು ಸಲ್ಲಿಸಿರುವ ಪ್ರಮಾಣ ಪತ್ರಗಳು ಸಿಂಧುವೇ ಎಂಬ ಬಗ್ಗೆ ಪ್ರಾಧಿಕಾರದಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆಯಬೇಕಾಗುತ್ತಿತ್ತು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಯುವಕ, ಯುವತಿಯರು ಮತಪಟ್ಟಿಗೆ ಸೇರಲು ವಿಶೇಷ ಆಂದೋಲನ

ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮಾಹಿತಿ



ಮೈಸೂರು,ಅ.31(ಬಿಎಲ್‌ಯು)–ಭಾರತ ಚುನಾವಣಾ ಆಯೋಗವು ಮತದಾರರ ನೋಂದಣಿ ವಿಶೇಷ ಆಂದೋಲನ ಕಾರ್ಯಕ್ರಮ ಆರಂಭಿಸಲಿದ್ದು, 18 ಮತ್ತು 19 ವರ್ಷದ ಯುವಕ, ಯುವತಿಯರು ನೋಂದಣಿ ಮಾಡಿಕೊಳ್ಳಿ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಜೊತೆ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ನ.18 ಮತ್ತು 19 ರಂದು ಹಾಗೂ ಡಿಸೆಂಬರ್ 2 ಮತ್ತು 3ರಂದು ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಣೆ 2024ರ ಜೂನ್ 21ರಂದು ಮುಕ್ತಾಯಗೊಳ್ಳಲಿದೆ. ನ.1 ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಿಕೊಳ್ಳಲು ಅರ್ಹತಾ ದಿನವಾಗಿದೆ. ಮತದಾರರ ಪಟ್ಟಿಯ ನೋಂದಾವಣೆ ಕುರಿತು ಅರ್ಜಿ ಸ್ವೀಕೃತಿ ಸೆಪ್ಟೆಂಬರ್ 30 ರಿಂದ ಪ್ರಾರಂಭವಾಗಲಿದೆ ಎಂದು ಡಾ.ರಾಜೇಂದ್ರ ತಿಳಿಸಿದರು.

ನಮೂನೆ 19ರಲ್ಲಿ ಅರ್ಜಿ ಸಲ್ಲಿಸಲು ನವೆಂಬರ್ 6 ಕೊನೆಯ ದಿನವಾಗಿದೆ. ಮತದಾರರ ಪಟ್ಟಿಯ ಹಸ್ತಪ್ರತಿ ಸಿದ್ಧಪಡಿಸುವಿಕೆ ಹಾಗೂ ಕರಡು ಮತದಾರರ ಪಟ್ಟಿಯನ್ನು ನ.20ರಂದು ಮುದ್ರಿಸಿ ನ.23 ರಂದು ಮತದಾರರ ಪಟ್ಟಿಯನ್ನು ಪ್ರಕಟ ಮಾಡಲಾಗುವುದು. ಹಕ್ಕು ಮತ್ತು ಆಕ್ಷೇಪಣೆಗಳನ್ನು ನ.23ರಿಂದ ಡಿ.9ರವರೆಗೆ ಸಲ್ಲಿಸಬಹುದು. ಹಕ್ಕು ಹಾಗೂ ಆಕ್ಷೇಪಗಳನ್ನು ಇತ್ಯರ್ಥಪಡಿಸಿ ಪೂರಕ ಪಟ್ಟಿಗಳನ್ನು ಸಿದ್ಧಪಡಿಸಿ, ಮುದ್ರಣ ಮಾಡಲು ಡಿಸೆಂಬರ್ 25 ಕೊನೆಯ ದಿನವಾಗಿದೆ. ಡಿಸೆಂಬರ್ 30 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟ ಮಾಡಲಾಗುವುದು ಎಂದು ವಿವರ ನೀಡಿದರು.

> ಕೆಲವು ಬಾರಿ ಬೂತ್ ಲೆವೆಲ್ ಆಫೀಸರ್‌ಗಳನ್ನು ಸಂಪರ್ಕಿಸಲು ಸಾಧ್ಯವಾಗುವುದಿಲ್ಲ. ನಿಯೋಜಿತ ಮತಗಟ್ಟೆಗಳಲ್ಲಿ ಅವರು ಲಭ್ಯವಿರುವುದಿಲ್ಲ. ಆದ ಕಾರಣ ಮತಗಟ್ಟೆಗೆ ನಿಯೋಜಿಸಿದ ಬಿಎಲ್‌ಓಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಸೂಕ್ತ ತರಬೇತಿ ಹಾಗೂ ಮಾರ್ಗದರ್ಶನ ನೀಡಬೇಕು.
> –ವಿವಿಧ ಪಕ್ಷಗಳ ಮುಖಂಡರ ಸಲಹೆ

ಈ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್, ಮತದಾರರ ಪಟ್ಟಿ ನೋಂದಣಿ ಹಾಗೂ ಪರಿಷ್ಕರಣೆಯಲ್ಲಿ ರಾಜಕೀಯ ಪಕ್ಷಗಳ ಸಹಕಾರ ಮುಖ್ಯ ಎಂದು ಅಭಿಪ್ರಾಯಪಟ್ಟರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಲೋಕನಾಥ್, ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಉಪಆಯುಕ್ತ ಜಿ.ಎಸ್.ಸೋಮಶೇಖರ್, ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ, ಉಪವಿಭಾಗಾಧಿಕಾರಿ ಕೆ.ಆರ್.ರಕ್ಷಿತ್, ರುಚಿ ಬಿಂದಾಲ್, ತಹಶೀಲ್ದಾರ್ ಬಿ.ಎನ್.ಗಿರೀಶ್, ಹೆಚ್.ಡಿ.ಕೋಟೆ ತಹಶೀಲ್ದಾರ್ ಸಣ್ಣ ರಾಮಪ್ಪ, ಕಾಂಗ್ರೆಸ್ ಮುಖಂಡ ಶೌಕತ್ ಪಾಷ, ಜೆಡಿಎಸ್ ಮುಖಂಡ ಫಾಲ್ಕನ್ ಬೋರೇಗೌಡ, ಬಿಜೆಪಿ ಮುಖಂಡ ಪಾಪಣ್ಣ, ಹೆಚ್.ಪಿ.ಚೇತನ್, ವನಿಶ್‌ಕುಮಾರ್, ಆಮ್ ಆದ್ಮಿ ಪಕ್ಷದ ರಾಘವ್ ಸಭೆಯಲ್ಲಿ ಹಾಜರಿದ್ದರು.

ಮೈಸೂರು ಜಿಲ್ಲಾಡಳಿತದಿಂದ 50 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ



ಹೆಚ್.ಎನ್.ಗಂಗಾಧರ | ಅಂಬಳೆ ಶಿವಣ್ಣ | ನಾಗೇಶ್ ಪಾಣತ್ತಲೆ | ಉದಯಶಂಕರ್ | ಆರ್.ಮಂಜುನಾಥ್ | ಎಂ.ರಾಮುಸ್ವಾಮಿ | ಎಸ್.ಇ. ಗಿರೀಶ್ | ಎಸ್.ಪ್ರಭುಶಂಕರ | ಮಾನಸ | ಡಾ.ಆರ್.ಹೆಚ್.ಪವಿತ್ರ

ಮೈಸೂರು, ಅ.31(ಎಸ್‌ಬಿಡಿ)– ಮೈಸೂರು ಜಿಲ್ಲಾಡಳಿತದ ವತಿಯಿಂದ 68ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿವಿಧ ಕ್ಷೇತ್ರದ 50 ಮಂದಿಗೆ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿದೆ.

ಸಾಹಿತ್ಯ ಕ್ಷೇತ್ರದಿಂದ ಮೈಸೂರು ವಿವಿ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಹ ಸಂಪಾದಕ ಡಾ.ಸಿ.ಬಸವರಾಜು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಮಾನಸ, **ಶಿಕ್ಷಣ ಕ್ಷೇತ್ರದಿಂದ** ಮೈಸೂರು ವಿವಿ ಮಾನಸಗಂಗೋತ್ರಿ ಗಣಕ ವಿಜ್ಞಾನ ಅಧ್ಯಯನ ವಿಭಾಗ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು, ಮೈಸೂರು ಬೋಗಾದಿಯ ಆರ್.ಎಚ್.ಪವಿತ್ರ, **ಜಾನಪದ ಕ್ಷೇತ್ರದಿಂದ** ತಲಕಾಡಿನ ಟಿ.ಎಂ.ಕೃಷ್ಣಮೂರ್ತಿ ಬಿನ್ ಟಿ.ಕೆ.ಮಾದಯ್ಯ, ಮೈಸೂರು ಗುಂಡೂರಾವ್‌ನಗರದ ಅಂಬಳೆ ಶಿವಣ್ಣ, ಜೆ.ಪಿ.ನಗರದ ಎಸ್.ಸಿ.ಜಯಶಂಕರ, ಮೈಸೂರು ಲಷ್ಕರ್ ಮೊಹಲ್ಲಾದ ಕುಂಬಾರಗೇರಿಯ ವಿ.ವೆಂಕಟಮ್ಮ, ಹೆಚ್.ಡಿ.ಕೋಟೆ ತಾಲೂಕು ಕ್ಯಾತನಹಳ್ಳಿ ಹೆಚ್.ಪ್ರಕಾಶ್.

ಸಮಾಜ ಸೇವೆಯಿಂದ ಮೈಸೂರಿನ ಗಾಯಿತ್ರಿಪುರಂ ಬಿ.ವಿದ್ಯಾಸಾಗರ ಕದಂಬ, ಜೆ.ಸಿ.ಬಡಾವಣೆಯ ದ್ಯಾವಪ್ಪ ನಾಯಕ, ಮೈಸೂರು ಚಾಮುಂಡಿ ಬೆಟ್ಟದ ಶ್ರೀಧರ್ ದೀಕ್ಷಿತ್, ಮೈಸೂರು ಎಲ್.ಕಾಡಯ್ಯ ಸಿಲ್ಕ್ ಅಂಡ್ ಟೆಕ್ಸ್‌ಟೈಲ್ಸ್‌ನ ನಾಗೇಶ್ ಎಲ್.ಕಾಡಯ್ಯ, ದಟ್ಟಗಳ್ಳಿಯ ಕೆ.ಪಿ.ದಿವಾಕರ, ಮೈಸೂರು ಶಾರದಾದೇವಿನಗರದ ಎಸ್.ಪ್ರಭುಶಂಕರ, ವಿದ್ಯಾರಣ್ಯಪುರಂನ ಎಂ.ಎಲ್.ಶಿವಕುಮಾರ್, ಮೈಸೂರು ಕುವೆಂಪುನಗರದ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಎಸ್.ಇ.ಗಿರೀಶ್, ಮೈಸೂರು ವಿವಿ ಮೊಹಲ್ಲಾದ ಎಂ.ಬಿ. ಕೊಟ್ರೇಶ್‌ಬಾಬು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ನಂಜುಂಡನಾಯಕ | ರಾಜಣ್ಣ

ಸಮಾಜ ಸೇವೆ ಸರ್ಕಾರಿ ನೌಕರರ ಸೇವಾ ವಿಭಾಗದಿಂದ ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದ ರಾಜು, **ವೈದ್ಯಕೀಯ ಕ್ಷೇತ್ರದಿಂದ** ಮೈಸೂರು ಅಗ್ರಹಾರದ ಡಾ.ರಾಮ್‌ದೇವ್, **ಧಾರ್ಮಿಕ ಕ್ಷೇತ್ರದಿಂದ** ಮೈಸೂರು ಯರಗನಹಳ್ಳಿ ಬಡಾವಣೆಯ ಕೆ.ಎಲ್.ರಾಜಶೇಖರ್, **ಕನ್ನಡ ಪರ ಹೋರಾಟಗಾರರ ವಿಭಾಗದಿಂದ** ಮೈಸೂರು ಕುರುಬಾರಹಳ್ಳಿ ಬಿ.ಧನಪಾಲ್, ಮೈಸೂರು ಕೆ.ಜಿ.ಕೊಪ್ಪಲಿನ ಆರ್.ರಮೇಶ್ ಬಿನ್ ಲೇಟ್ ರಾಮೇಗೌಡ, ಕುವೆಂಪುನಗರ ಎಂ ಬಡಾವಣೆಯ ಸಿದ್ದರಾಮ ವೈ.ಶಿವನಾಯ್ಕರ್, ಮೈಸೂರು ಕುವೆಂಪು ನಗರದ ಅರವಿಂದ ಶರ್ಮ, ಮೈಸೂರು ದಟ್ಟಗಳ್ಳಿ ಎಲ್.ಬಿ.ಪಾಳ್ಯದ ಬಿ.ಮಹದೇವ, **ಸುಗಮ ಸಂಗೀತದ ವತಿಯಿಂದ** ಮೈಸೂರು ಕೆ.ಆರ್.ಮೊಹಲ್ಲಾದ ವೈ.ಆರ್.ನಾಗೇಂದ್ರರಾವ್, ಮೈಸೂರು ಜೆ.ಪಿ.ನಗರದ ಸಿ.ಆರ್.ರಾಘವೇಂದ್ರ ಪ್ರಸಾದ್, **ಪತ್ರಿಕಾ ರಂಗದಿಂದ** ಮೈಸೂರು ವಿಜಯ ಕರ್ನಾಟಕದ ಹಿರಿಯ ಪತ್ರಿಕಾ ಛಾಯಾಗ್ರಾಹಕ ನಾಗೇಶ್ ಪಾಣತ್ತಲೆ, ವಿಜಯವಾಣಿ ಉಪಸಂಪಾದಕ ದೊಡ್ಡನಹುಂಡಿ ರಾಜಣ್ಣ, **ಛಾಯಾಚಿತ್ರ/ಪತ್ರಕರ್ತರ ವಿಭಾಗದಿಂದ** ಮೈಸೂರು ತಿಲಕ್‌ನಗರದ ಎಸ್.ಉದಯ್ ಶಂಕರ್, **ಪತ್ರಿಕಾ ಛಾಯಾಗ್ರಾಹಕರ ವಿಭಾಗದಿಂದ** ಛಾಯಾಗ್ರಾಹಕ ಮತ್ತು ಪತ್ರಿಕಾ ವರದಿಗಾರ ಸುತ್ತೂರು ನಂಜುಂಡನಾಯಕ.

ಸಂಘಟನಾ ಕ್ಷೇತ್ರದಿಂದ ಮೈಸೂರು ವಿಜಯನಗರದ ಎ.ಹೇಮಗಂಗಾ, **ಕ್ರೀಡೆ ಮತ್ತು ಯೋಗ ವಿಭಾಗದಿಂದ** ಮೈಸೂರು ಕೆ.ಆರ್.ಮೊಹಲ್ಲಾದ ಡಾ.ಸಿ.ರಮೇಶ್ ಶೆಟ್ಟಿ, ಮೈಸೂರು ಹಿನಕಲ್‌ನ ಹೆಚ್.ಎನ್.ಗಂಗಾಧರ್ ಬಿನ್ ನಾಗೇಂದ್ರ, **ಸ್ಕೇಟಿಂಗ್ ವಿಭಾಗದಿಂದ** ಮೈಸೂರು ಆರ್.ಎಸ್.ನಾಯ್ಡುನಗರದ ವರ್ಷಾ ಪುರಾಣಿಕ್, **ಕುಸ್ತಿ ವಿಭಾಗದಿಂದ** ಮೈಸೂರು ವಿವಿ ಮೊಹಲ್ಲಾದ ಪೈಲ್ವಾನ್ ಚಿಕ್ಕಪುಟ್ಟಿ, **ಕ್ರೀಡೆ ಮತ್ತು ಕ್ರಿಕೆಟ್ ವಿಭಾಗದಿಂದ** ಮೈಸೂರು ವಿಜಯನಗರ 2ನೇ ಹಂತದ ಎ.ರಮೇಶ್ ಶೆಟ್ಟಿ, **ಸಂಗೀತ ವಿಭಾಗದಿಂದ** ಮೈಸೂರು ಹೆಬ್ಬಾಳಿನ ನರಸೇಗೌಡ, **ರಂಗಭೂಮಿ ವಿಭಾಗದಿಂದ** ಮೈಸೂರು ನ್ಯೂ ಕಾಂತರಾಜ ಅರಸ್ ರಸ್ತೆಯ ಮರೀಗೌಡ, ಹುಣಸೂರು ಕಲ್ಕುಣಿಕೆಯ ಎಸ್.ಜಯರಾಮು ಬಿನ್ ಸೂರ್ಯನಾರಾಯಣ.

ಕನ್ನಡ ತಂತ್ರಾಂಶ ವಿಭಾಗದಿಂದ ತಿ.ನರಸೀಪುರದ ಕನ್ನಡ ಅಕ್ಷರ ಶೈಲಿ ವಿನ್ಯಾಸಗಾರ ಆರ್.ಮಂಜುನಾಥ್, **ಕರ್ನಾಟಕ ಶಾಸ್ತ್ರೀಯ ಸಂಗೀತ ವಿಭಾಗದಿಂದ** ಮೈಸೂರು ಕುಂಬಾರಗೇರಿಯ ಎಸ್.ಪುಟ್ಟರಾಜು, ಮೈಸೂರಿನ ಕಣಿಯರ ರಾಮಮಂದಿರ ರಸ್ತೆಯ ಪಾಂಡುರಂಗ ದೇವಸ್ಥಾನದ ಎಂ.ಎನ್.ಶ್ರೀನಿವಾಸ್, ಶಿಲ್ಪಕಲೆ ವಿಭಾಗದಿಂದ ಮೈಸೂರಿನ ವೈ.ರಾಜೇಶ್, **ಸಮಾಜ ಸೇವಾ ವಿಭಾಗದಿಂದ** ಹುಣಸೂರು ತಾಲೂಕು ಆಯರಹಳ್ಳಿಯ ಪಿ.ಪ್ರವೀಣ್, **ರಂಗಭೂಮಿ (ಪೌರಾಣಿಕ) ವಿಭಾಗ ದಿಂದ** ಎಂ.ರಾಮಸ್ವಾಮಿ ಬಿನ್ ಪಿ.ಆರ್.ಮರಿಯಪ್ಪ, **ಶಾಸ್ತ್ರೀಯ ನೃತ್ಯ ವಿಭಾಗದಿಂದ** ಮೈಸೂರು ಸರಸ್ವತಿಪುರಂನ ಬದ್ರಿ ದಿವ್ಯಭೂಷಣ್, ಮೈಸೂರಿನ ಜನನಿ ಸೇವಾ ಟ್ರಸ್ಟ್‌ನ ಡಾ.ಎಂ.ಕೆ.ಅಶೋಕ, ಶಿಕ್ಷಣ ವಿಭಾಗದಿಂದ ಗಂಗೋತ್ರಿ ಬಡಾವಣೆಯ ನ.ಗಂಗಾಧರಪ್ಪ ಲೇಟ್ ನಂಜುಂಡಶೆಟ್ಟಿ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನಾಡಧ್ವಜಕ್ಕೆ ದೊರೆಯದ ಅನುಮತಿ: ಕೇಂದ್ರದಿಂದ ಪ್ರಾದೇಶಿಕ ಅಸ್ಮಿತೆಗೆ ಪ್ರಹಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ



ಬೆಂಗಳೂರು: ರಾಜ್ಯದಿಂದ ಅನುಮೋದನೆಗೊಂಡಿದ್ದ ಕನ್ನಡ ನಾಡಧ್ವಜವನ್ನು ಕೇಂದ್ರ ಸರ್ಕಾರ ತಿರಸ್ಕರಿಸುವ ಮೂಲಕ ಪ್ರಾದೇಶಿಕ ಅಸ್ಮಿತೆಗೆ ಪ್ರಹಾರ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪ್ರಧಾನಿ ಮೋದಿ ಅವರಿಂದ ಉತ್ತರ ಬಯಸಿರುವ ಸಿದ್ದರಾಮಯ್ಯ, ಕನ್ನಡಕ್ಕೊಂದು ನಾಡಗೀತೆಯಂತೆ ನಾಡಧ್ವಜ ಇರಬೇಕೆಂಬುದು ಆರೂವರೆ ಕೋಟಿ ಕನ್ನಡಿಗರ ಒಕ್ಕೊರಲ ಒತ್ತಾಯ. ಕನ್ನಡಿಗರ ಎದೆಯ ದನಿಗೆ ಓಗೊಟ್ಟು ನಾಡಧ್ವಜವೊಂದನ್ನು ವಿನ್ಯಾಸಗೊಳಿಸಿ, ಮನ್ನಣೆಗಾಗಿ ಐದು ವರ್ಷಗಳ ಹಿಂದೆಯೇ ನಾವು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೆವು. ಆದರೆ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಈ ಬೇಡಿಕೆಯನ್ನು ತಿರಸ್ಕರಿಸಿ ಕನ್ನಡ–ಕನ್ನಡಿಗ–ಕರ್ನಾಟಕಕ್ಕೆ ಅನ್ಯಾಯ ಎಸಗಿದೆ ಎಂದು ದೂರಿದ್ದಾರೆ. ರಾಜ್ಯಗಳು ತಮ್ಮದೇ ಧ್ವಜ ಹೊಂದಲು ಸಂವಿಧಾನ ಇಲ್ಲವೇ ಕಾನೂನಿನಲ್ಲಿ ಯಾವ ಅಡ್ಡಿಯೂ ಇಲ್ಲ. ನಾವು ನಮಗೊಂದು ನಾಡಗೀತೆಯನ್ನು ಒಪ್ಪಿಕೊಂಡಿಲ್ಲವೇ? ಇದರಿಂದ ರಾಷ್ಟ್ರಗೀತೆಗೆ ಅವಮಾನ ಮಾಡಿದಂತಾಗುವುದೇ? ರಾಷ್ಟ್ರಧ್ವಜದ ಕೆಳಗೆ ಬೇರೆ ಧ್ವಜಗಳನ್ನು ಹಾರಿಸಬಹುದೆಂದು ರಾಷ್ಟ್ರಧ್ವಜ ಸಂಹಿತೆಯೇ ಹೇಳಿದೆ. ಹೀಗಿರುವಾಗ ಕನ್ನಡಿಗರ ಬಗ್ಗೆ ನಿಮಗೆ ಯಾಕೆ ತಾತ್ಸಾರ? ಎಂದು ಪ್ರಶ್ನಿಸಿದ್ದಾರೆ. ಕೇಂದ್ರ ಬಿಜೆಪಿ ಸರ್ಕಾರ ಕರ್ನಾಟಕದ ಮೇಲೆ ಸೇಡು ತೀರಿಸಿಕೊಳ್ಳುತ್ತಿದೆಯೇ? ಇದು ನನ್ನ ಪ್ರಶ್ನೆ ಮಾತ್ರವಲ್ಲ, ನಾಡಿನ ಆರೂವರೆ ಕೋಟಿ ಸ್ವಾಭಿಮಾನಿ ಕನ್ನಡಿಗರ ಪ್ರಶ್ನೆಯಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ದೆಹಲಿ ಜೆಎನ್‌ಯುನಲ್ಲಿ ಕನ್ನಡೇತರರಿಗೆ ಕನ್ನಡ ಕಲಿಸುತ್ತಿರುವ ಪ್ರೊ.ವಿಶ್ವನಾಥ್



ಮೈಸೂರು,ಅ.31(ಎಸ್‌ಪಿಎನ್)– ದೆಹಲಿಯ ಜವಾಹರ ಲಾಲ್ ನೆಹರು (ಜೆಎನ್‌ಯು) ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಲ್ಲೂ ಕನ್ನಡೇತರರಿಗೆ ಕನ್ನಡ ಕಲಿಸುವಲ್ಲಿ ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಪ್ರೊ.ವಿಶ್ವನಾಥ್ ಶ್ರಮಿಸಿದ್ದು, 68ನೇ ಕನ್ನಡ ರಾಜ್ಯೋತ್ಸವವನ್ನು ದೆಹಲಿಯಲ್ಲೂ ಅರ್ಥಗರ್ಭಿತವಾಗಿ ಆಚರಿಸಲು ಮುಂದಾಗಿದ್ದಾರೆ.

ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕುವೆಂಪು, ದ.ರಾ.ಬೇಂದ್ರೆ, ಡಾ.ಶಿವರಾಮ ಕಾರಂತ, ವಿ.ಕೃ.ಗೋಕಾಕ್ ಸೇರಿದಂತೆ ಇತರೆ ಖ್ಯಾತನಾಮರ ಸ್ಮರಣೆ, ವಚನ ಸಾಹಿತ್ಯ, ಬಂಡಾಯ ಸಾಹಿತ್ಯದ ವಿಚಾರ ಸಂಕಿರಣ ಸೇರಿದಂತೆ ಇತರೆ ಕನ್ನಡ ವಿಚಾರಧಾರೆಗಳು ಕುರಿತು ಹತ್ತು–ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡ ತೇರನ್ನು ದೆಹಲಿಯಲ್ಲೂ ಪಸರಿಸಲಾಗುತ್ತಿದೆ ಎನ್ನುತ್ತಾರೆ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕ ಪ್ರೊ.ವಿಶ್ವನಾಥ್.

ಕಳೆದ ಮೂರು ವರ್ಷಗಳಿಂದ 10ರಿಂದ 15 ಕನ್ನಡೇತರ ಮಂದಿಗೆ ಕನ್ನಡ ಕಲಿಕೆ. ಇದರಲ್ಲಿ ಓರ್ವ ವಿದ್ಯಾರ್ಥಿಗೆ ಕನ್ನಡದಲ್ಲಿ ಸಂಶೋಧನೆ ಕೈಗೊಳ್ಳಲು ಸಹಕಾರ ನೀಡಲಾಗಿದೆ. ಅಲ್ಲದೆ, ಆ ಕೇಂದ್ರದ ಮೂಲಕವೇ ಮೈಸೂರು ವಿವಿಯ ಮೂರು ಮಂದಿ ಕನ್ನಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಾಗಿದೆ. ಹೀಗೆ ಹತ್ತು–ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡ ಭಾಷೆ ಬೆಳವಣಿಗೆ ಮೂಲಕ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕನ್ನಡ ಭಾಷೆ ಪಸರಿಸಲು ಅವಕಾಶ ಸಿಕ್ಕಿರುವುದು ನನ್ನ ಅದೃಷ್ಟ, ಅಲ್ಲದೆ, ಈ ಕೇಂದ್ರದಿಂದ 'ಆಧುನಿಕ ಮಹಿಳಾ ಕಾವ್ಯ' ಪುಸ್ತಕವನ್ನು ಕನ್ನಡದಿಂದ ಹಿಂದಿಗೆ ಅನುವಾದಿಸಿದ್ದು, ಈ ಪುಸ್ತಕ ನವೆಂಬರ್ ಕೊನೆಯ ವಾರ ಬಿಡುಗಡೆಗೊಳ್ಳಲಿದೆ ಎಂದು ತಿಳಿಸಿದರು,

> ನಾನು ಈ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡು ಮೂರು ವರ್ಷಗಳಾಗಿವೆ. ದೇಶದ ಬೇರೆ ಬೇರೆ ವಿವಿಗಳಲ್ಲಿ ಪ್ರಬಂಧ ಮಂಡನೆ, ವಚನ ಸಾಹಿತ್ಯ, ನವ್ಯ, ಹಳೆಗನ್ನಡ ಸಾಹಿತ್ಯದ ವಿಚಾರ ಮಂಡನೆ ಹಾಗೂ ಇತರೆ ಕನ್ನಡದ ನೆಲ–ಜಲ–ಭಾಷೆಗಾಗಿ ದುಡಿದ ಖ್ಯಾತ ನಾಮರ ಕುರಿತು ದೆಹಲಿ ಕನ್ನಡ ಸಂಘ ಹಾಗೂ ಇತರೆ ಕನ್ನಡಿಗರ ಸಹಯೋಗದಲ್ಲಿ ಪರಿಚಯಿಸಲಾಗುತ್ತಿದೆ.
> –ಪ್ರೊ.ವಿಶ್ವನಾಥ್

ಪ್ರತಿ ತಿಂಗಳು ಆನ್‌ಲೈನ್ ಮೂಲಕ ನಡೆಸುವ ರಸಪ್ರಶ್ನೆ ಕಾರ್ಯಕ್ರಮದಲ್ಲಿ ದೇಶದ ವಿವಿಧ ರಾಜ್ಯದಲ್ಲಿ ನೆಲೆಸಿರುವ ಕನ್ನಡಿಗರು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕನ್ನಡದ ಮೇಲಿನ ಪ್ರೀತಿಯನ್ನು ಇಮ್ಮಡಿಗೊಳಿಸಿದ್ದಾರೆ. ಅಲ್ಲದೆ, ದೆಹಲಿಯಲ್ಲಿರುವ ಕನ್ನಡ ಶಾಲೆಗೆ ವರ್ಷದಲ್ಲಿ 4–5 ಬಾರಿ ಭೇಟಿ ನೀಡಿ, ರಸಋಷಿ ಕುವೆಂಪು, ದ.ರಾ.ಬೇಂದ್ರ, ತಿನಂಶ್ರೀ, ಡಾ.ಎಸ್.ಎಲ್.ಭೈರಪ್ಪ ಸೇರಿದಂತೆ ಹಿರಿಯ ಸಾಹಿತಿಗಳ ಪರಿಚಯ, ಹಳೆಗನ್ನಡದ ಪಾಠಗಳನ್ನು ಆ ಮಕ್ಕಳಿಗೆ ಪರಿಚಯಿಸುವ ಕಾರ್ಯಕ್ರಮಗಳ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಮರಾಠ ಮೀಸಲಾತಿ ಹೋರಾಟ: ಬೀಡ್ ಜಿಲ್ಲೆಯಲ್ಲಿ ಪರಿಸ್ಥಿತಿ ನಿಯಂತ್ರಣಕ್ಕೆ, 49 ಮಂದಿ ಬಂಧನ



ಛತ್ರಪತಿ ಸಂಭಾಜಿನಗರ, ಅ.31– ಮರಾಠ ಸಮುದಾಯಕ್ಕೆ ಮೀಸಲಾತಿ ನೀಡುವಂತೆ ಆಗ್ರಹಿಸಿ ನಡೆಯುತ್ತಿರುವ ಹೋರಾಟ ಹಿಂಸಾಚಾರಕ್ಕೆ ತಿರುಗಿದ್ದು, ಈ ಸಂಬಂಧ ಬೀಡ್ ಜಿಲ್ಲೆಯಲ್ಲಿ ಪೊಲೀಸರು 49 ಜನರನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ.

ರಾಜಕಾರಣಿಗಳ ಆಸ್ತಿಗಳನ್ನು ಗುರಿಯಾಗಿಸಿಕೊಂಡು ನಡೆದ ಹಿಂಸಾಚಾರ ಮತ್ತು ಬೆಂಕಿ ಹಚ್ಚಿದ ಸರಣಿ ಘಟನೆಗಳ ನಂತರ ಬೀಡ್ ಜಿಲ್ಲೆಯ ಕೆಲವು ಭಾಗಗಳಲ್ಲಿ ಕರ್ಫ್ಯೂ ವಿಧಿಸಲಾಗಿದೆ. ಅಲ್ಲದೆ, ಇಂಟರ್ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಬೀಡ್ ಪೊಲೀಸ್ ವರಿಷ್ಠಾಧಿಕಾರಿ ನಂದಕುಮಾರ್ ಠಾಕೂರ್ ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ಗಲಭೆ ಮತ್ತು ಜೀವಕ್ಕೆ ಅಪಾಯವನ್ನುಂಟುಮಾಡುವ ಅಪರಾಧಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇದುವರೆಗೆ 49 ಮಂದಿಯನ್ನು ಬಂಧಿಸಲಾಗಿದೆ. ರಾತ್ರಿ ಯಾವುದೇ ಅಹಿತಕರ ಘಟನೆ ನಡೆದಿಲ್ಲ ಮತ್ತು ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಹೆಚ್ಚುವರಿ ಪೊಲೀಸ್ ಪಡೆಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೀಡ್ ಜಿಲ್ಲಾಧಿಕಾರಿ ದೀಪಾ ಮುಧೋಳ ಮುಂಡೆ ಹೊರಡಿಸಿರುವ ಆದೇಶದಂತೆ, ಜಿಲ್ಲೆಯಾದ್ಯಂತ ಹಾದು ಹೋಗುವ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳ ಜೊತೆಗೆ ಜಿಲ್ಲಾಧಿಕಾರಿ ಕಚೇರಿ, ತಾಲೂಕು ಕೇಂದ್ರ ಕಚೇರಿಗಳಿಂದ 5 ಕಿಲೋಮೀಟರ್ ವ್ಯಾಪ್ತಿಯಲ್ಲಿ ಕರ್ಫ್ಯೂ ಜಾರಿಗೊಳಿಸಲಾಗಿದೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.

ಸೋಮವಾರ ಬೆಳಗ್ಗೆ ಬೀಡ್ ಜಿಲ್ಲೆಯ ಮಜಲಗಾಂವ್ ಪಟ್ಟಣದಲ್ಲಿರುವ ಎನ್‌ಸಿಪಿ (ಅಜಿತ್ ಪವಾರ್ ಗುಂಪು) ಶಾಸಕ ಪ್ರಕಾಶ್ ಸೋಲಂಕೆ ಅವರ ನಿವಾಸಕ್ಕೆ ಬೆಂಕಿ ಹಚ್ಚಲಾಯಿತು ಮತ್ತು ಪ್ರತಿಭಟನಾಕಾರರ ಗುಂಪೊಂದು ಮನೆ ಮೇಲೆ ಕಲ್ಲು ತೂರಾಟ ನಡೆಸಿತು ಎಂದು ಪೊಲೀಸರು ಮೊದಲು ತಿಳಿಸಿದ್ದಾರೆ.

ಮರಾಠ ಮೀಸಲಾತಿ ಹೋರಾಟದ ಕುರಿತು ಮತ್ತು ಮೀಸಲು ಹೋರಾಟದ ಕಾರ್ಯಕರ್ತ ಮನೋಜ್ ಜಾರಂಜ್ ಅವರ ಬಗ್ಗೆ ಮಾಡಿದ್ದ ಕಾಮೆಂಟ್ ಮಾಡಿದ ಶಾಸಕರ ಆಡಿಯೋ ಕ್ಲಿಪ್ ವೈರಲ್ ಆದ ನಂತರ, ಸೋಲಂಕೆ ಅವರ ನಿವಾಸದ ಮುಂದೆ ನಿಲ್ಲಿಸಿದ್ದ ಕಾರನ್ನು ಗುಂಪು ಸುಟ್ಟು ಹಾಕಿತು.

ಮಹಾತ್ಮ ಗಾಂಧಿ ಹೆಸರೇ ಒಂದು ಆದರ್ಶ

ವಾರ್ತಾ–ಸಂಪರ್ಕ ಇಲಾಖೆ ಉಪನಿರ್ದೇಶಕ ಅಶೋಕ್‌ಕುಮಾರ್ ಗುಣಗಾನ



ಮೈಸೂರು,ಅ.31–ಗಾಂಧೀಜಿ ಹೆಸರೇ ಒಂದು ಆದರ್ಶ. ಆ ಹೆಸರೇ ಒಂದು ಅಗಾಧ ಶಕ್ತಿ. ಅವರೊಬ್ಬ ಆದರ್ಶ ವ್ಯಕ್ತಿ. ಅವರು ನಾಡಿಗೆ ನೀಡಿದ ಕೊಡುಗೆ ಅಪಾರವಾದದ್ದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಡಿ.ಅಶೋಕ್‌ಕುಮಾರ್ ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಹೊಸಹುಂಡಿ ಸರ್ಕಾರಿ ಪ್ರೌಢಶಾಲೆ ವತಿಯಿಂದ ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಗಾಂಧಿ ಚಿತ್ರ ರಚನಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಗಾಂಧೀಜಿ ಅವರ ಜೀವನವು ಒಂದು ಶ್ರೇಷ್ಠ ಪುಸ್ತಕದಂತೆ, ಪ್ರತಿಯೊಬ್ಬರೂ ಗಾಂಧಿಯನ್ನು ಓದಿಕೊಳ್ಳಬೇಕು. ಗಾಂಧಿಯನ್ನು ಓದಿಕೊಂಡರೆ ಜೀವನ ಮಾರ್ಗವನ್ನು ಓಡಿಕೊಂಡಂತೆ. ಸತ್ಯ ಅಹಿಂಸೆಯ ಪ್ರತಿಪಾದಕರಾಗಿದ್ದ ಅವರು ಸ್ವಾತಂತ್ರ್ಯ ಹೋರಾಟದ ನೇತಾರರು, ಬಲಿಷ್ಠ ಬ್ರಿಟಿಷ್ ಸೈನ್ಯವನ್ನು ಅಹಿಂಸೆಯಿಂದ ಮಣಿಸಿದವರು ಎಂದು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಪ್ರತಿ ವರ್ಷವೂ ಕೂಡ ಗಾಂಧೀಜಿಯವರ ಕುರಿತು ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಗಾಂಧೀಜಿ ಅವರ ಚಿತ್ರ ರಚನೆ ಮತ್ತು ಅವರ ಜೀವನ ಸಾಧನೆ ಕುರಿತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಪ್ರತಿ ಜಿಲ್ಲೆಯಲ್ಲಿಯೂ ಗಾಂಧೀಜಿ ಅವರ ನೆನಪಿನ ಗಾಂಧಿಭವನಗಳನ್ನು ನಿರ್ಮಿಸಲಾಗುತ್ತಿದೆ ಎಂದರು.

ಶಾಲೆ ಮುಖ್ಯೋಪಾಧ್ಯಾಯ ಮಹಮ್ಮದ್ ಶರೀಫ್ ಮಾತನಾಡಿ, ಗಾಂಧೀಜಿಯವರ ಜೀವನವು ಪ್ರತಿಯೊಬ್ಬರಿಗೂ ಆದರ್ಶವಿದ್ದಂತೆ. ಅವರ ಜೀವನದಲ್ಲಿನ ಅಂಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ನಾವು ಕೂಡ ಮಹಾತ್ಮರ ಅಂಶಗಳನ್ನು ಅಳವಡಿಸಿಕೊಳ್ಳುವ ಕಡೆ ಹೆಜ್ಜೆ ಇಡಬಹುದಾಗಿದೆ.

> ಗಾಂಧೀಜಿ ಅವರ ಸರಳತೆ, ನೇರನುಡಿ, ಅವರು ಜೀವನದಲ್ಲಿ ಅಳವಡಿಸಿಕೊಂಡಿರುವ ತತ್ವಗಳನ್ನು ನಮ್ಮ ಜೀವನದಲ್ಲೂ ನಾವು ಅಳವಡಿಸಿಕೊಂಡು ದೇಶಪ್ರೇಮ ಮೈಗೂಡಿಸಿಕೊಳ್ಳಬೇಕಾಗಿದೆ.
> –ಡಿ.ಅಶೋಕ್‌ಕುಮಾರ್

ಮಹಾತ್ಮ ಗಾಂಧೀಜಿಯವರು ಆಫ್ರಿಕಾಗೆ ಹೋಗಿದ್ದ ಸಂದರ್ಭದಲ್ಲಿ ಅವರ ಜೀವನ ಶೈಲಿಯೇ ವಿಭಿನ್ನವಾಗಿತ್ತು. ಅವರು ಧರಿಸಿದ್ದ ಉಡುಪುಗಳು ಕೂಡ ಶಿಸ್ತುಬದ್ಧವಾಗಿದ್ದವು. ಅವರು ಜೀವನ ಶೈಲಿಯನ್ನು ಕೂಡ ಶಿಸ್ತುಬದ್ಧವಾಗಿ ನಡೆಸುತ್ತಿದ್ದರು. ಮಹಾತ್ಮ ಗಾಂಧಿ ಎಂಬುದು ದೇಶದ ಹೆಸರಲ್ಲ ಅದು ರಾಷ್ಟ್ರದ ಪ್ರತೀಕ ಎಂದರು.

ಶಾಲೆಯ ಸಹ ಶಿಕ್ಷಕರು ಮಾತನಾಡಿ, ಮಹಾತ್ಮ ಗಾಂಧಿ ಅವರ ಜೀವನ ಪ್ರತಿಯೊಬ್ಬ ಮಕ್ಕಳಿಗೂ ತಿಳಿಸಿದೆ. ಪ್ರತಿವರ್ಷ ಈ ರೀತಿಯ ಸ್ಪರ್ಧೆಗಳನ್ನು ಆಯೋಜಿಸುವುದು ಮಕ್ಕಳಲ್ಲಿ ಮಹಾತ್ಮ ಗಾಂಧೀಜಿಯವರ ಜೀವನವನ್ನು ಅರಿಯಲು ಉಪಯುಕ್ತವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಗಾಂಧಿ ಚಿತ್ರ ರಚನಾ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ರವಿಕುಮಾರ್ ಮತ್ತು ಶಾಲೆ ಶಿಕ್ಷಕರು ಭಾಗವಹಿಸಿದ್ದರು.

ಕೌಶಲ್ಯ ಅಭಿವೃದ್ಧಿ ನಿಗಮ ಪ್ರಕರಣ

ಜೈಲಿನಿಂದ ಹೊರಬಂದ ಚಂದ್ರಬಾಬು ನಾಯ್ಡು

ರಾಜಮಹೇಂದ್ರವರಂ: ಆಂಧ್ರಪ್ರದೇಶದ ಕೌಶಲ್ಯ ಅಭಿವೃದ್ಧಿ ನಿಗಮದ ಅವ್ಯವಹಾರ ಪ್ರಕರಣದಲ್ಲಿ ಆಂಧ್ರಪ್ರದೇಶ ಹೈಕೋರ್ಟ್‌ನಿಂದ ತಾತ್ಕಾಲಿಕ ಜಾಮೀನು ಪಡೆದಿರುವ ಟಿಡಿಪಿ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು ಅವರು ಮಂಗಳವಾರ ಇಲ್ಲಿನ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾದರು.

53 ದಿನಗಳ ಜೈಲುವಾಸ ಮುಗಿಸಿ ಸಂಜೆ 4–20ಕ್ಕೆ ಜೈಲಿನಿಂದ ಹೊರಬಂದ ಅವರನ್ನು ಕುಟುಂಬಸ್ಥರು, ಪಕ್ಷದ ಮುಖಂಡರು, ಕಾರ್ಯಕರ್ತರು ಬರಮಾಡಿಕೊಂಡರು. ಜೈಲಿನ ಹೊರಗೆ ಸೇರಿದ್ದ ಸಾವಿರಾರು ಕಾರ್ಯಕರ್ತರು, ಟಿಡಿಪಿ ಧ್ವಜ ಹಾರಿಸುವ ಮೂಲಕ ನಾಯ್ಡು ಅವರಿಗೆ ಅದ್ದೂರಿ ಸ್ವಾಗತ ಕೋರಿದರು.

ಪ್ಯಾಲೆಸ್ಟೀನ್ ಪರ ಪ್ರತಿಭಟನೆಗೆ ಅನುಮತಿ ನಿರಾಕರಣೆ ವಿಚಾರ

ರಾಜ್ಯ ಸರ್ಕಾರದ ವಿರುದ್ಧ ಎಸ್‌ಡಿಪಿಐ ಆಕ್ರೋಶ



ಮೈಸೂರು,ಅ.31(ಪಿಎಂ)– ರಾಜ್ಯ ಕಾಂಗ್ರೆಸ್ ಸರ್ಕಾರ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿದ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಸರ್ಕಾರ ತನ್ನ ಈ ನಿಲುವು ಬದಲಿಸಿಕೊಳ್ಳದೇ ಇದ್ದಲ್ಲಿ ದೊಡ್ಡ ಜನಾಂದೋಲನ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೈಸೂರಿನ ಉದಯಗಿರಿಯಲ್ಲಿರುವ ಪಕ್ಷದ ಕಚೇರಿಯಲ್ಲಿ ಮಂಗಳವಾರ ತುರ್ತು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ವಿಶ್ವಸಂಸ್ಥೆಯ ನಿಯಮಾವಳಿಗಳನ್ನು ಉಲ್ಲಂಘಿಸಿ ಇಸ್ರೇಲ್ ನಿರಂತರವಾಗಿ ಪ್ಯಾಲೆಸ್ಟೀನ್ ಮೇಲೆ ಆಕ್ರಮಣ ನಡೆಸುತ್ತಿದೆ. ಇದನ್ನು ಖಂಡಿಸಿ ಇಡೀ ವಿಶ್ವದಲ್ಲೇ ಪ್ಯಾಲೆಸ್ಟೀನ್ ಪರ ಬೆಂಬಲ ವ್ಯಕ್ತವಾಗುತ್ತಿದೆ. ಕಾಂಗ್ರೆಸ್ ಸೆಂಟ್ರಲ್ ವರ್ಕಿಂಗ್ ಕಮಿಟಿ ಕೂಡ ಪ್ಯಾಲೆಸ್ಟೀನ್ ಪರ ನಿಲುವು ಪ್ರಕಟಿಸಿದೆ. ಆದರೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಪ್ಯಾಲೆಸ್ಟೀನ್ ಪರ ಹೋರಾಟಕ್ಕೆ ಅನುಮತಿ ನಿರಾಕರಿಸುತ್ತಿದೆ ಎಂದು ದೂರಿದರು.

ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಬೇಕು. ಶಾಂತಿಯುತವಾದ ಪ್ರತಿಭಟನೆಗೆ ಸಂವಿಧಾನ ನಮಗೆ ಹಕ್ಕು ಕೊಟ್ಟಿದ್ದರೂ ಸರ್ಕಾರ ಅನುಮತಿ ನಿರಾಕರಿಸಿರುವುದು ಅಕ್ಷಮ್ಯ. ಇಂದು ಮಧ್ಯಾಹ್ನ 3ರಿಂದ 4 ಗಂಟೆವರೆಗೆ ಮೈಸೂರಿನ ಮಿಲಾದ್ ಪಾರ್ಕ್ ಬಳಿ ಶಾಂತಿಯುತ ಪ್ರತಿಭಟನೆ ಮಾಡಲು ವಾರದ ಹಿಂದೆಯೇ ನಗರ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದೆವು. ಆದರೆ ಅವರು 'ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ನಮಗೆ ರಾಜ್ಯ ಸರ್ಕಾರದ ನಿರ್ದೇಶನ ಇದೆ' ಎಂದು ನಿನ್ನೆ ರಾತ್ರಿ ಉತ್ತರ ನೀಡಿದ್ದಾರೆ. ಹಾಗಾಗಿ ಸರ್ಕಾರ ಇದಕ್ಕೆ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು.

ಶಾಂತಿಯುತ ಪ್ರತಿಭಟನೆಗೆ ಅನುಮತಿ ಕೊಡುವುದಿಲ್ಲವೆಂದರೆ ನಿಮ್ಮ ಸರ್ವಾಧಿಕಾರ ಧೋರಣೆಯನ್ನು ಖಂಡಿಸುತ್ತೇವೆ. ರಾಜ್ಯದ ಕಾಂಗ್ರೆಸ್ ಸರ್ಕಾರವು ಆರ್‌ಎಸ್‌ಎಸ್ ಪ್ರಭಾವಕ್ಕೆ ಒಳಗಾಗಿದೆಯೇ ಎಂದು ಪ್ರಶ್ನೆ ಮಾಡಬೇಕಾಗುತ್ತದೆ ಎಂದು ಕಿಡಿಕಾರಿದರು. ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್‌ಖಾನ್, ಉಪಾಧ್ಯಕ್ಷ ಎಸ್.ಸ್ವಾಮಿ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಇ–ಕೆವೈಸಿ ಸಮಸ್ಯೆಯಿಂದ ಕೆಲವರಿಗೆ ಗೃಹಲಕ್ಷ್ಮಿ ಹಣ ಬಿಡುಗಡೆಯಾಗಿಲ್ಲ

ಸಮಸ್ಯೆ ಪರಿಹರಿಸಿ, ಕೆಲವೇ ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಹಣ ಜಮಾ: ಜಿಲ್ಲಾಧಿಕಾರಿ ಡಾ.ರಾಜೇಂದ್ರ ಮಾಹಿತಿ

- ಶೇಕಡ 30 ಮಹಿಳೆಯರಿಗೆ ಹಣ ಬಂದಿಲ್ಲ
- ಅನ್ನಭಾಗ್ಯ ಹಣ ಶೀಘ್ರದಲ್ಲೇ ಬಿಡುಗಡೆ
- 2 ತಿಂಗಳಲ್ಲಿ ಮನೆ ಕಟ್ಟದಿದ್ದರೆ ಹಣ ವಾಪಸು
- ದೀಪಾವಳಿ ಹಬ್ಬದಲ್ಲಿ ಅವಘಡ ಸಂಭವಿಸದಂತೆ ಎಚ್ಚರಿಕೆ ವಹಿಸಿ



ಮೈಸೂರು, ಅ.31(ಬಿಎಲ್‌ಯು)– ಗೃಹಲಕ್ಷ್ಮಿ ಯೋಜನೆಯಲ್ಲಿ ಇ–ಕೈವೈಸಿ ಸಮಸ್ಯೆಯಿಂದ ಹಣ ವರ್ಗಾವಣೆಯಲ್ಲಿ ಸಮಸ್ಯೆಯಾಗಿದ್ದು, ಇದನ್ನು ಪರಿಹಾರ ಮಾಡಿ ಕೆಲವೇ ದಿನಗಳಲ್ಲಿ ಡಿಬಿಟಿ (Direct Benefit Transfer) ಮೂಲಕ ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಭರವಸೆ ನೀಡಿದ್ದಾರೆ.

ಮೈಸೂರು ನಗರಪಾಲಿಕೆಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆಯಲ್ಲಿ ಶೇಕಡ 70ರಷ್ಟು ಫಲಾನುಭವಿಗಳಿಗೆ ಡಿಬಿಟಿ ಮೂಲಕ ಹಣ ವರ್ಗಾವಣೆ ಮಾಡಲಾಗಿದೆ. ಆದರೆ ಉಳಿದ ಶೇಕಡ 30ರಷ್ಟು ಮಹಿಳೆಯರಿಗೆ ಇ–ಕೈವೈಸಿ ಸಮಸ್ಯೆಯಿಂದ ಹಣ ಜಮಾ ಆಗಿಲ್ಲ. ಈ ಹಿನ್ನೆಲೆ ಸಂಬಂಧಿಸಿದ ಫಲಾನುಭವಿಗಳ ಮಾಹಿತಿಯನ್ನು ಪಡೆಯಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡಲಾಗುವುದು ಎಂದು ತಿಳಿಸಿದರು.

ಹಾಗೆಯೇ ಅನ್ನಭಾಗ್ಯ ಯೋಜನೆಯಲ್ಲಿ 5 ಕೆ.ಜಿ. ಅಕ್ಕಿ ಬದಲು ಹಣ ನೀಡಲಾಗುತ್ತಿದೆ. ಆದರೆ ಸೆಪ್ಟೆಂಬರ್ ತಿಂಗಳ ನೇರ ನಗದು ವರ್ಗಾವಣೆಯು ಬಾಕಿ ಉಳಿದಿದ್ದು, ಸರ್ಕಾರದಿಂದ ಹಣ ಬಂದ ನಂತರ ತಕ್ಷಣ ವರ್ಗಾವಣೆ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳಿಗೆ ಅಧಿಕಾರಿಗಳು ಮಾಹಿತಿ ನೀಡಿದರು.

ನೆರೆ ಸಂದರ್ಭದಲ್ಲಿ ಮನೆ ಕಳೆದುಕೊಂಡವರು 2 ತಿಂಗಳ ಒಳಗೆ ಮನೆ ನಿರ್ಮಾಣ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರದಿಂದ ಮಂಜೂರಾಗಿರುವ ಹಣ ಹಿಂಪಡೆಯಲಾಗುವುದು ಎಂದು ಡಾ.ರಾಜೇಂದ್ರ ಎಚ್ಚರಿಕೆ ನೀಡಿದರು.

ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದೆ. ಆದರೆ ಹೊರ ಜಿಲ್ಲೆ ದಾಖಲೆಗಳ ಕೊರತೆಯಿಂದ ಕೆಲ ಅಭ್ಯರ್ಥಿಗಳ ನೇಮಕಾತಿ ತಡವಾಗುತ್ತಿದೆ. ಈ ಸಂಬಂಧ ಅಲ್ಲಿನ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸಿ ಆದಷ್ಟು ಬೇಗ ಸಿಂಧುತ್ವ ಪ್ರಮಾಣ ಪತ್ರ ನೀಡುವಂತೆ ತಿಳಿಸಲಾಗುವುದು ಎಂದು ಹೇಳಿದರು.

ಹಾಸ್ಟೆಲ್ ನಿರ್ಮಾಣ: ಸಮಾಜ ಕಲ್ಯಾಣ ಇಲಾಖೆಯಿಂದ ಹೆಬ್ಬಾಳ್‌ನಲ್ಲಿ ವಿದ್ಯಾರ್ಥಿನಿಲಯದ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಇನ್ನು ಎರಡು ವಿದ್ಯಾರ್ಥಿನಿಲಯದ ನಿರ್ಮಾಣ ಕಾರ್ಯ ಆರಂಭವಾಗಬೇಕಿದೆ. ಈ ಮಧ್ಯೆ ವಿದ್ಯಾರ್ಥಿನಿಲಯದ ಕೊರತೆ ಇರುವ ಕಾರಣ ಬಾಡಿಗೆ ಕಟ್ಟಡ ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಡಿಸಿ ಡಾ.ರಾಜೇಂದ್ರ ಹೇಳಿದರು.

ದೀಪಾವಳಿ ಸಮೀಪದಲ್ಲಿರುವ ಕಾರಣ ಯಾವುದೇ ಬೆಂಕಿ ಹಾಗೂ ವಿದ್ಯುತ್ ಅವಘಡ ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು. ಪಟಾಕಿ ಮಾರಾಟಗಾರರ ಸಭೆ ನಡೆಸಿ ಹಸಿರು ಪಟಾಕಿ ಬಳಸುವಂತೆ ಸೂಚಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ತಾಕೀತು ಮಾಡಿದರು.

> ಬರಗಾಲದ ಪ್ರದೇಶಗಳಿಗೆ ಅಧಿಕಾರಿಗಳು ಭೇಟಿ ನೀಡಿ ತಳಮಟ್ಟದಿಂದ ಕೆಲಸ ಮಾಡಬೇಕು. ಅಭಿವೃದ್ಧಿ ಕಾರ್ಯ ಕುಂಠಿತವಾಗದಂತೆ ಪರಸ್ಪರ ಇಲಾಖೆಗಳ ಸಹಕಾರದೊಂದಿಗೆ ಕಾರ್ಯನಿರ್ವಹಿಸಬೇಕು. ಕುಡಿಯುವ ನೀರು ಪೂರೈಕೆಯಲ್ಲಿ ಎಚ್ಚರಿಕೆ ವಹಿಸಿ, ಈ ತಿಂಗಳಾಂತ್ಯಕ್ಕೆ ಕುಡಿಯುವ ನೀರಿನ ಟೆಂಡರ್ ಪೂರ್ಣಗೊಳಿಸಬೇಕು
> –ಸೆಲ್ವಕುಮಾರ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡ ಸೇರಿದಂತೆ ಎಲ್ಲಾ ಸರ್ಕಾರಿ ಇಲಾಖೆಗಳ ಕಟ್ಟಡಗಳನ್ನು ಸ್ವಚ್ಛ ಹಾಗೂ ವ್ಯವಸ್ಥಿತವಾಗಿರುವಂತೆ ನೋಡಿಕೊಳ್ಳಬೇಕು ಎಂದು ಡಾ.ರಾಜೇಂದ್ರ ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಮುಡಾ ಆಯುಕ್ತ ದಿನೇಶ್‌ಕುಮಾರ್, ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 1 ನವೆಂಬರ್ 2023

ನಿಮ್ಮ ವಾಕ್ ಸ್ವಾತಂತ್ರ್ಯ ಘನತೆಯಿಂದ ಬಳಸಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರಿಗೆ ಕಿವಿಮಾತು

● ಸರ್ಕಾರ ಜನಪರವಾಗಿದೆಯೋ ಇಲ್ಲವೋ ಎಂಬುದನ್ನು ಪ್ರಾಮಾಣಿಕವಾಗಿ ಜನರಿಗೆ ತಲುಪಿಸಿ ● ಮಂಡ್ಯದಲ್ಲಿ ಅಂತರ ಜಿಲ್ಲಾ ಪತ್ರಕರ್ತರ ಅದ್ಧೂರಿ ಸಮ್ಮೇಳನ

ಮಂಡ್ಯ, ಅ.31– ನನ್ನ ನೇತೃತ್ವದ ರಾಜ್ಯ ಸರ್ಕಾರದಲ್ಲಿ ತಪ್ಪುಗಳು ಕಂಡರೆ ಮುಲಾಜಿಲ್ಲದೇ ಬರೆಯಿರಿ. ನಮ್ಮ ಸರ್ಕಾರ ಜನಪರವಾಗಿದೆಯೇ ಇಲ್ಲವೇ ಎಂಬುದನ್ನು ನೀವೇ ಜನರಿಗೆ ತಿಳಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಂಗಳವಾರ ನಗರದ ಸುಮರವಿ ಸಮುದಾಯ ಭವನದಲ್ಲಿ ಶ್ರೀಕ್ಷೇತ್ರ ಆದಿಚುಂಚನಗಿರಿ ಮಠ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಮಂಡ್ಯ ಘಟಕದ ಆಶ್ರಯದಲ್ಲಿ ನಡೆದ ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ತುಮಕೂರು ಹಾಗೂ ರಾಮನಗರ ಜಿಲ್ಲೆಗಳ ಕಾರ್ಯನಿರತ ಪತ್ರಕರ್ತರ ಅಂತರ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ನನ್ನ ಬಗ್ಗೆ ಸುಳ್ಳು ಬರೆದಾಗ, ಸತ್ಯ ತಿರುಚಿ ಸುದ್ದಿ ಪ್ರಸಾರ ಮಾಡಿದಾಗ ನಾನು ಯಾವತ್ತೂ ಯಾವ ಮಾಧ್ಯಮದವರಿಗೂ ಯಾಕೆ ಸುಳ್ಳು ಹೇಳುತ್ತೀರಾ ಎಂದು ಕರೆ ಮಾಡಿ ಕೇಳಿಲ್ಲ, ಸ್ಪಷ್ಟಪಡಿಸಿ ಎಂದು ಕೇಳಿಲ್ಲ. ಸರ್ಕಾರ ಒಳ್ಳೆ ಕೆಲಸ ಮಾಡಿದಾಗ ಅದನ್ನೂ ಜನರಿಗೆ ತಲುಪಿಸಿ. ನಿಮಗೆ ವಾಕ್ ಸ್ವಾತಂತ್ರ್ಯ ಇದೆ. ಅದನ್ನು ಘನತೆಯಿಂದ ಬಳಸಿ ಎಂದು ಸಲಹೆ ನೀಡಿದರು.



ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಮಂಡ್ಯದ ಜನತೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಜಿಲ್ಲೆಯಲ್ಲಿ 1 ಕೋಟಿ 98 ಲಕ್ಷ ಮಹಿಳೆಯರು ಶಕ್ತಿ ಯೋಜನೆಯಲ್ಲಿ ಪ್ರಯಾಣ ಮಾಡಿದ್ದಾರೆ. 4 ಲಕ್ಷ 10 ಸಾವಿರ ಜನರಿಗೆ ಅನ್ನಭಾಗ್ಯ ಯೋಜನೆ ಹಣ ಸಂದಾಯವಾಗಿದೆ. 4 ಲಕ್ಷದ 7 ಸಾವಿರ ಜನರಿಗೆ ಗೃಹಲಕ್ಷ್ಮಿ ಯೋಜನೆ ಲಾಭವಾಗಿದೆ. 4 ಲಕ್ಷ 37 ಸಾವಿರ ಕುಟುಂಬಗಳು ಗೃಹಜ್ಯೋತಿ ಯೋಜನೆ ಪಡೆಯುತ್ತಿವೆ ಎಂದು ಹೇಳಿದರು.

ರಾಜ್ಯದ ಪತ್ರಕರ್ತರ ಮಾಸಾಶನ 10 ರಿಂದ 12 ಸಾವಿರ ಮಾಡಿದ್ದೇವೆ. ಗ್ರಾಮೀಣ ಭಾಗದ ಪತ್ರಕರ್ತರಿಗೆ ಬಸ್‌ಪಾಸ್ ಕೊಡಲು ಪರಿಶೀಲನೆ ಮಾಡುತ್ತಿದ್ದೇನೆ. ನಾವು ಯಾವಾಗಲೂ ಪತ್ರಕರ್ತರ ಪರ ಇರುತ್ತೇವೆ. ನಮ್ಮ ಬಗ್ಗೆ ಯಾವುದೇ ಅಪನಂಬಿಕೆ ಇಟ್ಟುಕೊಳ್ಳಬೇಡಿ ಎಂದರು.

ಪ್ರಸ್ತುತ ಮಾಧ್ಯಮಗಳ ಸುದ್ದಿಗಳ ಬಗ್ಗೆ ವ್ಯಾಖ್ಯಾನಿಸಿದ ಅವರು, ಕಾಗೆ ಚರ್ಚೆಗಳಿಂದ, ಮೌಢ್ಯ ಬಿತ್ತುವ ಕಾರ್ಯಕ್ರಮಗಳಿಂದ ಜನರಿಗೆ ಏನು ಪ್ರಯೋಜನ. ಕಾರಿನ ಮೇಲೆ ಕಾಗೆ ಕುಳಿತರೆ ಅದರಿಂದ ರಾಜ್ಯದ ಜನತೆಗೆ ಏನಾಗಬೇಕು. ಈ ಬಗ್ಗೆ ಜ್ಯೋತಿಷಿಗಳನ್ನು ಕರೆಸಿ ಚಾನಲ್‌ಗಳಲ್ಲಿ ಚರ್ಚೆ ನಡೆಸಿದರು. ಜ್ಯೋತಿಷಿಗಳು ನಾನು ಅಧಿಕಾರ ಕಳೆದುಕೊಳ್ಳುತ್ತೇನೆ ಎಂದರು. ಚಾಮರಾಜನಗರಕ್ಕೆ ಹೋದರೆ ಅಧಿಕಾರ ಕಳೆದುಕೊಳ್ಳುತ್ತೇನೆ ಅಂತಾನೂ ಜ್ಯೋತಿಷಿಗಳು ಹೇಳಿದರು. ಆದರೆ ನಾನು ಅಧಿಕಾರ ಪೂರ್ಣಗೊಳಿಸಿ ಮತ್ತೆ ಎರಡನೇ ಬಾರಿ ಸಿಎಂ ಆದೆ. ಕಾಗೆ ಕೂತಾಗ ಮಾತಾಡಿದ್ದ ಜ್ಯೋತಿಷಿಗಳ ಮಾತಿಗೆ ಏನು ಬೆಲೆ ಬಂತು? ಇಂಥಾ ಮೌಢ್ಯದ ಸುದ್ದಿ ಮತ್ತು ಚರ್ಚೆಗಳನ್ನು ಚಾನಲ್‌ಗಳು ಮಾಡಬಾರದು ಎಂದರು. ವಸ್ತುಸ್ಥಿತಿಯನ್ನು ಜನರಿಗೆ ತಲುಪಿಸಿ. ಊಹೆ ಮಾಡಿಕೊಂಡು, ಕಲ್ಪಿಸಿಕೊಂಡು ಸುದ್ದಿ ಬರೆದು ಹಾಸ್ಯಾಸ್ಪದರಾಗಬೇಡಿ. ತಿರುಚಿ ಸುದ್ದಿ ಮಾಡುವುದನ್ನು ಬಿಡಿ. ನನ್ನ ಮಾತುಗಳ ಸಾಂದರ್ಭಿಕತೆಯನ್ನೇ ಮರೆಮಾಚಿ ಸುದ್ದಿ ಮಾಡಬೇಡಿ ಎಂದು ಸಲಹೆ ನೀಡಿದರು.

> 6 ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳ ಜವಾಬ್ದಾರಿ ಅತ್ಯಂತ ಸೂಕ್ಷ್ಮ ಹಾಗೂ ಪ್ರಮುಖವಾದದ್ದು. ಆದ್ದರಿಂದ ಮಾಧ್ಯಮಗಳು ಎಂದಿಗೂ ಪೂರ್ವಗ್ರಹ ಪೀಡಿತರಾಗಬಾರದು. ಪತ್ರಿಕಾರಂಗ ಇದೀಗ ಉದ್ಯಮವಾಗಿ ಬದಲಾಗಿದೆ. ಒಳ್ಳೆ ವಿಚಾರಗಳಿಗಿಂತ ನಕಾರಾತ್ಮಕ ಸುದ್ದಿಗೆ ಆದ್ಯತೆ ಹೆಚ್ಚಿದೆ. ಹಾಗಾಗಿ ಮಾಧ್ಯಮಗಳು ವಿವೇಚನೆಯಿಂದ ಕೆಲಸ ಮಾಡಬೇಕಿದೆ. ಮಾಧ್ಯಮಗಳು ಸತ್ಯದ, ವ್ಯವಸ್ಥೆ, ಜನಪರ ಕಾಳಜಿ, ನೊಂದವರ ಪರ ಕೆಲಸ ಮಾಡಬೇಕಿದೆ.
>
> -ಎನ್.ಚಲುವರಾಯಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ರಾಜ್ಯದಲ್ಲಿ ಮಹಿಳೆಯರಿಗೆ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಸಾವಿರಾರು ಮಹಿಳೆಯರಿಗೆ ಅನುಕೂಲವಾಗುತ್ತಿದ್ದು, ಅದರಂತೆ ಜನರಿಗೆ ಸಮಾಜ ಆಗುಹೋಗುಗಳನ್ನು ನಿತ್ಯ ಜನಕ್ಕೆ ತಿಳಿಸಲು 24 ಗಂಟೆಯೂ ದುಡಿಯುವ ಪತ್ರಕರ್ತರಿಗೆ ಅದರಲ್ಲೂ ಗ್ರಾಮೀಣ ಪತ್ರಕರ್ತರಿಗೆ ಬಸ್‌ಪಾಸ್ ವ್ಯವಸ್ಥೆ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಇದರ ಜೊತೆಗೆ ನಿವೃತ್ತ ಪತ್ರಕರ್ತರಿಗೆ ಪಿಂಚಣಿ ಹೆಚ್ಚಿಸಬೇಕು. ಜೊತೆಗೆ ಆರೋಗ್ಯ ವಿಮೆ ಮಾಡಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಪ್ರಸ್ತುತ ನಕಲಿ ಪತ್ರಕರ್ತರ ಹಾವಳಿ ಹೆಚ್ಚಾಗಿದ್ದು, ಇದರಿಂದ ಅಸಲಿ ಪತ್ರಕರ್ತರಿಗೆ ಸಮಸ್ಯೆಯಾಗುತ್ತಿದ್ದು, ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕರಾದ ಗಣಿಗ ರವಿಕುಮಾರ್, ಪಿ.ಎಂ.ನರೇಂದ್ರಸ್ವಾಮಿ, ರಮೇಶ್‌ಬಾಬು ಬಂಡಿಸಿದ್ದೇಗೌಡ, ಕೆ.ಎಂ.ಉದಯ್‌ಗೌಡ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಪ್ರಭಾಕರ್, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್, ಜಿಪಂ ಸಿಇಓ ಶೇಕ್ ತನ್ವೀರ್ ಆಸೀಫ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತೀಕೆರೆ ಜಯರಾಂ, ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ, ಪತ್ರಕರ್ತರ ಸಂಘದ ಪದಾಧಿಕಾರಿಗಳಾದ ಪಿ.ಜೆ.ಚೈತನ್ಯಕುಮಾರ್, ಸೋಮಶೇಖರ್ ಕೆರಗೋಡು, ಸಿ.ಎನ್.ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ರವಿ ಬೋಜೇಗೌಡ, ವಿಜಯ್ ರಾಮೇ ಗೌಡ, ದುದ್ದದುಮರ ಶಿವಣ್ಣ ಇತರರು ಉಪಸ್ಥಿತರಿದ್ದರು.

ಶಿಕ್ಷಣ ಕ್ಷೇತ್ರ: ಕೆ.ಟಿ.ಚಂದುಗೆ ರಾಜ್ಯೋತ್ಸವ ಪ್ರಶಸ್ತಿ

ಮಂಡ್ಯ, ಅ.31– ರಾಜ್ಯ ಸರ್ಕಾರ ರಾಜ್ಯದ 68 ಸಾಧಕರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಿದ್ದು, ಈ ಪೈಕಿ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಕೆ.ಟಿ.ಚಂದು ಅವರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 1930, ಅ.22ರಂದು ಮದ್ದೂರು ತಾಲೂಕಿನ ಕೋಣಸಾಲೆ ಪಟೇಲ್ ತಮ್ಮಣ್ಣಗೌಡ, ಲಿಂಗಮ್ಮ ದಂಪತಿ ಪುತ್ರನಾಗಿ ಜನಿಸಿದ ಕೆ.ಟಿ.ಚಂದು ಅವರದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಸ್ವಾತಂತ್ರ್ಯ ಹೋರಾಟಗಾರ, ಬರಹಗಾರ, ಗಾಂಧಿವಾದಿ, ಕನ್ನಡ ಸಾಹಿತ್ಯ ಅಭಿಮಾನಿ, ಸಹಕಾರ ಸಂಘಟಕ, ಪುಸ್ತಕ ಪ್ರೇಮಿ, ರೈತ ಹೋರಾಟಗಾರ, ಪ್ರಗತಿಪರ ರೈತ, ಹೀಗೆ ಹಲವಾರು ಸೇವೆ ಮತ್ತು ಕಾರ್ಯ ಚಟುವಟಿಕೆಗಳಿಂದ ಈ ಭಾಗದ ಜನರಿಗೆ ಅವರು ಪರಿಚಿತರಾಗಿದ್ದು, ತಮ್ಮ ಸರಳ ಸಜ್ಜನ, ಮುಗ್ಧ ಮನಸು, ನಯ ವಿನಯದಂತಹ ಸಚ್ಚಾರಿತ್ರ್ಯ ಗುಣಗಳಿಂದಾಗಿ ಅವರನ್ನು ಜನ 'ಚಂದು ಅಣ್ಣ' ಎಂದು ಕರೆಯುತ್ತಾರೆ. ಕೆ.ಟಿ.ಚಂದು ಅವರು ತಮ್ಮ 93ನೇ ವಯಸ್ಸಿನಲ್ಲಿ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.



1947ರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗಿದ್ದ ಅವರು 1965ರಿಂದ ಎಂ.ಹೆಚ್.ಚನ್ನೇಗೌಡ ವಿದ್ಯಾಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿಯಾಗಿ ನಿರಂತರ ಸೇವೆ ಸಲ್ಲಿಸಿದ್ದು, ಪ್ರಸ್ತುತ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 1971ರಲ್ಲಿ ತೆಂಗಿನಕಾಯಿ ಮಂಡಳಿ ರಾಜ್ಯ ಸಮಿತಿ ಸದಸ್ಯರಾಗಿ ಅಲ್ಲದೇ 1963–71ವರೆಗೆ ಮದ್ದೂರು ತಾಲೂಕು ವ್ಯವಸಾಯೋತ್ಪನ್ನಗಳ ಸಹಕಾರಿ ಅಧ್ಯಕ್ಷರಾಗಿ, 1971ರಲ್ಲಿ ಬೆಂಗಳೂರು ಹಾಲು ಉತ್ಪಾದಕರ ಸಂಘ ಯೂನಿಯನ್ ಮಂಡಳಿ ಸದಸ್ಯರಾಗಿ ಕಾರ್ಯ ನಿರ್ವಹಿಸಿರುತ್ತಾರೆ. 1971ರಲ್ಲಿ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸಂಘಟನೆ, 1974ರಲ್ಲಿ ಕರ್ನಾಟಕ ರಾಜ್ಯ ರೈತ ಮತ್ತು ರೈತ ಕಾರ್ಮಿಕ ಸಂಘ ಸಂಘಟನಾ ಕಾರ್ಯದರ್ಶಿಯಾಗಿ, 1975ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂಘಟನೆಯಾಗಿ, 1974–80ರವರೆಗೆ ಮದ್ದೂರು ಪುರಸಭೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

1977ರಲ್ಲಿ ವರುಣ ನಾಲಾ ಚಳುವಳಿ ತಾಲೂಕು ಕಾರ್ಯದರ್ಶಿಯಾಗಿ, 1995ರಲ್ಲಿ ಮದ್ದೂರಿನಲ್ಲಿ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ರೂವಾರಿಯಾಗಿ, 1974ರಲ್ಲಿ ಜಿಲ್ಲಾ ಶಿಕ್ಷಕರ ಆಯ್ಕೆ ಸಮಿತಿ ಸದಸ್ಯರಾಗಿ ಸೇವೆ, 2003ರಲ್ಲಿ ಜಿಲ್ಲಾ ಆಡಳಿತದಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.


ನೀರು ಹಂಚಿಕೆ ವಿಚಾರದಲ್ಲಿ ರೈತರ ಹಿತ ಬಲಿ ಕೊಡಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಮಂಡ್ಯ, ಅ.31– ಕಾವೇರಿ ನದಿ ನೀರು ಹಂಚಿಕೆಯಲ್ಲಿ ಅಧಿಕಾರದ ಆಸೆಗಾಗಿ ರೈತರ ಹಿತ ಬಲಿ ಕೊಡುವುದಿಲ್ಲ. ನಿಮ್ಮೆಲ್ಲರ ಹಿತ ಕಾಪಾಡಲು ಬದ್ಧನಾಗಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಮಂಗಳವಾರ ನಗರದ ಸರ್‌ಎಂವಿ ಪ್ರತಿಮೆ ಎದುರು ನಡೆಯುತ್ತಿರುವ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ ನಿರಂತರ ಧರಣಿ ಸ್ಥಳಕ್ಕಾಗಮಿಸಿ ಕಾವೇರಿ ಹೋರಾಟಗಾರರ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಕನ್ನಡ ನಾಡಿನ ಹಿತ ಕಾಯಲು ಸರ್ಕಾರ ಹಿಂದೆ ಬೀಳುವುದಿಲ್ಲ. ಅಧಿಕಾರಕ್ಕೆ ಅಂಟಿಕೊಳ್ಳುವುದಿಲ್ಲ. ರೈತರ ಬೆಳೆ ಉಳಿಸಿಕೊಳ್ಳಲು ಹಾಗೂ ಕುಡಿಯುವ ನೀರಿಗೆ ಆದ್ಯತೆ ನೀಡಬೇಕಾಗಿದ್ದು, ಉಳಿದ ನೀರನ್ನು ತಮಿಳುನಾಡಿಗೆ ಹರಿಸುವ ಕೆಲಸ ಮಾಡಬೇಕಾಗಿದೆ. ಇದೆಲ್ಲದರ ನಿರ್ವಹಣೆಯನ್ನು ಸರ್ಕಾರ ಮಾಡಲಿದೆ ಎಂದರು.

ಕಾವೇರಿ ಕಣಿವೆ ರೈತರ ಹಿತ ಬಲಿಕೊಟ್ಟು ಬೇರೆ ರಾಜ್ಯದ ರೈತರ ಹಿತ ಕಾಪಾಡುವುದಿಲ್ಲ. ರಾಜ್ಯದ ರೈತರ ಹಿತ ಕಾಪಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಸಂಕಷ್ಟ ಕಾಲದಲ್ಲಿ ಸರ್ಕಾರ ಏನೇನು ಮಾಡಲು ಸಾಧ್ಯವಿದೆ ಅದನ್ನೆಲ್ಲ ಮಾಡುತ್ತಿದೆ. ಕಾವೇರಿ ನದಿ ನೀರಿನ ವಿಚಾರದಲ್ಲಿ ಕರ್ನಾಟಕದ ಹಿತ ಕಾಪಾಡಲಿದ್ದೇವೆ ಎಂದರು.



ನಾನು ಕೂಡ ರೈತನ ಮಗ. ನಮಗೂ ರೈತರ ಕಷ್ಟದ ಅರಿವಿದೆ. ರೈತರ ಜಮೀನಿನಲ್ಲಿ ಬೆಳೆದಿರುವ ಬೆಳೆಯನ್ನು ರಕ್ಷಿಸಲು ಮುಂದಾಗಬೇಕಿದೆ. ಮಳೆ ಕೊರತೆ ಇದೇ ರೀತಿ ಮುಂದುವರೆದರೆ ಮತ್ತೊಂದು ಬೆಳೆ ಬೆಳೆಯಲು ಕಷ್ಟವಾಗಲಿದೆ. ಮಳೆ ಬರಲಿ ಎಂದು ಪ್ರಾರ್ಥಿಸೋಣ. ಜಮೀನಿನಲ್ಲಿರುವ ಬೆಳೆ ರಕ್ಷಣೆ, ಕುಡಿಯುವ ನೀರಿಗೆ ಆದ್ಯತೆ ನೀಡುವ ಕೆಲಸ ಆಗಬೇಕಾಗಿದೆ ಎಂದರು.

ಕಾವೇರಿ ಕಣಿವೆ ಪ್ರದೇಶದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬೀಳಲಿಲ್ಲ. ಮುಂಗಾರು ಆರಂಭದ ಜೂನ್‌ನಲ್ಲಿ ಮಳೆಯಾಗಿಲ್ಲ. ಜುಲೈನಲ್ಲಿ ವಾಡಿಕೆ ಮಳೆ ಬಿತ್ತು. ಆಗಸ್ಟ್‌ನಲ್ಲಿ ಮಳೆಯ ಸುಳಿವಿಲ್ಲ. ಸೆಪ್ಟೆಂಬರ್‌ನಲ್ಲಿ ಸ್ವಲ್ಪ ಮಳೆ, ಅಕ್ಟೋಬರ್‌ನಲ್ಲಿ ಏನೂ ಇಲ್ಲ. ಇದರಿಂದ ಕಾವೇರಿ ಕೊಳ್ಳದ ಜಲಾಶಯಗಳು ಭರ್ತಿಯಾಗಲಿಲ್ಲ. ಹಾಗಾಗಿ ಸಂಕಷ್ಟ ವರ್ಷ ಎದುರಾಗಿದೆ. ಸಂಕಷ್ಟ ಕಾಲದಲ್ಲಿ ಸರ್ಕಾರ ಏನು ಮಾಡಲು ಸಾಧ್ಯ ಎಂಬುದರ ಬಗ್ಗೆ ಚರ್ಚೆ ನಡೆಸಬೇಕು. ಕಾವೇರಿ ವಿಚಾರ ರೈತರ ಸಮಸ್ಯೆ ಮಾತ್ರವಲ್ಲದೆ ನಾಡಿನ ಸಮಸ್ಯೆಯಾಗಿದೆ. ಆ ಹಿನ್ನೆಲೆಯಲ್ಲಿ ಈ ಬಗ್ಗೆ ಗಂಭೀರ ಚರ್ಚೆ ನಡೆಸುವುದಾಗಿ ತಿಳಿಸಿದರು.

ಕಾವೇರಿ ನದಿ ನೀರು ನಿಯಂತ್ರಣ ಸಮಿತಿ, ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರು ಇಲ್ಲದಿರುವುದರಿಂದ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ ಎಂದು ಸಮರ್ಥ ವಾದ ಮಂಡಿಸಿದರೂ ಸಹ ನೀರು ಬಿಡಲು ಆದೇಶ ಬಂದಿದೆ. ವಾರ್ಷಿಕ 177.25 ಟಿಎಂಸಿ ನೀರು, ಪ್ರತಿ ತಿಂಗಳು ಇಂತಿಷ್ಟು ಪ್ರಮಾಣದಲ್ಲಿ ನೀರು ಬಿಡಬೇಕೆಂಬ ಸುಪ್ರೀಂ ಕೋರ್ಟ್ ಆದೇಶ ಇದೆ. ಹಳೆ ಕಾಲದ ಒಪ್ಪಂದ ಹಿಡಿದುಕೊಂಡು ನಮ್ಮನ್ನು ಅಲ್ಲಾಡಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಗಣಿಗ ರವಿಕುಮಾರ್, ರಮೇಶ್ ಬಾಬು ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಯತೀಶ್, ಜಿಲ್ಲಾ ರೈತ ರಕ್ಷಣಾ ಸಮಿತಿ ಸುನಂದಾ ಜಯರಾಂ, ಕೆ.ಬೋರಯ್ಯ, ಅಂಬುಜಮ್ಮ, ಚಂದ್ರಶೇಖರ್, ಮುದ್ದೇಗೌಡ, ಕನ್ನಡ ಸೇನೆ ಮಂಜುನಾಥ್, ದಸಂಸ ಕೃಷ್ಣ, ಉಪಸ್ಥಿತರಿದ್ದರು.

ಬರಗಾಲ ಸಂದರ್ಭವನ್ನು ಸರಿಯಾಗಿ ನಿರ್ವಹಿಸಿ

ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚನೆ

ಮಂಡ್ಯ, ಅ.31– ಬರಗಾಲ ಸಂದರ್ಭವನ್ನು ಸರಿಯಾಗಿ ನಿರ್ವಹಿಸಿ. ಅಧಿಕಾರಿಗಳ ಬೇಜವಾಬ್ದಾರಿಯನ್ನು ಸರ್ಕಾರ ಸಹಿಸಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ನಗರದ ಜಿಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಜನ ಜಾನುವಾರುಗಳಿಗೆ ಕುಡಿಯುವ ನೀರು, ಆಹಾರ, ಮೇವಿನ ಕೊರತೆ ಆಗಬಾರದು. ಹಣಕ್ಕೆ ತೊಂದರೆ ಇಲ್ಲ. ಅಗತ್ಯವಿದ್ದಷ್ಟು ಕೇಳಿ ಎಂದರು.



ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಸಮಾಜ ಕಲ್ಯಾಣ, ಪಶು ಸಂಗೋಪನೆ, ಕೃಷಿ ಇಲಾಖೆಗಳ ಪ್ರಗತಿಗೆ ಪ್ರಥಮ ಆದ್ಯತೆ ನೀಡಬೇಕು. ಡಿಸಿ, ಸಿಇಓ, ಕಾರ್ಯದರ್ಶಿಗಳ ಸಭೆಯಲ್ಲಿ ನಾನು ಕೊಟ್ಟ ಸೂಚನೆಗಳು, ನಿರ್ದೇಶನಗಳು ಚಾಚೂ ತಪ್ಪದೆ ಜಾರಿ ಆಗಿದೆಯಾ? ಎಷ್ಟು ಜಾರಿ ಆಗಿದೆ ಎನ್ನುವ ಕುರಿತು ಸಭೆಗೆ ಸ್ಪಷ್ಟ ಮಾಹಿತಿ ನೀಡಿ. ತಪ್ಪು ಮಾಹಿತಿ ನೀಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ನಮ್ಮನ್ನು ಒಪ್ಪಿಸುವುದಕ್ಕಾಗಿ ಸಭೆಗೆ ತಪ್ಪು ಮಾಹಿತಿ ನೀಡಬೇಡಿ. ಬರಗಾಲ ನಿರ್ವಹಣೆಗೆ ಎಷ್ಟೇ ಹಣ ಅಗತ್ಯವಿದ್ದರೂ, ಎಷ್ಟೇ ಕಷ್ಟ ಆದರೂ ಸರ್ಕಾರ ಹಣ ಒದಗಿಸುತ್ತದೆ. ನೀವು ಯಾವುದಕ್ಕೂ ತೊಂದರೆಯಾಗದಂತೆ ಕೆಲಸ ಮಾಡಬೇಕು ಎಂದರು. ಮಾರ್ಚ್, ಏಪ್ರಿಲ್, ಮೇ ತಿಂಗಳಿಗಿಂತ ಹೆಚ್ಚು ವಿದ್ಯುತ್ ಬೇಡಿಕೆ ಇದೆ. ಆಗ 11 ಸಾವಿರ ಮೆಗಾ ವ್ಯಾಟ್ ಬಳಕೆ ಆಗುತ್ತಿತ್ತು. ಈಗ 15–16 ಸಾವಿರ ಮೆಗಾ ವ್ಯಾಟ್ ವಿದ್ಯುತ್‌ಗೆ ಬೇಡಿಕೆ ಇದೆ. ರೈತರ ಪಂಪ್‌ಸೆಟ್ ಮತ್ತು ಜನರ ಅಗತ್ಯಕ್ಕೆ ತಕ್ಕಂತೆ ವಿದ್ಯುತ್ ಪೂರೈಸಲು ಯೋಜನೆ ಸಿದ್ಧಪಡಿಸಿ ಅದಕ್ಕೆ ತಕ್ಕಂತೆ ಕ್ರಮ ವಹಿಸಿ. ಸದ್ಯ ಕಟಾವಿಗೆ ಬರುವ ಬೆಳೆಗಳನ್ನು ಉಳಿಸಿಕೊಳ್ಳಲು ನಿಗಾವಹಿಸಿ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

ಜಿಲ್ಲೆಯ ಹಲವು ಭಾಗಗಳಲ್ಲಿ ಆನೆ, ಚಿರತೆ, ಹಾವಿನ ಕಾಟ ಇದ್ದು, ಕೃಷಿಗೆ ರಾತ್ರಿಗಿಂತ ಹಗಲಿನಲ್ಲೇ ನಿರಂತರ 5 ಗಂಟೆ ವಿದ್ಯುತ್ ಕೊಡಬೇಕು ಎನ್ನುವ ಬೇಡಿಕೆ ಇದೆ. ಬೇಡಿಕೆಗೆ ತಕ್ಕಂತೆ ಕ್ರಮ ವಹಿಸಲು ಸಾಧ್ಯವೇ ಪರೀಕ್ಷಿಸಿ. ದಿನ ಬಿಟ್ಟು ದಿನ ಬೇರೆ ಬೇರೆ ಬ್ಯಾಚ್‌ಗಳಲ್ಲಿ ನಿರಂತರ 5 ಗಂಟೆ 3 ಫೇಸ್ ವಿದ್ಯುತ್ ಸರಬರಾಜು ಕಡ್ಡಾಯವಾಗಿ ಆಗಲೇಬೇಕು. ಯಾವ ವೇಳೆಯಲ್ಲಿ ವಿದ್ಯುತ್ ಸರಬರಾಜು ಆಗುತ್ತದೆ ಎನ್ನುವ ಮಾಹಿತಿ ಆಯಾ ಭಾಗದ ರೈತರಿಗೆ ಕೊಡಬೇಕು. ಈ ಸಭೆಯಲ್ಲಿ ತೆಗೆದುಕೊಂಡ ಎಲ್ಲಾ ತೀರ್ಮಾನಗಳನ್ನು ಚಾಚೂ ತಪ್ಪದೆ ಜಾರಿ ಮಾಡಬೇಕು. ರೈತರಿಗೆ ದ್ರೋಹ ಮಾಡಿದರೆ ಕ್ರಮ ಖಚಿತ ಎಂದು ಎಚ್ಚರಿಸಿದರು.

ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆ ಆಗಬಾರದು. ಕುಡಿಯುವ ನೀರಿನ ಬಗ್ಗೆ ದೂರು ಬಂದರೆ ನೇರವಾಗಿ ನಿಮ್ಮನ್ನೇ ಹೊಣೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಪಂ ಸಿಇಓಗೆ ತಿಳಿಸಿದರು.

ಮಳವಳ್ಳಿಯಲ್ಲಿ ಕುಡಿಯುವ ನೀರು ಪೈಪ್‌ಲೈನ್ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿ, ಕಳಪೆ ಕಾಮಗಾರಿ ಕುರಿತು ತನಿಖೆ ನಡೆಸಿ. ಎಲ್ಲಿ ತಪ್ಪಾಗಿದೆ ಎಂದು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲದೇ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿ ಎಂದು ನಗರಾಭಿವೃದ್ಧಿ ಕಾರ್ಯದರ್ಶಿ ಅಜಯ್ ನಾಗಭೂಷಣ್ ಅವರಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಜಲಜೀವನ್ ಮಿಷನ್ ಹಗರಣದ ತನಿಖೆಗೆ ಆದೇಶಿಸಿ 3 ತಿಂಗಳಾದರೂ ಮಳವಳ್ಳಿಯಲ್ಲಿ ಇನ್ನೂ ತನಿಖೆಯೇ ಆರಂಭವಾಗದ ಬಗ್ಗೆ ಶಾಸಕ ನರೇಂದ್ರಸ್ವಾಮಿ ದೂರಿದರು. ದೂರಿಗೆ ತಕ್ಷಣ ಸ್ಪಂದಿಸಿ ತನಿಖೆ ನಡೆಸಿ ವರದಿ ನೀಡುವಂತೆ ಸಿಎಂ ಸೂಚನೆ ನೀಡಿದರು. ಬರಗಾಲ ಸಂದರ್ಭ ನರೇಗಾ ಕೆಲಸ 100 ದಿನ, 120 ದಿನ ಅಂತೆಲ್ಲಾ ಮಿತಿ ಹಾಕಿಕೊಳ್ಳಬೇಡಿ. ಕೆಲಸ ಕೇಳಿದವರಿಗೆಲ್ಲಾ ಕೆಲಸ ಕೊಡಿ. ಹಣ ಬೇಕಿದ್ದರೆ ಸರ್ಕಾರಕ್ಕೆ ಬರೆಯಿರಿ ಎಂದು ಜಿಪಂ ಸಿಇಓಗೆ ಸೂಚನೆ ನೀಡಿದರು.

ಕ್ಯಾನ್ಸರ್ ಆಸ್ಪತ್ರೆ ಸಿವಿಲ್ ಕೆಲಸ ಮತ್ತು ಲೈಬ್ರರಿ ಕಟ್ಟಡದ ಕೆಲಸ ಸೇರಿದಂತೆ ಎಲ್ಲವನ್ನೂ ತ್ವರಿತವಾಗಿ ಮುಗಿಸಬೇಕು. ಅಲ್ಲದೇ ಕ್ಯಾನ್ಸರ್ ರೋಗಿಗಳು ಮೈಸೂರು, ಬೆಂಗಳೂರಿಗೆ ಹೋಗುತ್ತಿದ್ದಾರೆ. ಆದ್ದರಿಂದ ಇಲ್ಲಿ ಕ್ಯಾನ್ಸರ್ ಆಸ್ಪತ್ರೆ ತ್ವರಿತವಾಗಿ ಕೆಲಸ ಆರಂಭಿಸಬೇಕು ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಸೂಚಿಸಿದರು.

100 ಬೆಡ್‌ಗಳ ಹೆರಿಗೆ ಆಸ್ಪತ್ರೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಬಾಕಿ ಕೆಲಸ ಮುಗಿಸಲು ಕೇವಲ 8 ಕೋಟಿ ರೂ. ಅಗತ್ಯವಿದೆ ಎಂದು ಶಾಸಕ ಗಣಿಗ ರವಿಕುಮಾರ್ ಮುಖ್ಯಮಂತ್ರಿಗಳ ಗಮನ ಸೆಳೆದರು. ರವಿಯವರ ಮನವಿಗೆ ಸ್ಪಂದಿಸಿದ ಸಿಎಂ ಹಣ ಬಿಡುಗಡೆಗೊಳಿಸುವುದಾಗಿ ಸೂಚಿಸಿದರು. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ಅಗತ್ಯ ಅಂಡರ್‌ಪಾಸ್, ಡ್ರೈನೇಜ್ ಸೇರಿದಂತೆ ಇನ್ನಿತರೆ ಕಾಮಗಾರಿಗಳನ್ನು ನಡೆಸಬೇಕಿದೆ. ಆದರೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಇನ್ನೂ ಅನುಮತಿ ಸಿಕ್ಕಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇದಕ್ಕೆ ಅಸಮಾಧಾನಗೊಂಡ ಮುಖ್ಯಮಂತ್ರಿಗಳು, ನಾನು ಈ ಬಗ್ಗೆ ಕೇಂದ್ರ ಸಚಿವರನ್ನು ಭೇಟಿಯಾದಾಗ ಅಗತ್ಯ ಕಾಮಗಾರಿಗಳಿಗೆಲ್ಲಾ ಅನುಮತಿ ನೀಡುವ ಭರವಸೆ ನೀಡಿದ್ದರು. ಈ ಬಗ್ಗೆ ಬೇಗ ಸಂಬಂಧಪಟ್ಟವರನ್ನು ಸಂಪರ್ಕಿಸಿ ಪ್ರಕ್ರಿಯೆ ಪೂರ್ಣಗೊಳಿಸಿ ಎಂದು ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಗಣಿಗ ರವಿಕುಮಾರ್, ಕೆ.ಎಂ.ಉದಯ್‌ಗೌಡ, ಪಿ.ಎಂ.ನರೇಂದ್ರಸ್ವಾಮಿ, ರಮೇಶ್‌ಬಾಬು ಬಂಡಿಸಿದ್ದೇಗೌಡ, ಹೆಚ್.ಟಿ.ಮಂಜು, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್‌ಗೂಳಿಗೌಡ, ಮರಿತಿಬ್ಬೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

ಕೆ.ಆರ್.ಪೇಟೆ: ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಒತ್ತಾಯಿಸಿ ಪ್ರತಿಭಟನೆ

ಕೆ.ಆರ್.ಪೇಟೆ, ಅ.31– ಕೆರೆ ಕಟ್ಟೆಗಳಿಗೆ ಹೇಮಾವತಿ ನಂ.55ನೇ ವಿತರಣಾ ನಾಲೆಯಿಂದ ನೀರು ತುಂಬಿಸಿ ಜನ–ಜಾನುವಾರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿ ತಾಲೂಕಿನ ಕೊಮ್ಮೇನಹಳ್ಳಿ, ಕತ್ತರಘಟ್ಟ, ಬಿಲ್ಲರಾಮನಹಳ್ಳಿ, ಸಾಧುಗೋನಹಳ್ಳಿ ಗ್ರಾಮಸ್ಥರು ಪಟ್ಟಣದ ಹೇಮಾವತಿ ನೀರಾವರಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.



ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಹೇಮಾವತಿ ಮುಖ್ಯ ನಾಲೆಯಲ್ಲಿ ಸುಮಾರು ಒಂದೂವರೆ ತಿಂಗಳು ನೀರು ಹರಿಸಿದ ಸಂದರ್ಭ ನಮ್ಮ ಗ್ರಾಮದ ಕೆರೆಕಟ್ಟೆಗಳಿಗೆ ನೀರು ಹರಿಸದೇ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಇದರಿಂದ ಜನಜಾನುವಾರುಗಳ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಇದೀಗ ಮತ್ತೆ 10 ದಿನಗಳ ಕಾಲ ನೀರು ಹರಿಸಲಾಗುತ್ತಿದೆ. ಆದರೂ ನೀರಾವರಿ ಅಧಿಕಾರಿಗಳು ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಮುಂದಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಕೂಡಲೇ ಹೇಮಾವತಿ ನಾಲೆಯಿಂದ ನೀರು ಹರಿಸಿ ಜನಜಾನುವಾರುಗಳ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಶಾಸಕ ಹೆಚ್.ಟಿ.ಮಂಜು, ಅವರ ಸಹೋದರ ಹೆಚ್.ಟಿ.ಲೋಕೇಶ್, ತಾಲೂಕು ಬ್ಲಾಕ್ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ ಡಾ.ಕೆ.ಸಿ.ಶ್ರೀಕಾಂತ್, ಟಿಎಪಿಸಿಎಂಎಸ್ ನಿರ್ದೇಶಕ ಬಲದೇವ್, ಶಾಸಕರ ಆಪ್ತ ಸಹಾಯಕ ಪ್ರತಾಪ್ ಈ ಭಾಗದ ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಏನು ತೊಂದರೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯಪಾಲಕ ಇಂಜಿನಿಯರ್ ಕಿಜರ್ ಅಹಮದ್, ನಾಲೆಯ ಸಾಮರ್ಥ್ಯಕ್ಕೆ ತಕ್ಕಂತೆ ನೀರನ್ನು ಹರಿಸಲಾಗುತ್ತಿದೆ. ಈ ಭಾಗದ ಎಲ್ಲಾ ದೊಡ್ಡ ಕೆರೆಗಳನ್ನು ತುಂಬಿಸಲಾಗಿದೆ. ನಂ.55ರ ಕೊನೆ ಭಾಗದ ಗ್ರಾಮಗಳ ಕೆರೆಗಳನ್ನು ತುಂಬಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ನಮ್ಮ ಇಲಾಖೆ ಅಧಿಕಾರಿಗಳು ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ ಎಂದರು. ಈ ವೇಳೆ ಪ್ರತಿಭಟನಾಕಾರರು ನಾಲೆಯಲ್ಲಿ ಕಡಿಮೆ ನೀರು ಬಿಟ್ಟಿದ್ದಾರೆ. ಹಾಗಾಗಿ ಕೊನೆ ಭಾಗಕ್ಕೆ ನೀರು ಬರುತ್ತಿಲ್ಲ ಎಂದು ದೂರಿದಾಗ ರೈತರನ್ನೇ ಮುಖ್ಯ ಕಾಲುವೆಗೆ ಬಂದು ವೀಕ್ಷಣೆ ಮಾಡುವಂತೆ ಇಇ ಕಿಜರ್ ಅಹಮದ್ ಮನವಿ ಮಾಡಿದರು. ಈ ವೇಳೆ ಭಾರತೀಪುರ ಬಳಿ ನಾಲೆಗೆ ಬಿಟ್ಟಿರುವ ನೀರಿನ ಪ್ರಮಾಣ ಪರಿಶೀಲಿಸಲಾಯಿತು.

ಪ್ರತಿಭಟನೆಯಲ್ಲಿ ಮುಖಂಡರಾದ ನಾಗೇಗೌಡ, ಸುರೇಶ್, ಅನಿಲ್‌ಗೌಡ, ಜಗದೀಶ್, ರಾಮೇಗೌಡ, ನಾಗರಾಜೇಗೌಡ, ಪ್ರಕಾಶ್, ಕೃಷ್ಣೇಗೌಡ, ಶಿವೇಗೌಡ, ಗೋಪಾಲ್, ಚಂದ್ರು ಸುನೀಲ್, ಧನುಷ್, ದೀಕ್ಷಿತ್, ಶೇಖರ್, ಜಗದೀಶ್, ಶೇಖರ್ ಇತರರಿದ್ದರು.

ಮನೆ ಮಾಲೀಕರಿಂದಲೇ ಪೊಲೀಸರಿಗೆ ಮಾಹಿತಿ

ಫ್ಯಾಮಿಲಿ ಸಲೂನ್ ನೆಪದಲ್ಲಿ ವೇಶ್ಯಾವಾಟಿಕೆ: ಓರ್ವನ ಬಂಧನ

ಮೈಸೂರು, ಅ.31– ಫ್ಯಾಮಿಲಿ ಸಲೂನ್ ನೆಪದಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ, ಓರ್ವನನ್ನು ಬಂಧಿಸಿದ್ದಾರೆ.

ಮೈಸೂರಿನ ಲಲಿತಮಹಲ್‌ನಗರ ಮುಖ್ಯರಸ್ತೆಯಲ್ಲಿರುವ ಕಟ್ಟಡದ ಮೊದಲ ಮಹಡಿಯಲ್ಲಿ ದನಿಯಾ ಫ್ಯಾಮಿಲಿ ಸಲೂನ್ ಹೆಸರಿನ ಬ್ಯೂಟಿ ಪಾರ್ಲರ್‌ನಲ್ಲಿ ವೇಶ್ಯಾವಾಟಿಕೆ ನಡೆಸಲಾಗುತ್ತಿದೆ ಎಂಬ ಮಾಹಿತಿ ಆಧರಿಸಿ ಮನೆ ಮಾಲೀಕರು ನೀಡಿದ ದೂರಿನ ಮೇರೆಗೆ ಒಡನಾಡಿ ಸೇವಾ ಸಂಸ್ಥೆ ಹಾಗೂ ಸ್ಥಳೀಯರ ಸಹಕಾರದೊಂದಿಗೆ ಆಲನಹಳ್ಳಿ ಠಾಣೆ ಪೊಲೀಸರು ಮಂಗಳವಾರ ದಾಳಿ ನಡೆಸಿದ್ದಾರೆ.

ಈ ವೇಳೆ ಪ್ರಮುಖ ಆರೋಪಿ ಎನ್ನಲಾಗಿರುವ ಮಹೇಶ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಈತನ ವಿರುದ್ಧ ಉದಯಗಿರಿ ಸೇರಿದಂತೆ ಹಲವು ಪೊಲೀಸ್ ಠಾಣೆಗಳಲ್ಲಿ ಈ ಹಿಂದೆ ಪ್ರಕರಣ ದಾಖಲಾಗಿವೆ ಎನ್ನಲಾಗಿದೆ. ಸ್ಥಳದಲ್ಲಿದ್ದ ಬಾಂಗ್ಲಾ ಮೂಲದ ಐವರು ಮಹಿಳೆಯರ ವಿಚಾರಣೆ ನಡೆಸಿದ್ದಾರೆ. ಈ ಸಂಬಂಧ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಟ್ಟಡ ಮಾಲೀಕರು ದೂರಿತ್ತಿದ್ದರು: ಈ ಕಟ್ಟಡದ ಮಾಲೀಕರಾದ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಅವರು ಅ.10ರಂದು ಈ ಬಗ್ಗೆ ನಗರ ಪೊಲೀಸ್ ಆಯುಕ್ತರ ಗಮನಕ್ಕೆ ತಂದಿದ್ದರು. ನಮ್ಮ ಮನೆಯ ಮೇಲ್ಭಾಗದ ಹಾಲ್ ಅನ್ನು ದೀಪಿಕಾ ಮತ್ತು ಜಯಶ್ರೀ ಎಂಬುವರಿಗೆ ಬಾಡಿಗೆ ನೀಡಿದ್ದು, ಅಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ ಎಂಬ ದೂರುಗಳು ಕೇಳಿಬಂದಿವೆ. ಯಾವುದೇ ಕಾರಣಕ್ಕೂ ಅನೈತಿಕ ಚಟುವಟಿಕೆ ಹಾಗೂ ಕಾನೂನು ಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡುವುದಿಲ್ಲ. ಕೂಡಲೇ ಮನೆ ಖಾಲಿ ಮಾಡುವಂತೆ ತಿಳಿಸಿದ್ದೇನೆ ಎಂದು ಆಯುಕ್ತರಿಗೆ ಮಾಹಿತಿ ನೀಡಿದ್ದಾರೆ. ಈ ಮಧ್ಯೆ ಸೇವಾವಧಿಯಲ್ಲಿ ದಕ್ಷ ಹಾಗೂ ಖಡಕ್ ಪೊಲೀಸ್ ಅಧಿಕಾರಿಯಾಗಿದ್ದ ಜೆ.ಬಿ.ರಂಗಸ್ವಾಮಿ ಅವರು ಮೂರ್ನಾಲ್ಕು ತಿಂಗಳಿಂದ ಅಮೆರಿಕಾದಲ್ಲಿ ನೆಲೆಸಿದ್ದು, ಕೆಲದಿನಗಳ ಹಿಂದೆ ಸ್ವದೇಶಕ್ಕೆ ಮರಳಿ, ಬೆಂಗಳೂರಲ್ಲಿ ನೆಲೆಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವ ಅವರು ಅನ್ಯಾಯ, ಅಕ್ರಮಗಳ ವಿರುದ್ಧ ಈಗಲೂ ನಿಷ್ಠುರತೆಯಿಂದಲೇ ಪ್ರತಿಕ್ರಿಯಿಸುತ್ತಾರೆ. ಹಾಗಾಗಿ ಅಪಾರ ಅಭಿಮಾನಿಗಳ ಹೊಂದಿದ್ದಾರೆ.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಸಹಪ್ರಾಧ್ಯಾಪಕ ಡಾ.ಮೋಹನ್ ಕೃಷ್ಣರ ಹಿರಿಮೆ

ಮೈಸೂರು,ಅ.31(ಪಿಎಂ)– ನವದೆಹಲಿಯ ರಿಫಾಸಿಮೆಂಟೋ ಇಂಟರ್‌ನ್ಯಾಷನಲ್‌ನ ಏಷ್ಯನ್ ಅಡ್ಮಿರೇಬಲ್ ಅಚೀವರ್ಸ್‌ನ 11ನೇ ಆವೃತ್ತಿಯಲ್ಲಿ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಸಹಪ್ರಾಧ್ಯಾಪಕ ಡಾ.ಎಸ್.ಎ.ಮೋಹನ್ ಕೃಷ್ಣ ಅವರ ಜೀವನಚರಿತ್ರೆ ಸೇರ್ಪಡೆಗೊಂಡಿದೆ. ಆ ಮೂಲಕ ಅವರು ಏಷ್ಯಾದ ಪ್ರಶಂಸನೀಯ ಸಾಧಕ ಎಂಬ ಹಿರಿಮೆಗೆ ಭಾಜನರಾಗಿದ್ದಾರೆ.



ಇಂಜಿನಿಯರಿಂಗ್ ಶಿಕ್ಷಣ, ವಿಜ್ಞಾನ ಸಂವಹನ, ಖಗೋಳಶಾಸ್ತ್ರ ಮತ್ತು ಬಾಹ್ಯಾಕಾಶ ವಿಜ್ಞಾನ ಕ್ಷೇತ್ರಗಳಲ್ಲಿ ಅವರ ಸಾಧನೆಗಳು ಪ್ರಶಂಸೆಗೆ ಪಾತ್ರವಾಗಿವೆ. ಹಲವಾರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳು ಇವರಿಗೆ ಸಂದಿವೆ. 2,500ಕ್ಕೂ ಹೆಚ್ಚು ಆನ್‌ಲೈನ್ ಸರ್ಟಿಫಿಕೇಷನ್‌ಗಳನ್ನು ಪೂರ್ಣಗೊಳಿಸಿದ್ದಾರೆ.

ವಿಶ್ವದಾದ್ಯಂತ ವೃತ್ತಿಪರ ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿರುವ ಇವರು, 200ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ನಿಯತಕಾಲಿಕೆಗಳ ಸಂಪಾದಕೀಯ ಮಂಡಳಿಯ ಸದಸ್ಯತ್ವದ ಜೊತೆಗೆ, ಈವರೆಗೆ ಅವರು 1000ಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆ. ವಿವಿಧ ನಿಯತಕಾಲಿಕಗಳಲ್ಲಿ 100ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅವರ ಹೆಸರನ್ನು ಏಷ್ಯನ್ ಬುಕ್ ಆಫ್ ರೆಕಾರ್ಡ್ಸ್ ಮತ್ತು ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ಗೂ ಸೂಚಿಸಲಾಗಿದೆ.

ಮಹಿಳೆಗೆ ಕಚ್ಚಿದ ನಟ ದರ್ಶನ್ ಮನೆಯ ನಾಯಿಗಳು: ಎಫ್‌ಐಆರ್ ದಾಖಲು

ಬೆಂಗಳೂರು: ಚಿತ್ರನಟ ದರ್ಶನ್ ತೂಗುದೀಪ ಅವರ ಮನೆಯ ಸಾಕು ನಾಯಿಗಳು ಮಹಿಳೆಯೊಬ್ಬರ ಮೇಲೆ ದಾಳಿ ನಡೆಸಿ, ಗಾಯಗೊಳಿಸಿದ್ದು ದರ್ಶನ್ ಸೇರಿ ಇಬ್ಬರ ವಿರುದ್ಧ ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆ ಎಫ್‌ಐಆರ್ ದಾಖಲಾಗಿದೆ.

ಆರ್.ಆರ್.ನಗರದ ಬಿಇಎಂಎಲ್ 5ನೇ ಹಂತದ ನಿವಾಸಿ, ವಕೀಲೆ ಅಮಿತಾ ಜಿಂದಾಲ್ ಎಂಬುವರು ದೂರು ನೀಡಿದ್ದಾರೆ. ಅ.28ರಂದು ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದರು. ಸ್ಪರ್ಶ ಆಸ್ಪತ್ರೆಗೆ ಕಾರ್ಯಕ್ರಮವೊಂದಕ್ಕೆ 28ರಂದು ತೆರಳಿದ್ದೆ. ಕಾರನ್ನು ದರ್ಶನ್ ಮನೆ ಪಕ್ಕದಲ್ಲಿದ್ದ ಖಾಲಿ ಪ್ರದೇಶದ ಎದುರಿನ ರಸ್ತೆಯಲ್ಲಿ ನಿಲುಗಡೆ ಮಾಡಿದ್ದೆ. ಕಾರ್ಯಕ್ರಮ ಮುಗಿಸಿ ವಾಪಸ್ ಬಂದಾಗ ನಾಯಿಗಳು ದಾಳಿ ನಡೆಸಿದವು ಎಂದು ತಿಳಿಸಿದ್ದಾರೆ. ಎರಡು ನಾಯಿಗಳನ್ನು ಕಟ್ಟಿದ್ದು, ಒಂದನ್ನು ಹಾಗೆಯೇ ಬಿಡಲಾಗಿತ್ತು. ಕಾರು ತೆಗೆದುಕೊಳ್ಳಬೇಕಿದ್ದು, ನಾಯಿಗಳನ್ನು ಬೇರೆಡೆ ಒಯ್ಯಲು ಕಾವಲುಗಾರನಲ್ಲಿ ಮನವಿ ಮಾಡಿದೆ. ಆದರೆ, ಆತ ಕಾರು ಪಾರ್ಕಿಂಗ್ ವಿಚಾರಕ್ಕೆ ಗಲಾಟೆ ನಡೆಸಿದ. ಅದೇ ಸಂದರ್ಭದಲ್ಲಿ ನಾಯಿಗಳು ದಾಳಿ ನಡೆಸಿದವು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ವಿವಿಧ ಕ್ಷೇತ್ರದ 15 ಮಂದಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ

ಮೈಸೂರು, ಅ.31(ಎಸ್‌ಬಿಡಿ)– ಮೈಸೂರು ಜಿಲ್ಲಾಡಳಿತದಿಂದ ಕೊಡಮಾಡುವ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಗೆ ವಿವಿಧ ಕ್ಷೇತ್ರದ 15 ಮಂದಿ ಹಾಗೂ ಎರಡು ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ.

ಡಾ.ಎಸ್.ರಂಗನಾಥಯ್ಯ(ವೈದ್ಯಕೀಯ ಕ್ಷೇತ್ರ), ಕೆ.ಪಿ.ನಾಗರಾಜು(ದೃಶ್ಯ ಮಾಧ್ಯಮ), ಜಿ.ಪಿ.ಬಸವರಾಜು (ಸಾಹಿತಿ/ಪತ್ರಕರ್ತ), ಕೀಲಾರ ಕೃಷ್ಣೇಗೌಡ(ಜನಪದ ಗಾಯನ), ಹೊರೆಯಾಲ ದೊರೆಸ್ವಾಮಿ(ಚಳವಳಿ), ಸಿ.ಬಸವಲಿಂಗಯ್ಯ(ರಂಗಭೂಮಿ), ಅಯೂಬ್ (ಸಮಾಜಸೇವೆ), ಡಾ.ಎಸ್.ತುಕಾರಾಮ್ (ಸಾಕ್ಷರತೆ/ಶಿಕ್ಷಣ), ಕೃಪಾಕರ–ಸೇನಾನಿ (ಪರಿಸರ), ಹೆಚ್.ಆರ್.ಲೀಲಾವತಿ (ಸುಗಮ ಸಂಗೀತ), ಯು.ಎಸ್.ಮಹೇಶ್ (ಪುಸ್ತಕ ಪ್ರಕಾಶನ), ಡಾ.ಚಿಕ್ಕಮಾದು (ಇತಿಹಾಸ/ಚರಿತ್ರೆ), ಕೋಟೆ ನಾಗರಾಜ್(ಸಿನಿಮಾ/ರಂಗಭೂಮಿ), ಮೂಗೂರು ನಂಜುಂಡಸ್ವಾಮಿ (ಕನ್ನಡಪರ ಹೋರಾಟಗಾರ), ಕೆ.ಬಿ.ರಮೇಶ ನಾಯಕ(ಪತ್ರಿಕಾ ಮಾಧ್ಯಮ), ಸಂಸ್ಥೆಗಳ ವಿಭಾಗದಲ್ಲಿ ನೈಸರ್ಗಿಕ ಬೀಜೋತ್ಪಾದನೆಯ ಚಾಮರಾಜನಗರದ ಅಮೃತಭೂಮಿ ಹಾಗೂ ಮೈಸೂರಿನ ಒಡನಾಡಿ ಸಂಸ್ಥೆಗೆ ಪ್ರಶಸ್ತಿ ದಕ್ಕಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ ಸಂಗೀತ ವಿವಿ ಗೌರವ ಡಾಕ್ಟರೇಟ್ ಪ್ರದಾನ

ಬೆಂಗಳೂರು ಅ.31–ಕರ್ನಾಟಕ ರಾಜ್ಯ ಡಾ.ಗಂಗೂ ಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವತಿಯಿಂದ 6ನೇ ಘಟಿಕೋತ್ಸವದ ಅಂಗವಾಗಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ನೀಡಲಾಗಿರುವ ಗೌರವ ಡಾಕ್ಟರೇಟ್ ಅನ್ನು ರಾಜಭವನ ದಲ್ಲಿ ನಡೆದ ಸರಳ ಸಮಾರಂಭದಲ್ಲಿ ಕರ್ನಾಟಕದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಪ್ರದಾನ ಮಾಡಿದರು.

ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತ ನಾಡಿದ ಅವರು, ಭಾರತೀಯ ಸಂಸ್ಕೃತಿಯು ಜ್ಞಾನ, ವಿಜ್ಞಾನ, ಕಲೆ ಮತ್ತು ಸಂಗೀತದ ಅಮೂಲ್ಯ ಪರಂಪರೆ ಯನ್ನು ಒಳಗೊಂಡಿದೆ. ಹೆಸರಾಂತ ಶಾಸ್ತ್ರೀಯ ಸಂಗೀತ ಗಾಯಕಿ, ಗೌರವಾನ್ವಿತ ಗಂಗೂಬಾಯಿ ಹಾನಗಲ್ ಅವರ ಹೆಸರಿನಲ್ಲಿ ಸ್ಥಾಪಿಸಲಾದ ಈ ವಿಶ್ವ ವಿದ್ಯಾಲಯವು ಸಂಸ್ಕೃತಿ, ಕಲೆ ಮತ್ತು ಸಂಗೀತದ ಅಮೂಲ್ಯ ಪರಂಪರೆಯನ್ನು ಮುನ್ನಡೆಸುವಲ್ಲಿ ಶ್ಲಾಘನೀಯ ಕೆಲಸ ಮಾಡುತ್ತಿದೆ ಎಂದರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಶಿಕ್ಷಣ, ಕಲೆ, ಸಂಗೀತ ಮತ್ತು ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅತ್ಯುತ್ತಮ ಕೆಲಸ ಮಾಡಿದ ಮಹನೀಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಅದರಂತೆ ಈ ದಿನ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪೂಜ್ಯ ಶ್ರೀ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿರುವುದು ಧನ್ಯತಾ ಭಾವವನ್ನು ತುಂಬಿದೆ ಎಂದರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾ ಲಯ, ಬಳ್ಳಾರಿಯವರು ಸಂಗೀತ ಕ್ಷೇತ್ರದಲ್ಲಿನ ಅಪಾರ ಕೊಡುಗೆಗಾಗಿ ಶ್ರೀ ಸ್ವಾಮೀಜಿಯವರಿಗೆ ಸಂಗೀತ ದಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ವರ್ಲ್ಡ್ ಕ್ಲಾಸಿಕಲ್ ತಮಿಳು ವಿಶ್ವವಿದ್ಯಾಲಯ, ಲಂಡನ್ ವತಿಯಿಂದ ಸ್ವಾಮೀಜಿಗಳಿಗೆ ಶ್ರೀ ಡಾಕ್ಟರ್ ಆಫ್ ಲೆಟರ್ಸ್ ಗೌರವ ಪದವಿ ನೀಡಿ ಗೌರವಿಸಿದೆ. ಈ ಎಲ್ಲಾ ಗೌರವಗಳಿಗೆ ಭಾಜನರಾಗಿರುವ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಯವರ ಜೀವನವು ನೇರ ಪುರಾವೆಯಾಗಿದೆ. ಸಕಲ ಜೀವಿಗಳ ಸೇವೆ ಮತ್ತು ಸಕಲ ಜೀವಿಗಳ ಕಲ್ಯಾಣವನ್ನು ಗಮನದಲ್ಲಿಟ್ಟು ಕೊಂಡು ದೇಶದ ಮತ್ತು ಪ್ರಪಂಚದ ಮೂಲೆ ಮೂಲೆಗಳಲ್ಲಿ ಅನೇಕ ಆಶ್ರಮ ಗಳನ್ನು, ಸಂಸ್ಥೆಗಳನ್ನು ಮತ್ತು ವಿಭಿನ್ನ ಯೋಜನೆಗಳನ್ನು ಸ್ಥಾಪಿಸಿದ್ದಾರೆ. ಶ್ರೀ ಸ್ವಾಮೀಜಿಯವರು ತಮ್ಮ ಚಿಕಿತ್ಸಕ ಮತ್ತು ಧ್ಯಾನ ಸಂಗೀತದ ಜೊತೆಗೆ ಪ್ರಾಚೀನ ವೈದಿಕ ಸಂಪ್ರದಾಯ ಗಳನ್ನು ಉತ್ತೇಜಿಸುವ ದಿವ್ಯ ಕೆಲಸವನ್ನು ಮಾಡು ತ್ತಿದ್ದಾರೆ. ದತ್ತಪೀಠವು ಇಂದು ವೇದಗಳ ಅಧ್ಯಯನದ ಪ್ರಮುಖ ಕೇಂದ್ರವಾಗಿದೆ. ಇಷ್ಟೇ ಅಲ್ಲ, ನಮ್ಮ ಪೂರ್ವಜರು ನಮಗೆ ನೀಡಿದ ಹಾಡು, ಸಂಗೀತ, ಕಂಠದ ಶಕ್ತಿಯನ್ನು



ಜನರ ಆರೋಗ್ಯಕ್ಕೆ ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆ ಸ್ವಾಮೀಜಿಯವರ ಮಾರ್ಗ ದರ್ಶನದಲ್ಲಿ ಪರಿಣಾಮಕಾರಿ ಆವಿಷ್ಕಾರಗಳನ್ನು ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಸ್ವಾಮೀಜಿಯಂತಹ ಸಂತರ ಪ್ರಯತ್ನದಿಂದಾಗಿ ಇಂದು ದೇಶದ ಯುವಕರು ತಮ್ಮ ಸಂಪ್ರದಾಯಗಳ ಶಕ್ತಿಯನ್ನು ಅರಿತು ಮುನ್ನಡೆಯುತ್ತಿದ್ದಾರೆ. ನಮ್ಮ ಸಂತರು ಯಾವಾಗಲೂ ನಾವು ಮೇಲೇರಲು ಮತ್ತು ಎಲ್ಲರಿಗಾಗಿ ಕೆಲಸ ಮಾಡಲು ನಮಗೆ ಸ್ಫೂರ್ತಿ ನೀಡಿದ್ದಾರೆ. ಇಂದು ದೇಶವು ತನ್ನ ಪ್ರಾಚೀನತೆಯನ್ನು ಸಂರಕ್ಷಿಸಿ, ಉತ್ತೇಜಿಸುತ್ತಿದೆ ಮತ್ತು ಅದರ ನಾವೀನ್ಯತೆ ಮತ್ತು ಆಧುನಿಕತೆಗೆ ಬಲವನ್ನು ನೀಡುತ್ತದೆ. ಸ್ವಾಮೀಜಿ ಯವರು ಪ್ರಕೃತಿಯ ಸಂರಕ್ಷಣೆ ಮತ್ತು ಪಕ್ಷಿಗಳ ಸೇವೆಗಾಗಿ ಅಸಾಮಾನ್ಯ ಕೆಲಸವನ್ನು ಮಾಡುತ್ತಿದ್ದಾರೆ. ಅವರ ಈ ಸೇವೆ ನಿರಂತರವಾಗಿರಲಿ ಎಂದು ಪ್ರಾರ್ಥಿಸುತ್ತೇನೆ ಎಂದು ತಿಳಿಸಿದರು.

ನಮ್ಮ ನೀರಿನ ಮೂಲಗಳು ಮತ್ತು ನದಿಗಳ ರಕ್ಷಣೆಗಾಗಿ, ನೀರಿನ ಸಂರಕ್ಷಣೆಗಾಗಿ ಸಾರ್ವಜನಿಕ ಜಾಗೃತಿ ಯನ್ನು ಹೆಚ್ಚಿಸಲು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕೆಂದು ಒತ್ತಾಯಿಸಿದ ಅವರು, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯಕ್ಕಾಗಿ ಮತ್ತೊಮ್ಮೆ ದೇವರನ್ನು ಪ್ರಾರ್ಥಿಸುತ್ತೇನೆ ಹಾಗೂ ದತ್ತಪೀಠದ ಮೂಲಕ ಸಮಾಜದ ಶಕ್ತಿಯು ಹೀಗೆಯೇ ಬೆಳೆ ಯಲಿ ಎಂದು ಹಾರೈಸುತ್ತೇನೆ ಎಂದು ಹೇಳಿದರು.


ಭಾರತದ 'ಉಕ್ಕಿನ ಮನುಷ್ಯ', ದೇಶದ ಮೊದಲ ಗೃಹ ಸಚಿವ ಸರ್ದಾರ್ ವಲ್ಲಭ ಭಾಯ್ ಪಟೇಲ್ ಅವರ ಜನ್ಮದಿನದ ಅಂಗವಾಗಿ ಅವರಿಗೆ ನಮನ ಸಲ್ಲಿಸುತ್ತಾ, ರಾಷ್ಟ್ರೀಯ ಏಕತಾ ದಿನದಂದು ಎಲ್ಲಾ ದೇಶವಾಸಿಗಳಿಗೆ ಶುಭಾಶಯ ತಿಳಿಸಿದರು. ಸರ್ದಾರ್ ಪಟೇಲ್ ಅವರ ದೇಶಕ್ಕೆ ಸಮರ್ಪಿತ ಜೀವನ ಮತ್ತು ದೇಶದ ಮೊದಲ ಗೃಹ ಸಚಿವರಾಗಿ ಅವರ ರಾಷ್ಟ್ರ ನಿರ್ಮಾಣ ಕಾರ್ಯವು ನಮಗೆ ಯಾವಾಗಲೂ ಸ್ಫೂರ್ತಿ ನೀಡುತ್ತದೆ ಎಂದು ಅವರು ತಿಳಿಸಿದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಕಾರ್ಯಕ್ರಮದಲ್ಲಿ ಶ್ರೀಗಳು ಸಂಗೀತ ಆಲಿಸಲು ವಯಸಿನ ಮಿತಿ ಇಲ್ಲ, ಎಲ್ಲರೂ ಕೇಳಿ ಆನಂದಿಸಬಹುದು ಎಂದು ಹೇಳಿದರು.

ಸಣ್ಣ ಮಗುವಿನಿಂದ ವೃದ್ಧರವರೆಗೆ ಎಲ್ಲರನ್ನು ಸಂಗೀತ ಆಕರ್ಷಿಸುತ್ತದೆ, ಪ್ರತಿದಿನ ಮಲಗುವ ಮುನ್ನ ಎಲ್ಲರೂ ಸಂಗೀತವನ್ನು ಕೇಳುವುದರಿಂದ ಮನಸ್ಸು ನಿರಾಳವಾಗುತ್ತದೆ ಶಾಂತಿ ಸಿಗುತ್ತದೆ ಎಂದು ಶ್ರೀಗಳು ತಿಳಿಸಿದರು. ಸಂಗೀತದ ಮಹಿಮೆಯನ್ನು ವಿವರಿಸಿದ ಅವರು ಸಂಗೀತದ ಮಹಿಮೆಯಿಂದ ಕಾಲ, ಕಾಲಕ್ಕೆ ವೃಕ್ಷದಲ್ಲಿ ಫಲವನ್ನು ಗಿಡಗಳಲ್ಲಿ ಹೂವುಗಳನ್ನು ಕಾಣಬಹುದು ಎಂದು ಗಣಪತಿ ಶ್ರೀಗಳು ಹೇಳಿದರು. ಕಾರ್ಯಕ್ರಮದಲ್ಲಿ ವಿವಿ ಕುಲಪತಿ ನಾಗೇಶ್ ವಿ ಬೆಟ್ಟಕೋಟೆ ಮತ್ತು ಸಿಂಡಿಕೇಟ್ ಸದಸ್ಯರುಗಳು ಉಪಸ್ಥಿತರಿದ್ದರು.

ಇಂದು ಶ್ರೀರಾಂಪುರದಲ್ಲಿ 'ನಗೆ ಹಬ್ಬ'

ಮೈಸೂರು, ಅ.31–ಮೈಸೂರಿನ ಶ್ರೀರಾಂಪುರ ಗೆಳೆಯರ ಬಳಗ ಸಾಂಸ್ಕೃತಿಕ ಮತ್ತು ಸೇವಾ ವೇದಿಕೆ ವತಿಯಿಂದ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಾಳೆ (ನ.1) ಶ್ರೀರಾಂಪುರ ಎಸ್‌ಬಿಐ ಬಡಾವಣೆ, ಶಿವ ದೇವಾಲಯ ಸರ್ಕಲ್‌ನಲ್ಲಿ 'ನಗೆ ಹಬ್ಬ' ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಕೆ.ಆರ್.ಕ್ಷೇತ್ರದ ಬಿಜೆಪಿ ಮುಖಂಡ ಎಂ.ಪ್ರಸಾದ್ ಬಾಬು ತಿಳಿಸಿದ್ದಾರೆ. 'ನಗೆ ಹಬ್ಬ' ಕಾರ್ಯಕ್ರಮದಲ್ಲಿ ಈಗಾಗಲೇ ದೇಶ–ವಿದೇಶಗಳಲ್ಲಿ ತಮ್ಮ ಹಾಸ್ಯ ಲಹರಿ ಮೂಲಕ ಜನಪ್ರಿಯತೆ ಗಳಿಸಿರುವ ಹಾಸ್ಯ ಕಲಾವಿದರಾದ ಗಂಗಾವತಿ ಪ್ರಾಣೇಶ್, ನರಸಿಂಹ ಜೋಶಿ ಮತ್ತು ಬಸವರಾಜ್ ಮಹಾಮನೆ ಅವರುಗಳು ಭಾಗವಹಿಸಿ ಪ್ರೇಕ್ಷಕರಿಗೆ ನಗೆಯ ರಸದೌತಣ ನೀಡಲಿದ್ದು, ಮಾಜಿ ಶಾಸಕ ಎಸ್.ಎ.ರಾಮದಾಸ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸವರು ಎಂದು ಅವರು ಹೇಳಿದ್ದಾರೆ.


ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ 'ನಗೆ ಹಬ್ಬ'ವನ್ನು ಯಶಸ್ವಿಗೊಳಿಸುವಂತೆ ಅವರು ತಮ್ಮ ಪ್ರಕಟಣೆಯಲ್ಲಿ ಕೋರಿದ್ದಾರೆ.



ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ನಿತ್ಯ ಸಚಿವ ದಿವಂಗತ ಕೆ.ವಿ.ಶಂಕರೇಗೌಡ ಅವರ ಮೊಮ್ಮಗ ಕೆ.ಎಸ್. ಶಶಾಂಕ ಅವರಿಗೆ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಪಿಎಚ್.ಡಿ ಪದವಿ ಪ್ರದಾನ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಇತರರು ಇದ್ದಾರೆ.

ಕರ್ನಾಟಕ ಸೇನಾ ಪಡೆಯಿಂದ ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಮಹನೀಯರ ಸ್ಮರಣೆ



ಮೈಸೂರು, ಅ.31–ಕರ್ನಾಟಕ ಸೇನಾ ಪಡೆ ವತಿಯಿಂದ ಮೈಸೂರಿನ ಅಗ್ರಹಾರ ವೃತ್ತದಲ್ಲಿ ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ನಾಡಿನ ಮಹನೀಯರುಗಳನ್ನು ಸ್ಮರಿಸಲಾಯಿತು.

ಅನೇಕರ ಹೋರಾಟದ ಫಲವಾಗಿ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣವಾಗಿ 50 ವರ್ಷ ಪೂರ್ಣಗೊಳ್ಳುವ ಈ ಸುವರ್ಣ ಮಹೋತ್ಸವದ ಸಂದರ್ಭವಾಗಿ ಕನ್ನಡ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪುಷ್ಪಾರ್ಚನೆ ಮಾಡಿದರು. ನಂತರ ಅಗ್ರಹಾರ ವೃತ್ತದ ಅನೇಕ ಅಂಗಡಿಗಳಿಗೆ ಕನ್ನಡ ಬಾವುಟ ನೀಡಿ, ಅವುಗಳ ಹಾಕುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಕರ್ನಾಟಕ ಎಂದು ನಾಮಕರಣವಾಗಿ 50ನೇ ವರ್ಷದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ನಾವು ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರನ್ನು ನೆನೆಯಬೇಕು ಎಂದು ತಿಳಿಸಿದರು.

ಇಂದು ಅವರ ಜನ್ಮದಿನವೂ ಆಗಿದ್ದು ಒಂದು ಖುಷಿಯ ವಿಚಾರ. ಆಡಳಿತದಲ್ಲಿ ಕನ್ನಡವನ್ನು ಹೆಚ್ಚೆಚ್ಚು ಬಳಸಬೇಕು, ಜತೆಗೆ ಸರ್ಕಾರ ನೆಲಜಲ ಭಾಷೆಗಳ ಉಳಿವಿಗಾಗಿ ಹೋರಾಟ ಮಾಡುವ ಕನ್ನಡ ಹೋರಾಟಗಾರರ ಮೇಲಿನ ಕೇಸನ್ನು ವಾಪಸು ಪಡೆಯಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡ ಡಾ. ಶುಶ್ರುತ್ ಗೌಡ ಮಾತನಾಡಿ, ನಮ್ಮ ರಾಜ್ಯ ದೇಶದಲ್ಲೇ ಹೆಚ್ಚು ಹೆಸರು ಮಾಡಿದೆ. ಇಡೀ ವಿಶ್ವದಲ್ಲೇ ಬೆಂಗಳೂರು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ ಎಂದು ಹೇಳಿದರು. ಸರ್ಕಾರ ಎಲ್ಲಾ ಕಡೆ ಕನ್ನಡವನ್ನು ಹೆಚ್ಚೆಚ್ಚು ಬಳಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ನವೀನ್ ಕುಮಾರ್, ಜೂ ವಿಷ್ಣುವರ್ಧನ್, ಸುರೇಶ್ ಗೋಲ್ಡ್, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಡಾ.ಶಾಂತರಾಜೇ ಅರಸ್, ಕೃಷ್ಣಯ್ಯ, ವಿಜಯೇಂದ್ರ, ಮಹಾದೇವ ಆರ್, ಅಂಬಾ ಅರಸ್, ನೇಹಾ, ಪ್ರಭಾಕರ, ಜ್ಯೋತಿ, ಪದ್ಮ, ಶುಭಶ್ರೀ, ಪುಷ್ಪವತಿ, ಶ್ರೀನಿವಾಸ, ನಂದಕುಮಾರ್, ರವಿ ಒಲಂಪಿಯ, ದಿನೇಶ್, ಕುಮಾರ್ ಗೌಡ, ಹನುಮಂತಯ್ಯ, ಗಣೇಶ್ ಪ್ರಸಾದ್, ಕೃಷ್ಣಮೂರ್ತಿ ರವಿ ನಾಯಕ್, ದರ್ಶನ್ ಗೌಡ, ಮತ್ತಿತರರು ಪಾಲ್ಗೊಂಡಿದ್ದರು.

ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆಗಳಿಗೆ 50% ರಿಯಾಯಿತಿ

ಮೈಸೂರು, ಅ. 31–ಜೆಎಸ್‌ಎಸ್ ಗ್ರಂಥಮಾಲೆಯ ಎಲ್ಲಾ ಪ್ರಕಟಣೆಗಳಿಗೆ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನ.1 ರಿಂದ 30 ರವರೆಗೆ ಶೇ. 50ರಷ್ಟು ರಿಯಾಯಿತಿ ನೀಡಲಾಗುತ್ತದೆ. ಮಾಹಿತಿ ಅಗತ್ಯವಿದ್ದಲ್ಲಿ ಮೊ: 9900953152, 9731254484ಗೆ ಸಂಪರ್ಕ ಸಬಹುದು. ಸಾಹಿತ್ಯಾಸಕ್ತರು ಈ ಸದವಕಾಶ ವನ್ನು ಬಳಸಿಕೊಳ್ಳಬೇಕಾಗಿ ಕೋರಿದೆ.

ಮೈಸೂರಲ್ಲಿ ಆರು, ಚಾ.ನಗರ ಇಬ್ಬರು, ಕೊಡಗು, ಮಂಡ್ಯ, ಹಾಸನದ ತಲಾ ಒಬ್ಬರಿಗೆ ರಾಜ್ಯೋತ್ಸವ ಪ್ರಶಸ್ತಿ

ಮೂರನೇ ಪುಟದಿಂದ

ಜೀವನ ನಡೆಸುತ್ತಿದ್ದಾರೆ. ಸೈಕಲ್‌ನಲ್ಲಿಯೇ ಮನೆ ಮನೆಗೆ ಪತ್ರಿಕೆ ತಲುಪಿಸುವ ಕಾಯಕವನ್ನು ಅತ್ಯಂತ ನಿಷ್ಠೆಯಿಂದ ಮಾಡುವ ಮೂಲಕ ಮಾದರಿಯಾಗಿದ್ದಾರೆ. ಇಂಗ್ಲಿಷ್ ಭಾಷೆಯನ್ನೂ ಬಲ್ಲ ಇವರು ಕಥೆ ಮತ್ತು ಪುಸ್ತಕ ಓದುವ ಹವ್ಯಾಸ ರೂಢಿಸಿಕೊಂಡಿದ್ದಾರೆ. ಮೊದಲ ಬಾರಿಗೆ ಪತ್ರಿಕಾ ವಿತರಕರನ್ನು ಗುರುತಿಸಿರುವುದಕ್ಕೆ ಜವರಪ್ಪನವರು ಅತೀವ ಸಂತಸ ವ್ಯಕ್ತಪಡಿಸಿದ್ದಾರೆ. ಪತ್ರಿಕಾ ವಿತರಕನಾಗಿ 5 ದಶಕಗಳ ಸೇವೆ ಪರಿಗಣಿಸಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವುದಕ್ಕೆ ಖುಷಿಯಾಗಿದೆ. ಇದು ಜೀವನದಲ್ಲಿ ಮರೆಯಲಾಗದ ಕ್ಷಣ ಎಂದು ತಿಳಿಸಿದ್ದಾರೆ.

ರಂಗಾಯಣ ನಿವೃತ್ತ ಪ್ರಶಿಕ್ಷಕರಿಗೆ ಪ್ರಶಸ್ತಿ

ಮೂಲತಃ ಗದಗ ಜಿಲ್ಲೆ ಮುಂಡರಗಿ ಗ್ರಾಮದವರಾದ ಮೈಸೂರಿನ ದಟ್ಟಗಳ್ಳಿ ನಿವಾಸಿ ಪಿ.ಗಂಗಾಧರ ಸ್ವಾಮಿ(74 ವರ್ಷ) ಅವರು ರಂಗಭೂಮಿ ಕ್ಷೇತ್ರದಿಂದ ರಾಜ್ಯೋತ್ಸವ ಪ್ರಶಸ್ತಿಗೆ ಬಾಜನರಾಗಿದ್ದಾರೆ. ಹೋಮಿಯೋಪತಿ ಕೋರ್ಸ್‌ಗಾಗಿ 1971ರಲ್ಲಿ ಬೆಂಗಳೂರಿಗೆ ಆಗಮಿಸಿದ ಇವರು, ಕೋರ್ಸ್ ಮುಗಿಸಿದ ನಂತರ ರಂಗಭೂಮಿಯಲ್ಲಿ ಬದುಕು ಕಟ್ಟಿಕೊಂಡವರು. ಬೆಂಗಳೂರು ವಿಶ್ವವಿದ್ಯಾನಿಲಯದ ನಾಟಕ ವಿಭಾಗದ ಮೊದಲ ಬ್ಯಾಚ್‌ನಲ್ಲಿ ಪದವಿ ಮುಗಿಸಿ, ಬೆಂಗಳೂರಿನ ಸಿನಿಮಾ ಸಂಸ್ಥೆಯೊಂದರಲ್ಲಿ ಉಪನ್ಯಾಸಕರಾಗಿದ್ದರು. ಬಳಿಕ 1989ರಲ್ಲಿ ಮೈಸೂರಿನ ರಂಗಾಯಣದ ಪ್ರಶಿಕ್ಷಕರಾಗಿ ನೇಮಕಗೊಂಡರು. 2006ರವರೆಗೂ ಇಲ್ಲಿ ಸೇವೆ ಸಲ್ಲಿಸಿ ನಂತರ ಧಾರವಾಡ ರಂಗಾಯಣಕ್ಕೆ ವರ್ಗಾವಣೆಗೊಂಡರು. ಸೇವೆಯಿಂದ ನಿವೃತ್ತರಾದ ಬಳಿಕ ಪತ್ನಿ ಹಾಗೂ ಪುತ್ರಿಯೊಂದಿಗೆ ಮೈಸೂರಿನ ದಟ್ಟಗಳ್ಳಿಯಲ್ಲಿ ನೆಲೆಸಿದ್ದಾರೆ. ಮೈಸೂರು ರಂಗಾಯಣದಲ್ಲಿ 'ಬೀಚಿ ಬುಲೆಟ್ಸ್' ಸೇರಿದಂತೆ ಹಲವು ನಾಟಕಗಳನ್ನು ನಿರ್ದೇಶನ ಮಾಡಿದ್ದಾರೆ. ಮೂಲ ಬಂಗಾಳಿ ನಾಟಕವನ್ನು ಹಿಂದಿಯಿಂದ ಕನ್ನಡಕ್ಕೆ 'ಮೆರವಣಿಗೆ' ಶೀರ್ಷಿಕೆಯಲ್ಲಿ ಅನುವಾದ ಮಾಡಿದ್ದು, ಆ ನಾಟಕವೂ ಸಾವಿರ ಪ್ರದರ್ಶನ ಕಂಡಿದೆ. ಗಂಗಾಧರ ಸ್ವಾಮಿ ಅವರ ಪುತ್ರಿಯೂ ನೀನಾಸಂ ಸಂಸ್ಥೆಯಲ್ಲಿ ಅಧ್ಯಯನ ಮಾಡಿ ಜೆಎಸ್‌ಎಸ್ ಕಾಲೇಜಿನಲ್ಲಿ ಡ್ರಾಮಾ ಟೀಚರ್ ಆಗಿದ್ದಾರೆ.

ಸಾಹಿತ್ಯ, ಸಂಸ್ಕೃತಿ ಸಾಧಕನಿಗೆ ಪುರಸ್ಕಾರ

ಸಾಹಿತ್ಯ ಹಾಗೂ ಸಂಸ್ಕೃತಿ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿರುವ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರಿಗೆ ಸಂಕೀರ್ಣ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಮೈಸೂರಿನಲ್ಲಿ ನೆಲೆಸಿರುವ ಇವರು ಮೂಲತಃ ಉಡುಪಿ ಜಿಲ್ಲೆಯ ಹೆಬ್ರಿ ತಾಲೂಕಿನ ಕಬ್ಬಿನಾಲೆ ಗ್ರಾಮದವರು. 48ನೇ ವಯಸ್ಸಿನಲ್ಲಿ ಬ್ಯಾಂಕ್ ಮ್ಯಾನೇಜರ್ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಕಾವ್ಯ, ಕಥೆ, ಅನುವಾದ, ಸಂಶೋಧನೆ, ವಿಮರ್ಶೆ, ನಿಘಂಟು ರಚನೆ, ಗ್ರಂಥ ಸಂಪಾದನೆ, ಗೀತ ರೂಪಕ ಸೇರಿದಂತೆ ಬಹುತೇಕ ಎಲ್ಲಾ ಪ್ರಕಾರಗಳಲ್ಲೂ ಸಾಹಿತ್ಯ ಕೃಷಿ ಮಾಡಿದ್ದಾರೆ. ನೂರೈವತ್ತಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಯಕ್ಷಗಾನ ವಿದ್ವಾಂಸರಾಗಿಯೂ ಅತ್ಯಮೂಲ್ಯ ಸೇವೆ ನೀಡಿದ್ದಾರೆ. ಸಾಹಿತ್ಯ, ಸಂಸ್ಕೃತಿ, ಕಲೆಯ ಮಹತ್ವ ಸಾರುತ್ತಿರುವ ಇವರ ಸೇವೆಯನ್ನು ಕರ್ನಾಟಕ ಸರ್ಕಾರ ಪುರಸ್ಕರಿಸಿದೆ. ಕರ್ನಾಟಕ ಯಕ್ಷಗಾನ ಅಕಾಡೆಮಿಯ ಪಾರ್ತಿಸುಬ್ಬ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಸಂದಿದ್ದು, ರಾಜ್ಯೋತ್ಸವ ಪ್ರಶಸ್ತಿ ನೀಡುತ್ತಿರುವುದಕ್ಕೆ ಅತೀವ ಸಂತಸ ವ್ಯಕ್ತಪಡಿಸಿದ್ದಾರೆ.

ಬೀಸು ಕಂಸಾಳೆ ಕಲಾವಿದರ ಹಿರಿಮೆ

ನಂಜನಗೂಡು ತಾಲೂಕಿನ ಕೆಂಪಿಸಿದ್ದನಹುಂಡಿ ಮಹದೇವು(74 ವರ್ಷ) ಅವರ ಜಾನಪದ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಲಾಗಿದೆ. 50 ವರ್ಷಗಳಿಂದ ಬೀಸು ಕಂಸಾಳೆ ಕಲೆಯನ್ನೇ ಉಸಿರಾಗಿಸಿಕೊಂಡಿರುವ ಇವರು ಶ್ರೀ ಮಲೆ ಮಹದೇಶ್ವರಸ್ವಾಮಿ ಬೀಸು ಕಂಸಾಳೆ ಸಂಘ ಕಟ್ಟಿಕೊಂಡು ಮೈಸೂರು ದಸರಾ, ನವದೆಹಲಿ ಸೇರಿದಂತೆ ವಿವಿಧೆಡೆ ಕಾರ್ಯಕ್ರಮ ನೀಡಿದ್ದಾರೆ. 40ಕ್ಕೂ ಹೆಚ್ಚು ಯುವಕರಿಗೆ ತರಬೇತಿ ನೀಡುವ ಮೂಲಕ ಮುಂದಿನ ತಲೆಮಾರಿಗೂ ಬೀಸು ಕಂಸಾಳೆ ಕಲೆಯನ್ನು ದಾಟಿಸುವ ಪ್ರಯತ್ನ ಮಾಡಿದ್ದಾರೆ. 2017ರಲ್ಲಿ ಜಾನಪದ ಅಕಾಡೆಮಿ ಸದಸ್ಯರಾಗಿದ್ದ ಇವರು 2022ರಲ್ಲಿ ಅದೇ ಅಕಾಡೆಮಿ ಇವರಿಗೆ ಪ್ರಶಸ್ತಿ ನೀಡಿ, ಗೌರವಿಸಿದೆ. ರಾಜ್ಯೋತ್ಸವ ಪ್ರಶಸ್ತಿ ದಕ್ಕಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಅವರು, ರಾಜ್ಯ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅಭಿನಂದನೆ ತಿಳಿಸಿದ್ದಾರೆ.

ಪತ್ರಿಕಾ ಪ್ರತಿನಿಧಿಗಳ ಸಂಘ ಸಂತಸ

ಮೈಸೂರು, ಅ.31– ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಿಕಾ ವಿತರಕ ಜವರಪ್ಪ ಅವರನ್ನು ಮೈಸೂರು ಜಿಲ್ಲಾ ಪತ್ರಿಕಾ ಪ್ರತಿನಿಧಿಗಳ ಸಂಘ ಅಭಿನಂದಿಸಿದೆ.

ಮೈಸೂರಿನ ಹಿರಿಯ ಪತ್ರಿಕಾ ವಿತರಕರಾದ ಜವರಪ್ಪ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಸಂದಿರುವುದು ಹೆಮ್ಮೆಯ ಸಂಗತಿ. ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪತ್ರಿಕಾ ವಿತರಕರನ್ನೂ ರಾಜ್ಯೋತ್ಸವ ಪ್ರಶಸ್ತಿಗಾಗಿ ಪರಿಗಣಿಸಿರುವುದು, ಇಡೀ ವಿತರಕ ಸಮುದಾಯಕ್ಕೆ ಸಂದ ಗೌರವ. ಪತ್ರಿಕಾ ವಿತರಕರ ಪರಿಶ್ರಮವನ್ನೂ ಗುರುತಿಸಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆಗಳು. ಕನ್ನಡ ಕಾಯಕದಲ್ಲಿ ತೊಡಗಿರುವ ಪತ್ರಿಕಾ ವಿತರಕರನ್ನು ಪ್ರತಿ ವರ್ಷ ಪರಿಗಣಿಸುವಂತೆ ಸಂಘದ ಎಲ್ಲಾ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಸದಸ್ಯರ ಪರವಾಗಿ ಮನವಿ ಮಾಡುತ್ತೇವೆ ಎಂದು ಸಂಘದ ಅಧ್ಯಕ್ಷ ಪಿ.ಸುರೇಶ್, ಪ್ರಧಾನ ಕಾರ್ಯದರ್ಶಿ ಎ.ರವಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂಪ್ರದಾಯಿಕ ಕಲೆ ಸಂರಕ್ಷಕರಿಗೆ ಪ್ರಶಸ್ತಿ

ಅಳಿವಿನಂಚಿನಲ್ಲಿರುವ ಸಾಂಪ್ರದಾಯಿಕ ಇನ್ಲೆ(ಹುದುಗು) ಕಲೆಯ ಉಳಿವಿಗಾಗಿ ಶ್ರಮಿಸುತ್ತಿರುವ ಪಿ.ಗೌರಯ್ಯ(68 ವರ್ಷ) ಅವರು ಶಿಲ್ಪಕಲೆ/ಚಿತ್ರಕಲೆ/ಕರಕುಶಲ ಕ್ಷೇತ್ರದಿಂದ ರಾಜ್ಯೋತ್ಸವ ಪ್ರಶಸ್ತಿಗೆ ಬಾಜನರಾಗಿದ್ದಾರೆ. ಕರಕುಶಲ ಕಲೆಯ ಮಹಾಗುರು ಮೀರ್ ಶೌಕತ್ ಆಲಿ ಅವರ ಬಳಿ ಇನ್ಲೆ ಕಲೆ ಕಲಿಯುವುದರ ಜೊತೆಗೆ ಅದೇ ವಿಷಯದಲ್ಲಿ ಡಿಪ್ಲೊಮಾ ಪದವಿ ಪಡೆದಿದ್ದಾರೆ. ಮರದ ಕೆತ್ತನೆ ಮೂಲಕ ಕೃತಿಗಳ ರಚನೆ ಮಾಡುವ ಇನ್ಲೆ ಕಲೆ ಒಲಿಸಿಕೊಳ್ಳಲು ಶ್ರದ್ಧಾಪೂರ್ವಕ ಆಸಕ್ತಿ ಅಗತ್ಯ. ಆದರೆ ಗೌರಯ್ಯನವರು ಬಣ್ಣದ ಮರದ ಶೋಧನೆ, ಅದರ ಹಾಳೆಗಳಿಂದ ಕಲೆ ಹಾಗೂ ಕಲಾಕೃತಿ ನಿರ್ಮಾಣ ಮಾಡುವಲ್ಲಿನ ಎಲ್ಲಾ ಹಂತಗಳಲ್ಲೂ ಪ್ರಾವಿಣ್ಯತೆ ಪಡೆದಿದ್ದಾರೆ. ಇನ್ಲೆಗೆ ವಿಜ್ಞಾನ– ತಂತ್ರಜ್ಞಾನ ಸ್ಪರ್ಶ ನೀಡುವ ಘಟಕ ಆರಂಭಿಸುವ ಮೂಲಕ ನೂರಾರು ಕಲಾಕಾರರಿಗೆ ತರಬೇತಿ, ಮಾರ್ಗದರ್ಶನ ನೀಡಿದ್ದಾರೆ.

ಮಿಮಿಕ್ರಿ ಕಲಾವಿದನ ಮುಡಿಗೇರಿದ ಗರಿ

ಮೈಸೂರು ಮೂಲದ ಮಿಮಿಕ್ರಿ ದಯಾನಂದ್ ಅವರಿಗೆ ಸಂಕೀರ್ಣ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಇತ್ತೀಚೆಗೆ ಹೆಚ್ಚು ಪ್ರಸಿದ್ಧಿಯಾಗಿರುವ ಸ್ಟ್ಯಾಂಡ್–ಅಪ್ ಕಾಮಿಡಿಯಿಂದ ದಶಕಗಳ ಹಿಂದೆಯೇ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದಾರೆ. 1990ರಿಂದ ಕನ್ನಡದ ಹಿರಿತೆರೆ–ಕಿರುತೆರೆ ಕಲಾವಿದನಾಗುವ ಜತೆಗೆ ನೂರಾರು ಹಾಸ್ಯಗೋಷ್ಠಿಗಳಲ್ಲಿ ಕಾರ್ಯಕ್ರಮ ನೀಡುತ್ತಾ ಬರುತ್ತಿದ್ದಾರೆ. ಬಹುತೇಕ ಎಲ್ಲಾ ನಟರ ಧ್ವನಿಯನ್ನು ಅನುಕರಣೆ ಮಾಡುವ ಮಿಮಿಕ್ರಿ ದಯಾನಂದ್ ಎಂದೇ ಪ್ರಸಿದ್ಧರಾಗಿದ್ದಾರೆ. ಹಾಸ್ಯಭರಿತ ಮಾತುಗಳ ಮೂಲಕ ಜನಮನ್ನಣೆ ಗಳಿಸುವುದರ ಜೊತೆಗೆ ಅಭಿನಯದಲ್ಲೂ ಸೈ ಎನಿಸಿಕೊಂಡಿದ್ದಾರೆ. ಇತ್ತೀಚೆಗೆ 'ಅನಿರೀಕ್ಷಿತ' ಹೆಸರಿನ ಚಲನಚಿತ್ರದ ಮೂಲಕ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಪುಸ್ತಕ ಪ್ರಕಾಶನ ಸಂಸ್ಥೆಗೆ ರಾಜ್ಯೋತ್ಸವ ಪ್ರಶಸ್ತಿ

ಇದೇ ಮೊದಲ ಬಾರಿಗೆ 10 ಸಂಸ್ಥೆಗಳಿಗೆ ಕರ್ನಾಟಕ ಸಂಭ್ರಮ–50ರ ರಾಜ್ಯೋತ್ಸವ ಪ್ರಶಸ್ತಿ ಘೋಷಿಸಿದ್ದು, ಮೈಸೂರು ಸರಸ್ವತಿಪುರಂನ ಬಿ.ಎನ್. ಶ್ರೀರಾಮ ಪುಸ್ತಕ ಪ್ರಕಾಶನಕ್ಕೂ ಪ್ರಶಸ್ತಿ ಸಂದಿದೆ. ಎನ್.ರಾಮ್ ಅವರು 1989ರಲ್ಲಿ ಈ ಪುಸ್ತಕ ಪ್ರಕಾಶನವನ್ನು ಆರಂಭಿಸಿದ್ದು, ಪೂರ್ಣಚಂದ್ರ ತೇಜಸ್ವಿ, ಚದುರಂಗ, ಸಾರಾ ಅಬೂಬಕ್ಕರ್, ಬಸವರಾಜು, ಅಪರಂಜಿ ಶಿವಕುಮಾರ್, ಪ್ರದೀಪ ಕೆಂಜಿಗೆ, ಪ್ರಭಾಕರ್ ಶೆಣೈ, ಕೃಪಾಕರ ಸೇನಾನಿ ಅವರ ಕೃತಿಗಳು ಸೇರಿ 120 ಪುಸ್ತಕಗಳನ್ನು ಪ್ರಕಟಿಸಿದೆ. ಸಮಾಜವಾದಿ ಚಳವಳಿಯ ಹಿನ್ನೆಲೆಯಿಂದ ಬಂದಿರುವ 86 ವರ್ಷದ ಶ್ರೀರಾಮ್ ಅವರು, ಇದು ಒಳ್ಳೆಯ ಬೆಳವಣಿಗೆ ಎಂದು ಖುಷಿ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ಪ್ರಕಾಶಕರ ಸಂಘದ ಹಲವು ವರ್ಷಗಳ ಬೇಡಿಕೆಗೆ ಈ ಬಾರಿ ಫಲ ಸಿಕ್ಕಿದೆ.

ಚಾ.ನಗರದಿಂದ ಪ್ರೊ.ಸಿ.ನಾಗಣ್ಣ, ಪ್ರೊ. ಗೋಪಾಲನ್ ಜಗದೀಶ್‌ಗೆ ಪ್ರಶಸ್ತಿ

ಚಾಮರಾಜನಗರದ ಪ್ರೊ.ಸಿ.ನಾಗಣ್ಣ ಸಾಹಿತ್ಯ ಕ್ಷೇತ್ರ ಹಾಗೂ ಪ್ರೊ.ಗೋಪಾಲನ್ ಜಗದೀಶ್ ವಿಜ್ಞಾನ–ತಂತ್ರಜ್ಞಾನ ಕ್ಷೇತ್ರದಿಂದ ರಾಜ್ಯೋತ್ಸವ ಪ್ರಶಸ್ತಿಗೆ ಬಾಜನರಾಗಿದ್ದಾರೆ.

ಪ್ರೊ.ಸಿ.ನಾಗಣ್ಣ: ಕನ್ನಡ ಹಾಗೂ ಇಂಗ್ಲಿಷ್ ಭಾಷೆ ಹಾಗೂ ಸಾಹಿತ್ಯದಲ್ಲಿ ಹಿಡಿತ ಹೊಂದಿರುವ ಪ್ರೊ.ಸಿ.ನಾಗಣ್ಣನವರು ಇವರು ಪ್ರಾಧ್ಯಾಪಕರಾಗಿ, ಸಾಹಿತಿಯಾಗಿ ದುಡಿದಿದ್ದಾರೆ. ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮದ ಇವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಇಂಗ್ಲಿಷ್ ಪ್ರಾಧ್ಯಾಪಕ ಸೇವೆ ಸಲ್ಲಿಸಿದವರಾದರೂ ಕನ್ನಡ ಸಾಹಿತ್ಯ ಸೇವೆ ಗಣನೀಯವಾಗಿದೆ. ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ತೌಲನಿಕ ಸಾಹಿತ್ಯ ಮತ್ತು ಭಾಷಾಂತರ ವಿಭಾಗದ ಪ್ರಾಧ್ಯಾಪಕರಾಗಿ, ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯ ಬೋಧಕರಾಗಿಯೂ ಸೇವೆ ಸಲ್ಲಿಸಿದ್ದು, ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಹಲವು ಕೃತಿಗಳನ್ನು ರಚಿಸಿದ್ದಾರೆ. ವಿಮರ್ಶಕ ಹಾಗೂ ಭಾಷಾಂತರಕಾರರಾಗಿ ಗುರುತಿಸಿಕೊಂಡಿದ್ದಾರೆ. ಸದ್ಯ ಮೈಸೂರಿನ ವಿಜಯನಗರದಲ್ಲಿ ನೆಲೆಸಿದ್ದಾರೆ.

ಪ್ರೊ. ಗೋಪಾಲನ್ ಜಗದೀಶ್: ಕೊಳ್ಳೇಗಾಲದವರಾದ ಪ್ರೊ.ಗೋಪಾಲನ್ ಜಗದೀಶ್ ಅವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದು, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ(ಐಐಎಸ್‌ಸಿ) ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ 25 ವರ್ಷಗಳಿಂದ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇವರು ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಕೊಡಗಿನ ಕೋದಂಡ ಪಿ.ಕಾರ್ಯಪ್ಪರಿಗೆ ಪುರಸ್ಕಾರ

ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಜನರಲ್ ಆಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಕೊಡಗಿನ ಮಾದಾಪುರ ಮೂಲದ ಅಧಿಕಾರಿ, ಪರಮ ವಿಶಿಷ್ಟ ಸೇವಾ ಮೆಡಲ್ ಪುರಸ್ಕೃತ ಕೋದಂಡ ಪಿ.ಕಾರ್ಯಪ್ಪ ಅವರು 'ರಾಜ್ಯೋತ್ಸವ' ಪ್ರಶಸ್ತಿಗೆ ಬಾಜನರಾಗಿದ್ದಾರೆ. 'ರಜಪೂತ್ ರೈಫಲ್ಸ್' ವಿಭಾಗದ ಮುಖ್ಯಸ್ಥರಾಗಿ, ಭಾರತೀಯ ಸೇನೆಯ ಶಸ್ತ್ರಾಸ್ತ್ರ ವಿಭಾಗದ ಮುಖ್ಯಸ್ಥರಾಗಿ, ದೇಶದ ರಕ್ಷಣಾ ಪಡೆಗಳ ಮುಖ್ಯಸ್ಥರಾಗಿ, ರಾಷ್ಟ್ರಪತಿಗಳ ಪರ್ಸನಲ್ ಆಫೀಸರ್ ಹಾಗೂ 'ಪ್ರಿನ್ಸಿಪಲ್ ಸ್ಟಾಫ್ ಆಫೀಸರ್ ಟು ಚೀಫ್ ಆಫ್ ಆರ್ಮಿ ಸ್ಟಾಫ್' ಹುದ್ದೆಗಳನ್ನು ಅಲಂಕರಿಸಿದ್ದ ಇವರು ನಿವೃತ್ತಿಯ ಬಳಿಕ ಮುಂಬಯಿಯಲ್ಲಿ ನೆಲೆಸಿದ್ದಾರೆ.

ಮಂಡ್ಯದ ಕೆ.ಟಿ.ಚಂದು ಅವರಿಗೆ ಪ್ರಶಸ್ತಿ

ಮದ್ದೂರು ತಾಲೂಕಿನ ಕೋಣಸಾಲೆ ಪಟೇಲ್ ತಮ್ಮಣ್ಣಗೌಡ, ಲಿಂಗಮ್ಮ ದಂಪತಿ ಪುತ್ರನಾಗಿ 1930, ಅ.22ರಂದು ಜನಿಸಿದ ಕೆ.ಟಿ.ಚಂದು ಅವರು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರ, ಬರಹಗಾರ, ಗಾಂಧಿವಾದಿ, ಕನ್ನಡ ಸಾಹಿತ್ಯ ಅಭಿಮಾನಿ, ಸಹಕಾರ ಸಂಘಟಕ, ಪುಸ್ತಕ ಪ್ರೇಮಿ, ರೈತ ಹೋರಾಟಗಾರ, ಪ್ರಗತಿಪರ ರೈತ ಆಗಿ ಚಿರಪರಿಚಿತರಾಗಿದ್ದಾರೆ. ಸರಳ ಸಜ್ಜನರಾದ ಇವರನ್ನು ಜನ 'ಚಂದು ಅಣ್ಣ' ಎಂದು ಪ್ರೀತಿಯಿಂದ ಕರೆಯುತ್ತಾರೆ. 2003ರಲ್ಲಿ ಜಿಲ್ಲಾಡಳಿತದಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಬಾಜನರಾಗಿದ್ದ ಇವರಿಗೆ 93ನೇ ವಯಸ್ಸಿನಲ್ಲಿ ರಾಜ್ಯೋತ್ಸವ ಪ್ರಶಸ್ತಿ ದಕ್ಕಿದೆ.

ಹಾಸನದ ಎಚ್.ಕೆ.ಸುಬ್ಬಯ್ಯ ಪ್ರಶಸ್ತಿಗೆ ಬಾಜನ

ಸುಬ್ಬು ಹೊಲೆಯಾರ್ ಎಂದೇ ಪ್ರಖ್ಯಾತರಾಗಿರುವ ಎಚ್.ಕೆ.ಸುಬ್ಬಯ್ಯ ಅವರು ಸಾಹಿತ್ಯ ಕ್ಷೇತ್ರದಿಂದ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕೋಮಾರಯ್ಯ ಮತ್ತು ತಿಪ್ಪಮ್ಮ ದಂಪತಿ ಮಗನಾಗಿ 1962ರ ಸೆ.21ರಂದು ಸಕಲೇಶಪುರ ತಾಲೂಕು ಹೆತ್ತೂರಿನಲ್ಲಿ ಜನಿಸಿದ ಇವರು, ಡಿಪ್ಲೊಮಾ ಇನ್ ಡ್ರಾಮಾ ಪದವಿ, ನೀನಾಸಂನಲ್ಲಿ ರಂಗ ಶಿಕ್ಷಣ ಪಡೆದಿದ್ದಾರೆ. ಪಿ.ಲಂಕೇಶ್ ಅವರ ಗರಡಿಯಲ್ಲಿ ಪಳಗಿದ ಇವರ 'ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು' ಕವನ ಸಂಕಲನಕ್ಕೆ ಡಾ. ಜಿಎಸ್‌ಎಸ್ ಕಾವ್ಯ ಪ್ರಶಸ್ತಿ ಸೇರಿದಂತೆ ಹಲವಾರು ಪುರಸ್ಕಾರಗಳು ಸಂದಿರುವುದು ಗಮನಾರ್ಹ. ಎರಡನೇ ಕೃತಿ 'ಎಲ್ಲರ ಬೆರಳಲ್ಲೂ ಅಂಟಿಕೊಂಡ ದು:ಖವೇ' ಕಾವ್ಯ ಸಂಗ್ರಹಕ್ಕೆ 2013 ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಪುತಿನ ಕಾವ್ಯ ಪ್ರಶಸ್ತಿ ದೊರೆತಿದೆ. 2010ರಲ್ಲಿ ಸಕಲೇಶಪುರ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಇವರ ಜೀವನ ಕಥೆ 'ದನ ಕಾಯದವನು' ಕೃತಿ ಆಧರಿಸಿದ 'ಕರಿಯ ಕಣ್‌ಬಿಟ್ಟ' ಕಲಾತ್ಮಕ ಚಲನಚಿತ್ರವನ್ನು ಕವಿತಾ ಲಂಕೇಶ್ ನಿರ್ದೇಶಿಸಿದ್ದಾರೆ. ದೂರದರ್ಶನ ಚಂದನ ವಾಹಿನಿಯಲ್ಲಿ 26 ವರ್ಷಗಳ ಕಾಲ ಸೇವೆ ನಂತರ ಬೆಂಗಳೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ಮಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಸಾಹಿತ್ಯ, ರಂಗಭೂಮಿ, ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ.

68 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ

(ಹಾವೇರಿ), ಲಕ್ಷ್ಮೀಪತಿ ಕೋಲಾರ(ಕೋಲಾರ), ಪರಪ್ಪ ಗುರುಪಾದಪ್ಪ ಸಿದ್ದಾಪುರ (ವಿಜಯಪುರ), ಡಾ. ಕೆಷರೀಫಾ (ಬೆಂಗಳೂರು) ಪ್ರಶಸ್ತಿ ಘೋಷಿಸಲಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ರಾಮಪ್ಪ ಹವಳೆ (ರಾಯಚೂರು), ಕೆ.ಚಂದ್ರಶೇಖರ್ (ಕೋಲಾರ), ಕೆ.ಟಿ.ಚಂದು (ಮಂಡ್ಯ). ಕ್ರೀಡಾ ಕ್ಷೇತ್ರದಲ್ಲಿ ಕುಮಾರಿ ಟಿ.ಎಸ್.ದಿವ್ಯಾ (ಕೋಲಾರ), ಅದಿತಿ ಅಶೋಕ್ (ಬೆಂಗಳೂರು), ಅಶೋಕ್ ಗದಿಗೆಪ್ಪ ಏಣಗಿ (ಧಾರವಾಡ). ಚಲನಚಿತ್ರ ಕ್ಷೇತ್ರದಲ್ಲಿ ಡಿಂಗ್ರಿ ನಾಗರಾಜ್, ಬಿ.ಜನಾರ್ಧನ್ (ಬ್ಯಾಂಕ್ ಜನಾರ್ಧನ್) (ಬೆಂಗಳೂರು).

ರಂಗಭೂಮಿ ಕ್ಷೇತ್ರ, ಎ.ಜಿ.ಚಿದಂಬರ ರಾವ್ ಜಂಬೆ (ಶಿವಮೊಗ್ಗ), ಪಿ. ಗಂಗಾಧರ ಸ್ವಾಮಿ (ಮೈಸೂರು), ಹೆಚ್.ಬಿ.ಸರೋಜಮ್ಮ (ಧಾರವಾಡ), ತಯ್ಯಬಖಾನ್ ಎಂ.ಇನಾಮದಾರ, ಡಾ.ವಿಶ್ವನಾಥ್ ವಂಶಾಕೃತ ಮಠ (ಬಾಗಲಕೋಟೆ), ಪಿ. ತಿಪ್ಪೇಸ್ವಾಮಿ (ಚಿತ್ರದುರ್ಗ).

ಸಂಗೀತ ಕ್ಷೇತ್ರ ಡಾ.ನಯನ ಎಸ್.ಮೋರೆ (ಬೆಂಗಳೂರು), ಲೀಲಾ ಎಂ ಕೊಡ್ಲಿ (ಧಾರವಾಡ), ಶಬ್ಬೀರ್ ಅಹಮದ್ (ಬೆಂಗಳೂರು), ಡಾ.ಎಸ್ ಬಾಳೇಶ ಭಜಂತ್ರಿ (ಬೆಳಗಾವಿ).

ಶಿಲ್ಪಕಲೆ ಮತ್ತು ಚಿತ್ರಕಲೆ ಕ್ಷೇತ್ರ ಟಿ.ಶಿವಶಂಕರ್ (ದಾವಣಗೆರೆ), ಕಾಳಪ್ಪ ವಿಶ್ವಕರ್ಮ (ರಾಯಚೂರು), ಮಾರ್ಥಾ ಜಾಕಿಮೋವಿಚ್ (ಬೆಂಗಳೂರು), ಪಿ.ಗೌರಯ್ಯ (ಮೈಸೂರು).

ಯಕ್ಷಗಾನ ಮತ್ತು ಬಯಲಾಟ ಕ್ಷೇತ್ರ ಅರ್ಗೋಡು ಮೋಹನದಾಸ ಶೆಣೈ (ಉಡುಪಿ), ಕೆ. ಲೀಲಾವತಿ ಬೈಪಾಡಿತ್ತಾಯ (ದ.ಕನ್ನಡ), ಕೇಶಪ್ಪ ಶಿಳ್ಳಿಕ್ಯಾತರ (ಕೊಪ್ಪಳ), ದಳವಾಯಿ ಸಿದ್ದಪ್ಪ (ವಿಜಯನಗರ).

ಜಾನಪದ ಕ್ಷೇತ್ರ ಹುಸೇನಾಬಿ ಬುಡೆನ್ ಸಾಬ್ ಸಿದ್ದಿ (ಉತ್ತರ ಕನ್ನಡ), ಶಿವಂಗಿ ಶಣ್ಮರಿ (ದಾವಣಗೆರೆ), ಮಹದೇವು (ಮೈಸೂರು), ನರಸಪ್ಪಾ (ಬೀದರ್), ಶಕುಂತಲಾ ದೇವಲಾನಾಯಕ (ಕಲಬುರಗಿ), ಎಚ್.ಕೆ ಕಾರಮಂಚಪ್ಪ (ಬಳ್ಳಾರಿ), ಡಾ.ಶಂಭು ಬಳಿಗಾರ (ಗದಗ), ವಿಭೂತಿ ಗುಂಡಪ್ಪ (ಕೊಪ್ಪಳ) ಚೌಡಮ್ಮ (ಚಿಕ್ಕಮಗಳೂರು). ಕೃಷಿ–ಪರಿಸರ ಕ್ಷೇತ್ರದಲ್ಲಿ ಸೋಮನಾಥ ರೆಡ್ಡಿ ಪೂರ್ಮ (ಕಲಬುರಗಿ), ದ್ಯಾವನಗೌಡ ಪಿ. ಪಾಟೀಲ (ಧಾರವಾಡ), ಶಿವರೆಡ್ಡಿ ಹನುಮರೆಡ್ಡಿ ವಾಸನ (ಬಾಗಲಕೋಟೆ).

ಸಂಕೀರ್ಣ ಕ್ಷೇತ್ರ: ಎ.ಎಂ.ಮದರಿ (ವಿಜಯಪುರ), ಹಾಜಿ ಅಬ್ದುಲ್ಲಾ ಪರಕಳ (ಉಡುಪಿ), ಮಿಮಿಕ್ರಿ ದಯಾನಂದ (ಮೈಸೂರು), ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ (ಮೈಸೂರು), ಲೆಫ್ಟಿನೆಂಟ್ ಜನರಲ್ ಕೊಡನ ಪೂವಯ್ಯ ಕಾರ್ಯಪ್ಪ (ಕೊಡಗು). ಮಾಧ್ಯಮ ದಿನೇಶ್ ಅಮೀನ್ ಮಟ್ಟು (ದ.ಕನ್ನಡ), ಜವರಪ್ಪ (ಮೈಸೂರು), ಮಾಯಾ ಶರ್ಮ (ಬೆಂಗಳೂರು), ರಫಿ ಭಂಡಾರಿ (ವಿಜಯಪುರ).

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಇಸ್ರೋ ಮುಖ್ಯಸ್ಥ ಎಸ್.ಸೋಮನಾಥನ್ ಶ್ರೀಧರ್ ಪನಿಕರ್ (ಬೆಂಗಳೂರು), ಪ್ರೊ. ಗೋಪಾಲನ್ ಜಗದೀಶ್ (ಚಾಮರಾಜನಗರ). ಹೊರನಾಡು–ಹೊರದೇಶ ಸೀತಾರಾಮ ಅಯ್ಯಂಗಾರ್, ದೀಪಕ್ ಶೆಟ್ಟಿ, ಶಶಿಕಿರಣ್ ಶೆಟ್ಟಿ, ಸ್ವಾತಂತ್ರ್ಯ ಹೋರಾಟಗಾರ ಪುಟ್ಟಸ್ವಾಮಿ ಗೌಡ (ರಾಮನಗರ).

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನವಾದ ಸಂಘ ಸಂಸ್ಥೆಗಳು: ಕರ್ನಾಟಕ ಸಂಘ (ಶಿವಮೊಗ್ಗ), ಬಿ.ಎನ್. ಶ್ರೀರಾಮ ಪುಸ್ತಕ ಪ್ರಕಾಶನ (ಮೈಸೂರು), ಮಿಥಿಕ್ ಸೊಸೈಟಿ (ಬೆಂಗಳೂರು), ಕರ್ನಾಟಕ ಸಾಹಿತ್ಯ ಸಂಘ (ಯಾದಗಿರಿ), ಮೌಲಾನಾ ಅಜಾದ್ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಾಂಸ್ಕೃತಿಕ ಸಂಘ, ದಾವಣಗೆರೆ, ಮುಸ್ಲೀಮ್ ಶಿಕ್ಷಣ ಸಂಸ್ಥೆಗಳ ಒಕ್ಕೂಟ ದಕ್ಷಿಣ ಕನ್ನಡ, ಸ್ನೇಹರಂಗ ಹವ್ಯಾಸಿ ಕಲಾಸಂಸ್ಥೆ, ಬಾಗಲಕೋಟೆ, ಚಿಣ್ಣರ ಬಿಂಬ, ಮುಂಬೈ, ಮಾರುತಿ ಜನಸೇವಾ ಸಂಘ, ದ.ಕನ್ನಡ, ವಿದ್ಯಾದಾನ ಸಮಿತಿ, ಗದಗ.

ಮೈಸೂರು ಮಿತ್ರ ಬುಧವಾರ 1 ನವೆಂಬರ್ 2023



ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸಂಸ್ಮರಣಾ ದಿನಾಚರಣೆ



ಶಾಸಕರು, ಗಣ್ಯರಿಂದ ಪುಷ್ಪ ನಮನ



ಮಡಿಕೇರಿ, ಅ.31– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸಂಸ್ಮರಣೆಯು ನಗರದ ಗುಡ್ಡೆಮನೆ ಅಪ್ಪಯ್ಯ ಗೌಡರ ಪ್ರತಿಮೆ ಬಳಿ ಮಂಗಳವಾರ ನಡೆಯಿತು.

ಮಡಿಕೇರಿ ಶಾಸಕ ಡಾ.ಮಂಥರ್ ಗೌಡ, ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಪಂ ಸಿಇಒ ವರ್ಣಿತ್ ನೇಗಿ, ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ, ನಿಕಟ ಪೂರ್ವ ಅಧ್ಯಕ್ಷ ಲಕ್ಷ್ಮೀನಾರಾಯಣ ಕಜೆಗದ್ದೆ, ಮಾಜಿ ಅಧ್ಯಕ್ಷ ಕೊಲ್ಯದ ಗಿರೀಶ್, ಸಮಾಜದ ಮುಖಂಡರು ಇತರರು ಪುಷ್ಪ ನಮನ ಸಲ್ಲಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಚೊಕ್ಕಾಡಿ ಪ್ರೇಮ ರಾಘವಯ್ಯ, ಕಡ್ಲೇರ ತುಳಸಿ ಮೋಹನ್, ಲಿಟ್ಲ್ ಫ್ಲವರ್ ಶಾಲೆಯ ಮುಖ್ಯಸ್ಥರಾದ ಸುನಿತಾ, ಭಾರತೀಯ ಸೇವಾದಳ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಗುಡ್ಡೆಮನೆ ಅಪ್ಪಯ್ಯಗೌಡರ ಕುರಿತು 'ನಮನ ಗೀತೆ' ಹಾಡಿದರು.

ಬಳಿಕ ಮಾತನಾಡಿದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಸದಾ ಸ್ಮರಿಸಬೇಕಿದೆ ಎಂದರು. ಭಾರತ ಸ್ವಾತಂತ್ರ್ಯಕ್ಕಾಗಿ ಅಮರ ವೀರರಾದ ಪ್ರತಿಯೊಬ್ಬರನ್ನು ಸ್ಮರಿಸುವುದು ಅತ್ಯಗತ್ಯ. ಆ ನಿಟ್ಟಿನಲ್ಲಿ ಗುಡ್ಡೆಮನೆ ಅಪ್ಪಯ್ಯ ಗೌಡರಂತಹ ವೀರರ ಸಂಸ್ಮರಣಾ ಕಾರ್ಯಕ್ರಮ ಮಹತ್ತರವಾಗಿದೆ ಎಂದು ವಿವರಿಸಿದರು.

ಗುಡ್ಡೆಮನೆ ಅಪ್ಪಯ್ಯ ಗೌಡರು ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಫಲ ನಾವೆಲ್ಲರೂ ಒಂದೆಡೆ ಸೇರಲು ಸಾಧ್ಯವಾಗಿದೆ. ಆ ನಿಟ್ಟಿನಲ್ಲಿ ಗುಡ್ಡೆ ಮನೆ ಅಪ್ಪಯ್ಯ ಗೌಡರ ಹೋರಾಟದ ದಾರಿಯನ್ನು ಸ್ಮರಿಸಿ ಮುನ್ನಡೆಯಬೇಕಿದೆ ಎಂದು ಹೇಳಿದರು.

ಮಡಿಕೇರಿ ಶಾಸಕ ಡಾ.ಮಂಥರ್‌ಗೌಡ ಮಾತನಾಡಿ, ಅ.31 ಇತಿಹಾಸದ ದಿನವಾಗಿದೆ. ಗುಡ್ಡೆಮನೆ ಅಪ್ಪಯ್ಯ ಗೌಡರು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದು, ಒಂದು ರೀತಿ ಹೆಮ್ಮೆ ಎನಿಸಿದರೆ, ಮತ್ತೊಂದು ರೀತಿ ಗಲ್ಲಿಗೇರಿಸಿದ ದಿನವನ್ನು ಸ್ಮರಿಸುವುದು ದುಃಖವಾಗುತ್ತದೆ ಎಂದು ಎಂದು ನುಡಿದರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗುಡ್ಡೆಮನೆ ಅಪ್ಪಯ್ಯ ಗೌಡ ಅವರ ವ್ಯಕ್ತಿಚಿತ್ರ ಕುರಿತು ಪಠ್ಯಪುಸ್ತಕದಲ್ಲಿ ಅಧ್ಯಯನವಾಗಬೇಕು. ಇತಿಹಾಸವನ್ನು ಎಂದೂ ಸಹ ತಿರುಚಬಾರದು ಎಂದು ಡಾ.ಮಂಥರ್‌ಗೌಡ ಅವರು ಇದೇ ಸಂದರ್ಭದಲ್ಲಿ ಹೇಳಿದರು.

ನಂತರ ನಗರದ ಕೋಟೆ ಸ್ಥಳದಲ್ಲಿ ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಗಲ್ಲಿಗೇರಿಸಿದ ಸ್ಥಳದಲ್ಲಿ ಗೌರವ ನಮನ ಸಲ್ಲಿಸಲಾಯಿತು. ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಚೊಕ್ಕಾಡಿ ಪ್ರೇಮ ರಾಘವಯ್ಯ ಮತ್ತು ತಂಡದವರು ಲಾವಣಿ ಗೀತೆ ಹಾಡಿ ಗಮನ ಸೆಳೆದರು. ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ ಮಾತನಾಡಿದರು. ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಲಕ್ಷ್ಮೀನಾರಾಯಣ ಕಜೆಗದ್ದೆ, ಕೊಲ್ಯದ ಗಿರೀಶ್, ಕೊಡಗು ಗೌಡ ಸಮಾಜದ ಅಧ್ಯಕ್ಷ ಪೇರಿಯನ ಜಯಾನಂದ, ಕೊಡಗು ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷ ಅಮೆ ದಮಯಂತಿ, ಸರ್ವೋದಯ ಸಮಿತಿ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ, ಡಿವೈಎಸ್‌ಪಿ ಜಗದೀಶ್, ತಹಶೀಲ್ದಾರ್ ಪ್ರವೀಣ್ ಕುಮಾರ್, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ಅಧ್ಯಕ್ಷ ಕಡ್ಲೇರ ತುಳಸಿ ಮೋಹನ್, ನಗರಸಭೆ ಮಾಜಿ ಅಧ್ಯಕ್ಷೆ ಕಾವೇರಮ್ಮ ಸೋಮಣ್ಣ, ನಗರಸಭೆ ಪೌರಾಯುಕ್ತ ವಿಜಯ್, ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷ ನವೀನ್ ಅಂಬೆಕಲ್ಲು, ಕೊಡಗು ಗೌಡ ಯುವ ವೇದಿಕೆಯ ಅಧ್ಯಕ್ಷ ಪಾಣತ್ತಲೆ ಜಗದೀಶ್, ಕೊಡಗು ಗೌಡ ವಿದ್ಯಾ ಸಂಘದ ಗೌರವ ಕಾರ್ಯದರ್ಶಿ ಪೇರಿಯನ ಉದಯ ಕುಮಾರ್, ಹಿರಿಯರಾದ ದಂಬೆಕೋಡಿ ಆನಂದ್, ಕುಶಾಲನಗರ ಗೌಡ ಸಮಾಜದ ಅಧ್ಯಕ್ಷ ಗಣಿಪ್ರಸಾದ್, ಸುಂಟಿಕೊಪ್ಪದ ಗುಡ್ಡೆಮನೆ ಹರೀಶ್, ಗುಡ್ಡೆಮನೆ ಮಣಿಕುಮಾರ್, ಕುಡೆಕಲ್ ಸಂತೋಷ್, ಭಾಗಮಂಡಲ, ಚೇರಂಬಾಣೆ, ಮರಗೋಡು, ಚೆಟ್ಟಳ್ಳಿ, ವಿರಾಜಪೇಟೆ, ಸುಂಟಿಕೊಪ್ಪ, ಮಕ್ಕಂದೂರು ಗೌಡ ಸಮಾಜಗಳ ಪ್ರತಿನಿಧಿ ಗಳು, ಅಧಿಕಾರಿಗಳು ಇತರರು ಇದ್ದರು. ರಿಜಿಸ್ಟ್ರಾರ್ ಚಿನ್ನಸ್ವಾಮಿ ಸ್ವಾಗತಿಸಿದರು. ಧನಂಜಯ ಅಗೋಲಿಕಜೆ ನಿರೂಪಿಸಿ, ವಂದಿಸಿದರು.

ಕೊಡಗಿನ ನಿವೃತ್ತ ಲೆಫ್ಟಿನೆಂಟ್ ಜನರಲ್ ಕೋದಂಡ ಪಿ. ಕಾರ್ಯಪ್ಪ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ



ಮಡಿಕೇರಿ, ಅ.31– ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಜನರಲ್ ಆಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿರುವ ಕೊಡಗಿನ ಮಾದಾಪುರ ಮೂಲದ ಅಧಿಕಾರಿ ಕೋದಂಡ ಪಿ.ಕಾರ್ಯಪ್ಪ (ಪರಮ ವಿಶಿಷ್ಟ ಸೇವಾ ಮೆಡಲ್) ಅವರು ರಾಜ್ಯ ಸರಕಾರದಿಂದ ನೀಡಲ್ಪಡುವ 'ರಾಜ್ಯೋತ್ಸವ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕೋದಂಡ ಪಿ.ಕಾರ್ಯಪ್ಪ ಅವರು ನಿವೃತ್ತಿಯ ಬಳಿಕ ಮುಂಬಯಿಯಲ್ಲಿ ನೆಲೆಸಿದ್ದಾರೆ.

ತಮ್ಮ ಸೇವಾ ನಿವೃತ್ತಿಗೂ ಮುನ್ನ 'ರಜಪೂತ್ ರೈಫಲ್ಸ್' ವಿಭಾಗದ ಮುಖ್ಯಸ್ಥರಾಗಿಯೂ ಕರ್ತವ್ಯ ನಿರ್ವಹಿಸಿದ್ದ ಲೆ.ಜ. ಕೆ.ಪಿ.ಕಾರ್ಯಪ್ಪ, ಭಾರತೀಯ ಸೇನೆಯ ಶಸ್ತ್ರಾಸ್ತ್ರ ವಿಭಾಗದ ಮುಖ್ಯಸ್ಥರಾಗಿ, ದೇಶದ ರಕ್ಷಣಾ ಪಡೆಗಳ ಮುಖ್ಯಸ್ಥರೂ ಆಗಿರುವ ರಾಷ್ಟ್ರಪತಿಗಳ ಪರ್ಸನಲ್ ಆಫೀಸರ್ ಆಗಿ, 'ಪ್ರಿನ್ಸಿಪಲ್ ಸ್ಟಾಫ್ ಆಫೀಸರ್ ಟು ಚೀಫ್ ಆಫ್ ಆರ್ಮಿ ಸ್ಟಾಫ್' ಹುದ್ದೆಗಳನ್ನು ಅಲಂಕರಿಸಿದ್ದರು.

ನ.5,ವಿಷ್ಣುಮೂರ್ತಿ ಕೋಲ

ಮಡಿಕೇರಿ, ಅ.31– ಶ್ರೀಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಪ್ರತೀ ವರ್ಷ ಸಂಪ್ರದಾಯದಂತೆ ನಡೆಸಿಕೊಂಡು ಬರುತ್ತಿರುವ "ವಿಷ್ಣುಮೂರ್ತಿ ಕೋಲ" (ಚಾಮುಂಡಿ)ವು ನ.5 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಆದ್ದರಿಂದ ಸಾರ್ವಜನಿಕ ಭಕ್ತಾದಿಗಳು "ವಿಷ್ಣುಮೂರ್ತಿ ಕೋಲ" ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ದೇವರ ಕೃಪೆಗೆ ಪಾತ್ರರಾಗುವಂತೆ ದೇವಾಲಯದ ಆಡಳಿತಾಧಿಕಾರಿಗಳ ಪರವಾಗಿ ಕಾರ್ಯನಿರ್ವಾಹಣಾಧಿಕಾರಿ ಚಂದ್ರಶೇಖರ್ ಅವರು ಕೋರಿದ್ದಾರೆ.

200ಕ್ಕೂ ಹೆಚ್ಚು ಕರಿಮೆಣಸು ಬಳ್ಳಿಗಳನ್ನು ಕಡಿದ ಕಿಡಿಗೇಡಿಗಳು

ಸಿದ್ದಾಪುರ, ಅ.31– ಕಾಡುಪ್ರಾಣಿಗಳ ಭಯದ ನಡುವೆ ಕೃಷಿ ಫಸಲುಗಳನ್ನು ಉಳಿಸಿಕೊಳ್ಳಲು ರೈತರು ಸಾಹಸಪಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪಾಲಿಬೆಟ್ಟದ ಕಾಫಿ ತೋಟವೊಂದರಲ್ಲಿ ಕಿಡಿಗೇಡಿಗಳ ಅಟ್ಟಹಾಸಕ್ಕೆ ಸುಮಾರು 200ಕ್ಕೂ ಹೆಚ್ಚು ಮೆಣಸು ಬಳ್ಳಿಗಳು ನಾಶವಾಗಿವೆ.



ಪಾಲಿಬೆಟ್ಟದ ಕೂತಂಡ ಚಂಗಪ್ಪನವರ ಕಾಫಿ ತೋಟದಲ್ಲಿ ಈ ಘಟನೆ ಸಂಭವಿಸಿದ್ದು, ಹಲವು ವರ್ಷಗಳಿಂದ ಕಾಫಿ ತೋಟದಲ್ಲಿ ಫಸಲಿನೊಂದಿಗೆ ಬೆಳೆದು ನಿಂತಿದ್ದ ಮೆಣಸು ಬಳ್ಳಿಗಳನ್ನು ಕಿಡಿಗೇಡಿಗಳು ಕಡಿದು ನಾಶಪಡಿಸಿದ್ದಾರೆ. ಕಿಡಿಗೇಡಿಗಳ ಕೃತ್ಯಕ್ಕೆ ಕೂತಂಡ ಚಂಗಪ್ಪ ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದು ಸೂಕ್ತ ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ಜಿಪಂ ಮಾಜಿ ಸದಸ್ಯ ಮೂಕೊಂಡ ವಿಜು ಸುಬ್ರಮಣಿ ಮಾತನಾಡಿ, ಕಿಡಿಗೇಡಿಗಳ ಕೃತ್ಯವನ್ನು ಖಂಡಿಸಿದ್ದಾರೆ. ವರ್ಷವಿಡೀ ಕಷ್ಟಪಟ್ಟು ಬೆಳೆದ 200 ಕ್ಕೂ ಹೆಚ್ಚು ಮೆಣಸು ಬಳ್ಳಿಗಳನ್ನು ಕಡಿದು ನಾಶಪಡಿಸಿರುವ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಬೇಕೆಂದು ಒತ್ತಾಯಿಸಿದ್ದಾರೆ.



ಮಡಿಕೇರಿಯಲ್ಲಿ ಮಣ್ಣು ಕುಸಿದು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು, ಶಾಸಕ ಡಾ. ಮಂಥರ್‌ಗೌಡ.

ಜೂಜಾಡುತ್ತಿದ್ದ 24 ಮಂದಿ ಬಂಧನ

ಹಣ, ದ್ವಿಚಕ್ರ ವಾಹನ, ಕಾರುಗಳು ವಶ

ಮಡಿಕೇರಿ, ಅ.31– ಶನಿವಾರಸಂತೆ ಪೊಲೀಸ್ ಠಾಣಾ ವ್ಯಾಪ್ತಿಯ ಹುಲಸೆ ಗ್ರಾಮದ ಕಲ್ಪತರು ರಿಕ್ರಿಯೇಷನ್ ಕ್ಲಬ್‌ನಲ್ಲಿ ನಗದನ್ನು ಪಣಕ್ಕಿಟ್ಟು ಜೂಜಾಡುತ್ತಿದ್ದ 24 ಮಂದಿಯನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಗಳು ಪಣಕ್ಕಿಟ್ಟಿದ್ದ 16,880 ರೂ. ನಗದು, ಆರೋಪಿಗಳು ಬಳಸಿದ್ದ 11 ದ್ವಿಚಕ್ರ ವಾಹನ ಮತ್ತು 2 ಕಾರುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಂಧಿತರು ಸೋಮವಾರಪೇಟೆ, ಶನಿವಾರಸಂತೆ, ಹಾಸನದ ಸಕಲೇಶಪುರ ಮತ್ತಿತರ ಊರುಗಳಿಗೆ ಸೇರಿದವರಾಗಿದ್ದಾರೆ.

ಬಂಧಿತ ಆರೋಪಿಗಳ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ. ಗಂಗಾಧರಪ್ಪ, ಡಿಸಿಆರ್‌ಬಿ ವೃತ್ತ ನಿರೀಕ್ಷಕ ಐ.ಪಿ. ಮೇದಪ್ಪ, ಮಡಿಕೇರಿ ನಗರ ಪೊಲೀಸ್ ಠಾಣೆಯ ಠಾಣಾಧಿಕಾರಿ ಲೋಕೇಶ್, ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಆರ್ಥಿಕ ಸಂಕಷ್ಟ ಮುಗಿಯಿತು, ಅಭಿವೃದ್ಧಿ ಕಾರ್ಯಗಳು ಆರಂಭ: ಪೊನ್ನಣ್ಣ

ಮಡಿಕೇರಿ, ಅ.31– ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳನ್ನು ಪೂರೈಸಲು ಸುಮಾರು 4 ತಿಂಗಳ ಕಾಲ ಆರ್ಥಿಕ ಹೊರೆಯಾಗಿತ್ತು. ಆದರೆ ಈಗ ಎಲ್ಲವೂ ಸರಿಯಾಗಿದ್ದು, ಅಭಿವೃದ್ಧಿ ಕಾರ್ಯಗಳು ಆರಂಭಗೊಳ್ಳಲಿವೆ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ಶಾಸಕ ಪೊನ್ನಣ್ಣ ತಿಳಿಸಿದ್ದಾರೆ.

ವಿವಿಧ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ತಯಾರಾಗುತ್ತಿದ್ದು, ಅನುದಾನ ಬಿಡುಗಡೆಯಾಗಲಿದೆ. ಕೊಡಗಿನಲ್ಲೂ ಅಭಿವೃದ್ಧಿ ಕಾರ್ಯಗಳು ವೇಗವನ್ನು ಪಡೆದುಕೊಳ್ಳಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಅವರು ವಿವರಿಸಿದರು.

ಲಂಚ ಕೇಳಿದರೆ ರೆಕಾರ್ಡ್ ಮಾಡಿಕೊಳ್ಳಿ: ಜಿಲ್ಲೆಯಲ್ಲಿ ಭ್ರಷ್ಟಾಚಾರ ಪ್ರಕರಣಗಳು ನಿಯಂತ್ರಣಕ್ಕೆ ಬಂದಿದೆ, ವಿರಾಜಪೇಟೆ ಕ್ಷೇತ್ರದಲ್ಲಿ ಲಂಚದ ಕುರಿತು ಯಾವುದೇ ದೂರುಗಳು ಕೇಳಿ ಬಂದಿಲ್ಲ. ಭ್ರಷ್ಟಾಚಾರ ನಿರ್ಮೂಲನೆ ಕೇವಲ ನನ್ನಿಂದ ಮಾತ್ರ ಸಾಧ್ಯವಿಲ್ಲ, ಜನರು ಕೂಡ ಜಾಗೃತರಾಗಬೇಕು. ಲಂಚ ಕೇಳಿದಾಕ್ಷಣ ನೀಡದೆ ಅದನ್ನು ಪ್ರತಿಭಟಿಸಬೇಕು, ಆಡಿಯೋ ರೆಕಾರ್ಡ್ ಅಥವಾ ವಿಡಿಯೋ ರೆಕಾರ್ಡ್ ಮಾಡಿಕೊಳ್ಳಬೇಕು. ಸೂಕ್ತ ಸಾಕ್ಷ್ಯ ಸಹಿತ ದೂರು ನೀಡಿದರೆ ನಾನು ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ ಎಂದು ತಿಳಿಸಿದರು.

ಜನರೇ ಕಮಲಕ್ಕೆ ಆಪರೇಷನ್ ಮಾಡಿದ್ದಾರೆ!: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಸಂಪೂರ್ಣ ಬಹುಮತವಿದೆ, ಆಪರೇಷನ್ ಕಮಲ ಮಾಡಲು ಸಾಧ್ಯವಿಲ್ಲ ಕಳೆದ ಚುನಾವಣೆಯಲ್ಲಿ ರಾಜ್ಯದ ಜನತೆಯೇ ಕಮಲಕ್ಕೆ ಆಪರೇಷನ್ ಮಾಡಿದ್ದಾರೆಂದ ಶಾಸಕರು, ಕಾಂಗ್ರೆಸ್ ಪೂರ್ಣ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದೆ ಎಂದರು.

ಗುಂಡ್ಲುಪೇಟೆಯಲ್ಲಿ ರಾಜೇಂದ್ರ ಶ್ರೀಗಳ ಜಯಂತಿ ಅದ್ದೂರಿ ಆಚರಣೆ



ಗುಂಡ್ಲುಪೇಟೆ, ಅ.31– ಪಟ್ಟಣದಲ್ಲಿ ರಾಜೇಂದ್ರ ಶ್ರೀಗಳ 108ನೇ ಜಯಂತಿ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ರಾಜೇಂದ್ರ ಶ್ರೀಗಳವರ ಭಾವಚಿತ್ರವನ್ನು ವಾದ್ಯ ಹಾಗೂ ಕಲಾ ಮೇಳದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ಪಟ್ಟಣದ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ನಡೆದ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಾ, ಜನಸೇವೆಗಾಗಿಯೇ ರಾಜೇಂದ್ರ ಶ್ರೀಗಳು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಜೆಎಸ್ಎಸ್ ಸಂಸ್ಥೆ ಬೆಳೆದು ಇಂದಿಗೂ ಅಕ್ಷರ, ಆರೋಗ್ಯ, ಶಿಕ್ಷಣ ದಂತ ದಾಸೋಹವನ್ನು ಎಲ್ಲಾ ವರ್ಗದ ಜನತೆಗೂ ನೀಡುವುದರೊಂದಿಗೆ ಶ್ರೀಗಳ ಆಶಯವನ್ನು ಈಡೇರಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಅಖಿಲ ಭಾರತ ವೀರ ಶೈವ ಮಹಾಸಭಾ ಉಪಾಧ್ಯಕ್ಷೆ ಡಾ.ಗೀತಾ ಮಹದೇವಪ್ರಸಾದ್, ಮಾಜಿ ಶಾಸಕ ನಿರಂಜನ್ ಕುಮಾರ್ ಸೇರಿದಂತೆ ವೀರಶೈವ ಸಮಾಜದ ಮುಖಂಡರು, ಯುವಕರು, ಶಿಕ್ಷಣ ಸಂಸ್ಥೆಯ ಸಿಬ್ಬಂದಿ ವರ್ಗದವರು ಮತ್ತು ಮಠದ ಭಕ್ತರು ಇದ್ದರು.

ಇಂದು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ

ಚಾಮರಾಜನಗರ, ಅ.31– ಜಿಲ್ಲಾಡಳಿತದ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ನ.1 ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 9 ಗಂಟೆಗೆ ಪಶು ಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಧ್ವಜಾರೋಹಣ ನೆರವೇರಿಸಿ, ರಾಜ್ಯೋತ್ಸವ ಸಂದೇಶ ನೀಡುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ವಿ. ಶ್ರೀನಿವಾಸ ಪ್ರಸಾದ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ, ಹೆಚ್.ಎಂ. ಗಣೇಶ್ ಪ್ರಸಾದ್, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ, ಮಧು ಜಿ. ಮಾದೇಗೌಡ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಚಾ.ನಗರ: ಪ್ರೊ. ಗೋಪಾಲನ್ ಜಗದೀಶ್, ಪ್ರೊ. ಸಿ.ನಾಗಣ್ಣಗೆ ರಾಜ್ಯೋತ್ಸವ ಪ್ರಶಸ್ತಿ

"ಪ್ರಶಸ್ತಿ ಬಂದಿದ್ದು ಬಹಳ ಸಂತೋಷ ತಂದಿದೆ. ಕರ್ನಾಟಕದ ಈ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ಲಭಿಸಿದ್ದು, ಇನ್ನೂ ಖುಷಿ ತರಿಸಿದೆ. ಸಾಹಿತ್ಯ ಬದುಕಬೇಕು. ಸಾಹಿತ್ಯ ಬದುಕಿದರೆ ಜನರು ಬದುಕಿದಂತೆ. – ಪ್ರೊ. ಸಿ.ನಾಗಣ್ಣ





"ರಾಜ್ಯೋತ್ಸವ ಪ್ರಶಸ್ತಿ ದೊರಕಿರುವುದು ನನ್ನ ಒಬ್ಬನ ಶಕ್ತಿಯಿಂದಲ್ಲ. ಇದರ ಹಿಂದೆ ಸಾವಿರಾರು ಜನರಿದ್ದಾರೆ. ಇದು ನನ್ನ ಒಬ್ಬನ ಸಾಧನೆ ಅಲ್ಲ. ಇಡೀ ಸಮಾಜದ ಸಾಧನೆ ಎಂದರೆ ತಪ್ಪಾಗಲಾರದು. – ಪ್ರೊ. ಗೋಪಾಲನ್ ಜಗದೀಶ್.

ಚಾಮರಾಜನಗರ, ಅ.31– ರಾಜ್ಯ ಸರ್ಕಾರ 2023ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಯನ್ನು ಮಂಗಳವಾರ ಪ್ರಕಟಿಸಿದ್ದು, ಚಾಮರಾಜನಗರ ಜಿಲ್ಲೆಯ ಇಬ್ಬರು ಸಾಧಕರಿಗೆ ಪ್ರಶಸ್ತಿ ಲಭಿಸಿದೆ.

ಗುಂಡ್ಲುಪೇಟೆ ತಾಲೂಕಿನವರಾದ ಪ್ರೊ. ಸಿ.ನಾಗಣ್ಣ ಅವರಿಗೆ ಸಾಹಿತ್ಯ ಕ್ಷೇತ್ರದಿಂದ, ಕೊಳ್ಳೇಗಾಲ ಮೂಲದ ಪ್ರೊ. ಗೋಪಾಲನ್ ಜಗದೀಶ್ ಅವರಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಿಂದ ಪ್ರಶಸ್ತಿ ದೊರೆತಿದೆ. ಇವರಿಬ್ಬರು ಸಾಧಕರಿಗೆ ಪ್ರಶಸ್ತಿ ಲಭಿಸಿರುವುದು ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದೆ.

ಪ್ರೊ. ಸಿ.ನಾಗಣ್ಣ: ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ ಪ್ರೊ. ಸಿ.ನಾಗಣ್ಣ ಅವರು ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮದವರು. ಪ್ರಸ್ತುತ ಮೈಸೂರಿನಲ್ಲಿ ವಾಸವಾಗಿರುವ ಅವರು, ಮೈಸೂರು ವಿಶ್ವವಿದ್ಯಾಲಯ ಮಾನಸಗಂಗೋತ್ರಿಯ ಕುವೆಂಪು ಅಧ್ಯಯನ ಸಂಸ್ಥೆಯ ತೌಲನಿಕ ಸಾಹಿತ್ಯ ಹಾಗೂ ಭಾಷಾಂತರ ಅಧ್ಯಯನ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಾಹಿತಿ, ಅನುವಾದಕ ಹಾಗೂ ವಿಮರ್ಶಕರಾಗಿರುವ ಪ್ರೊ. ಸಿ.ನಾಗಣ್ಣ ಇಂಗ್ಲೀಷ್ ಪ್ರಾಧ್ಯಾಪಕರಾಗಿ 35 ವರ್ಷಗಳು ಸೇವೆ ಸಲ್ಲಿಸಿದ್ದಾರೆ. 11 ಕೃತಿಗಳನ್ನು ಬರೆದಿದ್ದಾರೆ. 28 ಕೃತಿಗಳನ್ನು ಅನುವಾದಿಸಿದ್ದಾರೆ. 9 ಕೃತಿಗಳನ್ನು ಸಂಪಾದಿಸಿದ್ದಾರೆ.

ಪ್ರೊ. ಗೋಪಾಲನ್ ಜಗದೀಶ್: ಕೊಳ್ಳೇಗಾಲದವರಾದ ಪ್ರೊ. ಗೋಪಾಲನ್ ಜಗದೀಶ್ ಅವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಪ್ರಸ್ತುತ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ 25 ವರ್ಷಗಳಿಂದ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ದಿ.ಇಂದಿರಾ ಗಾಂಧಿ ಪುಣ್ಯಸ್ಮರಣೆ, ಸರ್ದಾರ್ ವಲ್ಲಭಬಾಯ್ ಪಟೇಲ್ ಜನ್ಮದಿನ ಆಚರಣೆ



ಚಾಮರಾಜನಗರ, ಅ.31– ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ 148 ನೇ ಜನ್ಮ ದಿನಾಚರಣೆ ಹಾಗೂ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ 39 ನೇ ಪುಣ್ಯಸ್ಮರಣೆ ಕಾರ್ಯಕ್ರಮ ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಮಂಗಳವಾರ ನಡೆಯಿತು.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಮತ್ತು ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಭಾರತದ ಪ್ರಧಾನಿಯಾಗಿದ್ದ ಇಂದಿರಾಗಾಂಧಿ ಅವರು ಕಾಂಗ್ರೆಸ್ ಪಕ್ಷವನ್ನು ಸಮರ್ಥವಾಗಿ ಕಟ್ಟುವ ಕೆಲಸ ಮಾಡಿದರು. ದೇಶದ ಜನರ ಕಲ್ಯಾಣಕ್ಕಾಗಿ ಜಾರಿಗೆ ತಂದ ಗರೀಬಿ ಹಟಾವೋ, ಭೂ ಸುಧಾರಣೆ, ಆಹಾರ ಭದ್ರತೆಯಂತಹ 20 ಅಂಶದ ಕಾರ್ಯಕ್ರಮಗಳು ಇಂದಿಗೂ ಜನಪ್ರಿಯವಾಗಿವೆ. ಅವರ ಹಾದಿಯಲ್ಲಿ ಇಂದು ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನಖರ್ಗೆ ಅವರು ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸುತ್ತಿದ್ದಾರೆ ಎಂದರು.


ಕ್ರಿಯಾಶೀಲ ಪ್ರಧಾನಿಯಾಗಿದ್ದ ಇಂದಿರಾ ಅವರನ್ನು ಅವರ ಅಂಗರಕ್ಷಕರೇ ಹತ್ಯೆಗೈದದ್ದು ದುರಂತದ ಸಂಗತಿಯಾಗಿದೆ ಎಂದು ವಿಷಾದಿಸಿದ ಅವರು, ಇಂದಿರಾಗಾಂಧಿ ಅವರಂತೆ ವಲ್ಲಭಬಾಯ್ ಪಟೇಲರು ಉಕ್ಕಿನ ಮನುಷ್ಯ ಎಂದೇ ಪ್ರಸಿದ್ಧಿಯಾಗಿದ್ದರು. ಸ್ವಾತಂತ್ರ್ಯ ನಂತರ ಹಲವಾರು ಕಡೆ ಹರಿದುಹಂಚಿಹೋಗಿದ್ದ ನಾನಾಭಾಗಗಳನ್ನು ಒಟ್ಟುಗೂಡಿಸಿದರು ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಅಖಂಡ ಭಾರತ ನಿರ್ಮಾಣ ಮಾಡಿದ ಸರ್ದಾರ್ ವಲ್ಲಭಬಾಯ್ ಪಟೇಲ್ ಹಾಗೂ ಮಾಜಿ ಪ್ರಧಾನಿ ದಿ.ಇಂದಿರಾ ಗಾಂಧಿ ಅವರು ದೇಶಕ್ಕೆ ನೀಡಿದ ಜನಪರ ಕಾರ್ಯಕ್ರಮಗಳನ್ನು ಸ್ಮರಣೆ ಮಾಡುವ ಅಗತ್ಯವಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಲತಾರಾಜಶೇಖರ್‌ಜತ್ತಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ, ಆರ್. ಮಹದೇವ್, ನಗರಸಭಾ ಸದಸ್ಯರಾದ ಚಿನ್ನಮ್ಮ, ಕಲಾವತಿ, ನೀಲಮ್ಮ, ಭಾಗ್ಯಮ್ಮ, ನಾಗರತ್ನ, ಜಿಪಂ ಮಾಜಿ ಸದಸ್ಯ ರಮೇಶ್, ಜಿಲ್ಲಾ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಸೋಮೇಶ್ವರ್, ಸಿ.ಕೆ. ಮಂಜುನಾಥ್, ನಸುಲ್ಲಾಖಾನ್, ನಾಗಯ್ಯ ನಾಗವಳ್ಳಿ, ಸೇವಾದಳದ ಜಿಲ್ಲಾ ಅಧ್ಯಕ್ಷ ಜಯರಾಜ್, ತಾಲೂಕು ಉಪಾಧ್ಯಕ್ಷ ಎಂ.ಸಿ.ನಾಗರಾಜು, ಆಯೂಬ್ ಖಾನ್, ಮರಿಯಾಲದಹುಂಡಿ ಕುಮಾರ್, ಶಿವಕುಮಾರ್ ರಾಮಸಮುದ್ರ, ಎಪಿಎಂಸಿ ಸದಸ್ಯ ಸೋಮೇಶ್, ಅಲ್ಪಸಂಖ್ಯಾತ ಬ್ಲಾಕ್ ಅಧ್ಯಕ್ಷ ಸೈಯದ್‌ಅಹ್ಮದ್, ಸಯ್ಯದ್ ಮೊಹದ್ದೀನಿ, ನಗರಸಭಾ ಮಾಜಿ ಸದಸ್ಯ ಚಂಗುಮಣಿ, ಸೇವಾದಳದ ಸದಸ್ಯ ಕಲೀಮ್, ನಂಜದೇವರು, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಮೋಹನ್, ಅಕ್ಷಯ್ ಹಾಜರಿದ್ದರು.

ಮಹಾತ್ಮ ಗಾಂಧೀಜಿಯವರ ಜೀವನವೇ ಒಂದು ಸಂದೇಶ

ಚಾಮರಾಜನಗರ, ಅ.31–ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜೀವನವೇ ಒಂದು ಸಂದೇಶವಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾಹುಡೇದ ಅಭಿಪ್ರಾಯಪಟ್ಟರು.



ನಗರದ ಕನ್ನಡ ಸಾಹಿತ್ಯ ಪರಿಷತ್ತು ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ವಿಶ್ವಮಹಾನ್ ನಾಯಕ, ಅಹಿಂಸಾವಾದಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿರವರ ನುಡಿನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅವರು ಸರಳ ಜೀವನ ಮೈಗೂಡಿಸಿಕೊಂಡ ಇಡೀ ಜೀವನವನ್ನೇ ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿದ ಮಹಾತ್ಮರು. ಮಹಾತ್ಮ ಗಾಂಧೀಜಿಯವರು ಜೀವನದಲ್ಲಿ ಸುಳ್ಳನ್ನು ಆಡಬಾರದು, ಯಾವುದೇ ರೀತಿ ಹಿಂಸೆಯನ್ನು ಮಾಡಬಾರದು ಎಂದು ಹೇಳಿದ್ದರು ಎಂದರು.

ಇಡೀ ವಿಶ್ವದ ಎಲ್ಲ ಕ್ರಾಂತಿಗಳನ್ನು ನೋಡಿದಾಗ ರಕ್ತಸಿಕ್ತ ಇತಿಹಾಸ ಇದೆ ಆದರೆ ನಮ್ಮ ದೇಶದ ಸ್ವಾತಂತ್ರ್ಯದ ಇತಿಹಾಸವನ್ನು ನೋಡಿದಾಗ ಅಹಿಂಸಾ ತತ್ವದ ಮೂಲಕ ಸ್ವಾತಂತ್ರ್ಯವನ್ನು ಪಡೆಯಬಹುದು ಎಂಬುದನ್ನು ಎತ್ತಿ ತೋರಿಸುತ್ತದೆ. ಸತ್ಯ, ಅಹಿಂಸೆ, ಶಾಂತಿ ಮೊದಲಾದ ತತ್ವಗಳನ್ನು ನೀಡಿ ಉತ್ತಮ ಬದುಕಿನ ದಾರಿ ತೋರಿದ ವಿಶ್ವ ಶಾಂತಿದೂತರಾದ ಮಹಾತ್ಮ ಗಾಂಧೀಜಿಯವರ ತತ್ವ, ಆದರ್ಶಗಳನ್ನು ನಿತ್ಯಜೀವನದಲ್ಲಿ ಪಾಲಿಸಿದರೆ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದರು.

ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಶಾ.ಮುರಳಿ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ಸಾವರ್ಕರ್ ಹಾಗೂ ಸ್ವಾತಂತ್ರ್ಯ ಹೋರಾಟಗಾರರನ್ನು ನಿಂದಿಸುವ ವ್ಯಕ್ತಿಗಳ ವಿರುದ್ಧ ಗೂಂಡಾ ಕಾಯ್ದೆ, ರಾಷ್ಟ್ರದ್ರೋಹ ಕಾಯ್ದೆ ಪ್ರಕರಣ ದಾಖಲಿಸಿ, ಜೈಲಿಗೆ ಕಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಒತ್ತಾಯಿಸಿದರು. ಡಾ.ಮಾರುತಿ, ನಗರಸಭಾ ಕಂದಾಯಾಧಿಕಾರಿ ಶರವಣ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪೌರಾಯುಕ್ತ ರಾಮದಾಸ್, ಕಸಾಪ ಜಿಲ್ಲಾಧ್ಯಕ್ಷ ಶೈಲೇಂದ್ರ ಕುಮಾರ್, ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿದರು. ನಗರಸಭಾ ಮಾಜಿ ಸದಸ್ಯ ಗಣೇಶ್ ದೀಕ್ಷಿತ್, ಪಣ್ಯದ ಹುಂಡಿ ರಾಜು, ನಿಜಧ್ವನಿ ಗೋವಿಂದ ರಾಜ್, ಮಹೇಶ್‌ಗೌಡ, ಕೆ.ಎಂ. ನಾಗರಾಜು, ಸುರೇಶ್‌ಗೌಡ ಇತರರಿದ್ದರು.

ಮುಂದುವರೆದ ಕಾವೇರಿ ಪ್ರತಿಭಟನೆ



ಚಾಮರಾಜನಗರ, ಅ.31– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಕಳೆದ 49 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು ಇಂದು ಕೂಡ ಬಾಯಿ ಮುಚ್ಚಿಕೊಂಡು ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಾಯಿ ಮುಚ್ಚಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಶಾ. ಮುರಳಿ, ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದರಾಜು, ಚಾ.ವೆಂ. ರಾಜ್‌ಗೋಪಾಲ್, ಸೋಮವಾರಪೇಟೆ ಮಂಜು, ನಂಜುಂಡಸ್ವಾಮಿ, ಚಾ.ಹ. ರಾಮು, ಮಹೇಶ್‌ಗೌಡ, ವೀರಭದ್ರ ತಾಂಡವಮೂರ್ತಿ, ಲಿಂಗರಾಜು, ರಾಜಪ್ಪ, ಮೂಡ್ಲುಪುರ ಪ್ರಕಾಶ್ ಇತರರು ಹಾಜರಿದ್ದರು.

ಕನ್ನಡ ಭಾಷೆ ಉಳಿಸಿ-ಬೆಳೆಸಲು ಎಲ್ಲರೂ ಸ್ವಯಂ ಸೇವಕರಂತೆ ಶ್ರಮಿಸಬೇಕಿದೆ

●'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಸಲಹೆ ●ಕನ್ನಡಪರ ಹೋರಾಟಗಾರರಿಂದಲೇ ಕನ್ನಡ ಗಟ್ಟಿಗೊಳ್ಳುತ್ತಿದೆ

ಮೈಸೂರು, ಅ.31(ಎಂಟಿವೈ)- ಕನ್ನಡ ಭಾಷೆ ಉಳಿಸಿ ಬೆಳೆಸುವುದಕ್ಕಾಗಿ ಎಲ್ಲರೂ ಸ್ವಯಂ ಸೇವಕರಂತೆ ಶ್ರಮಿಸಬೇಕು ಎಂದು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಸಲಹೆ ನೀಡಿದ್ದಾರೆ.

ಮೈಸೂರಿನ ಅಗ್ರಹಾರದ ಶಂಕರಮಠ ರಸ್ತೆಯಲ್ಲಿರುವ ನಟರಾಜ ಕಲ್ಯಾಣ ಮಂಟಪದಲ್ಲಿ ಮಂಗಳವಾರ ನಡೆದ ಕನ್ನಡ ಬೆಳಕು ವಾರಪತ್ರಿಕೆಯ 30ನೇ ವಾರ್ಷಿಕೋತ್ಸವ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕೆಲವು ಹೋರಾಟಗಾರರು ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸಲು ಕನ್ನಡ ಸೇವಕರಂತೆ ಕೆಲಸ ಮಾಡುತ್ತಿರುವುದರಿಂದಲೇ ಕನ್ನಡ ಭಾಷೆ ಗಟ್ಟಿಗೊಳ್ಳುತ್ತಿದೆ. ಬೆಂಗಳೂರಲ್ಲಿ ಅನ್ಯ ಭಾಷೆ ಮಾತನಾಡುವವರ ಸಂಖ್ಯೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಬೆಂಗಳೂರಲ್ಲಿ ಕನ್ನಡ ಚಳುವಳಿಗಾರ ವಾಟಾಳ್ ನಾಗರಾಜ್ ಅವರು ಕನ್ನಡ ಉಳಿವಿಗೆ ಶ್ರಮಿಸುತ್ತಿದ್ದಾರೆ ಎಂದರು.

ನಾನು ಮೈಸೂರಲ್ಲಿ 5 ದಶಕಗಳಿಗೂ ಅಧಿಕ ಕಾಲದಿಂದ ನೆಲೆಸಿದ್ದೇನೆ. ನಮ್ಮ ತಂದೆ-ತಾಯಿಯವರು ಇಲ್ಲಿಯೇ ನೆಲೆಸಿದ್ದರು. ಅದಕ್ಕಾಗಿ ಮೈಸೂರು ನನಗೆ ಜನ್ಮಭೂಮಿ, ಕರ್ಮಭೂಮಿ, ಪುಣ್ಯಭೂಮಿ, ಧರ್ಮಭೂಮಿಯಾಗಿದೆ. ನನಗೆ ಇಂದು ದೇವರು ಏನೆಲ್ಲಾ ಕೊಟ್ಟಿದೆಯೋ ಅದನ್ನು ಮೈಸೂರಿನ ಜನ ಕೊಟ್ಟಿದ್ದಾರೆ ಎಂದು ತಿಳಿಯುತ್ತೇನೆ. ನಾನು ಮಾಡಿದ ಕೆಲಸ, ನಾವು ನಡೆದುಕೊಂಡ ರೀತಿಯನ್ನು ಜನ ಮೆಚ್ಚಿದ್ದರಿಂದ ಇಂದು ಗೌರವ, ಸನ್ಮಾನ ಸಿಗುತ್ತಿದೆ ಎಂದು ತಿಳಿಸಿದರು.



ಮೈಸೂರಿನ ನಟರಾಜ ಕಲ್ಯಾಣಮಂಟಪದಲ್ಲಿ ಮಂಗಳವಾರ ನಡೆದ ಕನ್ನಡ ಬೆಳಕು ವಾರಪತ್ರಿಕೆಯ 30ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮೈಸೂರು ವಿವಿಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ನಿವೃತ್ತ ಅಧಿಕಾರಿ ಹೆಚ್.ಕೆ.ಮಹೇಶ್ವರಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಯಳವರಹುಂಡಿ ಸಿದ್ದಪ್ಪ, ಮೈಸೂರು ಛೇಂಬರ್ ಆಫ್ ಕಾಮರ್ಸ್ ಪ್ರೆಸಿಡೆಂಟ್ ಕೆ.ಬಿ.ಲಿಂಗರಾಜು, ನಾಗೇಶ್ ಹಾಗೂ ಹೋಟೆಲ್ ಉದ್ಯಮಿ ಸಂಜೀವ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಕನ್ನಡ ಬೆಳಕು ವಾರ ಪತ್ರಿಕೆಯ ಸಂಪಾದಕ ಮೂಗೂರು ನಂಜುಂಡಸ್ವಾಮಿ, ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಹೊಸಮಠದ ಆಡಳಿತಾಧಿಕಾರಿ ಡಾ.ಎಸ್.ಶಿವರಾಜಪ್ಪ ಹಾಗೂ ಇನ್ನಿತರರನ್ನು ಕಾಣಬಹುದು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಕನ್ನಡಿಗರು ಅನ್ಯ ಭಾಷಿಗರಿಗೆ ಅನುಗುಣವಾಗಿ ವರ್ತಿಸುವುದರಲ್ಲಿ ಮುಂದೆ ಇದ್ದಾರೆ. ನಮ್ಮತನವನ್ನು ಬಿಟ್ಟುಕೊಡಬಾರದು. ಹಾಗೆಯೇ ನಮ್ಮ ಮಾತೃಭಾಷೆಯನ್ನೂ ಕಡೆಗಣಿಸಬಾರದು. ಜೀವನಕ್ಕಾಗಿ ಅನ್ಯ ಭಾಷೆಯನ್ನು ಕಲಿಯುವ ಅಗತ್ಯವಿದೆ. ಕನ್ನಡ ಜೀವವಾದರೆ, ಅನ್ಯಭಾಷೆಗಳು ಜೀವನವಾಗಬೇಕು ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಪತ್ರಿಕೆಗಳು ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಸೇವೆ ಸಲ್ಲಿಸುತ್ತಿವೆ. ಸಮಾಜದ ಕಣ್ತೆರೆಸುವುದರೊಂದಿಗೆ ಆಡಳಿತ ವ್ಯವಸ್ಥೆ ಹಳಿ ತಪ್ಪಿದಾಗ ಎಚ್ಚರಿಸುತ್ತವೆ. ಇದರೊಂದಿಗೆ ಕನ್ನಡ ಪತ್ರಿಕೆಗಳು ನಮ್ಮ ಸಂಸ್ಕೃತಿ, ಭಾಷೆಯನ್ನು ಗಟ್ಟಿಗೊಳಿಸುತ್ತಿವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ, ನಿವೃತ್ತ ಅಧಿಕಾರಿ ಹೆಚ್.ಕೆ.ಮಹೇಶ್ವರಪ್ಪ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಯಳವರಹುಂಡಿ ಸಿದ್ದಪ್ಪ, ಮೈಸೂರು ಛೇಂಬರ್ ಆಫ್ ಕಾಮರ್ಸ್ ಪ್ರೆಸಿಡೆಂಟ್ ಕೆ.ಬಿ.ಲಿಂಗರಾಜು, ನಾಗೇಶ್ ಹಾಗೂ ಹೋಟೆಲ್ ಉದ್ಯಮಿ ಸಂಜೀವ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಬೆಳಕು ವಾರಪತ್ರಿಕೆಯ ಸಂಪಾದಕ ಮೂಗೂರು ನಂಜುಂಡಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಹೊಸಮಠದ ಆಡಳಿತಾಧಿಕಾರಿ ಡಾ.ಎಸ್.ಶಿವರಾಜಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ನಾನು ಈ ಹಿಂದೆ ಬಾಂಬೆಯಲ್ಲಿದ್ದಾಗ ಬಾಳಸಾಹೇಬ್ ಠಾಕ್ರೆ ಅವರ ಹೋರಾಟವನ್ನು ಗಮನಿಸಿದ್ದೆ. 1966ರಲ್ಲಿ ಬಾಳಠಾಕ್ರೆ ಆರಂಭಿಸಿದ ಚಳುವಳಿ ಇಂದು ಯಾವ ಮಟ್ಟಕ್ಕೆ ಬೆಳೆದಿದೆ ಎಂದು ಎಲ್ಲರಿಗೂ ಗೊತ್ತಿದೆ. ಮರಾಠಿ ಭಾಷೆ, ಚಳುವಳಿ, ಸಂಸ್ಕೃತಿ ಬಾಂಬೆಯಂತಹ ನಗರದಲ್ಲಿ ಶಕ್ತಿಯಾಗಿ ಉಳಿದುಕೊಳ್ಳಬೇಕಾದರೆ, ಬಾಳಸಾಹೇಬ್ ಠಾಕ್ರೆ ಕೊಡುಗೆಯೇ ಕಾರಣ. ಅದೇ ಮಾದರಿಯಲ್ಲಿ ವಾಟಾಳ್ ನಾಗರಾಜ್ ಹಾಗೂ ಮುಗೂರು ನಂಜುಂಡಸ್ವಾಮಿಯವರಂತ ಅನೇಕರು ಕನ್ನಡದ ಸೇವಕರಾಗಿ ಶ್ರಮಿಸುತ್ತಿದ್ದಾರೆ. ಇಂತಹ ಹೋರಾಟಗಾರರು ಕನ್ನಡದ ಕೆಲಸಕ್ಕಾಗಿ ಮಾಡಿದ ಕೆಲಸ ಮೆಚ್ಚುವಂತಹದ್ದು ಎಂದು ಅಭಿಪ್ರಾಯಪಟ್ಟರು.
>
> - ಡಾ.ಕೆ.ಬಿ.ಗಣಪತಿ, ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರು

ಮೂರನೇ ಪುಟದಿಂದ

ಕೇರಳ ಮೂಲದ ಇಬ್ಬರ ಬಂಧನ

217 ಗ್ರಾಂ ಎಂಡಿಎಂಎ ಮಾದಕ ವಸ್ತು ಹಾಗೂ ಕೃತ್ಯಕ್ಕೆ ಬಳಸಿದ್ದ ಎರಡು ಮೊಬೈಲ್ ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಸೆನ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದರು.

ಗಾಂಜಾ ಸಾಗಾಟ: ಮತ್ತೊಂದು ಪ್ರಕರಣದಲ್ಲಿ ಮೇಟಗಳ್ಳಿಯ ಬೆಲವತ್ತ ರಿಂಗ್ ರಸ್ತೆಯಲ್ಲಿ ಗಾಂಜಾ ಸಾಗಿಸುತ್ತಿದ್ದ ಒಬ್ಬ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ಮಾಡಲಾಯಿತು. ಆತ ಗಾಂಜಾ ಮಾರಾಟ ಮಾಡಲು ಸಾಗಾಟ ಮಾಡುತ್ತಿರುವುದು ವಿಚಾರಣೆ ವೇಳೆ ತಿಳಿದು ಬಂದಿತು. ಆರೋಪಿಯಿಂದ 8 ಲಕ್ಷ ರೂಪಾಯಿ ಮೌಲ್ಯದ 15 ಕೆ.ಜಿ.ತೂಕದ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಮೇಶ್ ತಿಳಿಸಿದರು.

ಡಿಸಿಪಿ ಎಸ್. ಜಾಹ್ನವಿ ಮಾರ್ಗದರ್ಶನದಲ್ಲಿ ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್ ಕುಮಾರ್ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಶೇಖರ್ ಜಿ, ಪುಟ್ಟಯ್ಯ ಕೆ.ಸಿ., ಪಿಎಸ್‌ಐಗಳಾದ ಮಾರುತಿ ಅಂತರಗಟ್ಟಿ, ಪ್ರತಿಭಾ ಜಂಗವಾಡ, ರಾಜು ಕೋನಕೇರಿ, ಕಿರಣ್ ಹಂಪಿಹೊಳಿ, ಎಎಸ್‌ಐಗಳಾದ ನಾಗೇಶ್, ಅಸ್ಗರ್ ಖಾನ್, ಜಗದೀಶ್, ಸಿಬ್ಬಂದಿಗಳಾದ ಸಲೀಂ ಪಾಷ, ರಾಮಸ್ವಾಮಿ, ಉಮಾ ಮಹೇಶ್, ಟಿ.ಪ್ರಕಾಶ್, ನರಸಿಂಹರಾಜು, ಗೋವಿಂದ, ಚಂದ್ರಶೇಖರ್, ರವಿ ಕೆ.ಎಸ್, ಅನಿಲ್, ಮಂಜುನಾಥ್, ಮಧುಕುಮಾರ್, ರಘು, ಅರುಣ್ ಕುಮಾರ್, ಪುಟ್ಟಮ್ಮ ಕೆ, ಮಮತ ಹಾಗೂ ಶ್ರೀನಿವಾಸ್ ಪತ್ತೆ ಕಾರ್ಯದಲ್ಲಿ ಭಾಗಿಯಾಗಿದ್ದರು ಎಂದು ರಮೇಶ್ ಮಾಹಿತಿ ನೀಡಿದರು.

ಪ್ರಾಣಕ್ಕೆ ಕುತ್ತು ತರುವ ಎಂಡಿಎಂಎ

ಸಾಧ್ಯತೆ ಇರುತ್ತದೆ. ಆದ ಕಾರಣ ಮಾದಕ ವ್ಯಸನಿಗಳು ಎಂಡಿಎಂಎ ಡ್ರಗ್ಸ್ ಅನ್ನು ಕೈಗೆ ಹಾಕಿಕೊಂಡು ಮೂಸುತ್ತಾರೆ. ಇದರ ಸೇವನೆಯಲ್ಲಿ ಸ್ವಲ್ಪ ಏರುಪೇರಾದರೂ ಪ್ರಾಣಕ್ಕೆ ಕುತ್ತು ಬರುತ್ತದೆ. ಇಂತಹ ಅಪಾಯಕಾರಿ ಮಾದಕ ವಸ್ತು ಮಾರಾಟ ಜಾಲವನ್ನು ಮೈಸೂರು ಪೊಲೀಸರು ಭೇದಿಸಿದ್ದಾರೆ. ಡ್ರಗ್ ಪೆಡ್ಲರ್‌ಗಳು ಮಾದಕ ವಸ್ತುಗಳ ಮಾರಾಟಕ್ಕೆ ಶಾಲಾ-ಕಾಲೇಜುಗಳನ್ನು ಟಾರ್ಗೆಟ್ ಮಾಡಿಕೊಂಡಿರುತ್ತಾರೆ. ಈ ಹಿನ್ನೆಲೆ ಇಲ್ಲಿನ ನಮ್ಮ ಪೊಲೀಸರು ಗಸ್ತು ತಿರುಗುತ್ತಿರುತ್ತಾರೆ. ಮಫ್ತಿಯಲ್ಲಿರುವ ಪೊಲೀಸರು ಸುತ್ತಲಿನ ಚಲನವಲನಗಳನ್ನು ಗಮನಿಸುತ್ತಾರೆ. ಈ ಮೂಲಕ ಮಾದಕ ವಸ್ತುಗಳ ಮಾರಾಟ ಮಾಡದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದು ರಮೇಶ್ ತಿಳಿಸಿದರು.

ಭೂ ಕುಸಿತ; ಮೂವರು ಸಾವು

ಆಗಮಿಸಿ, ರಕ್ಷಣಾ ಕಾರ್ಯಾಚರಣೆ ನಡೆಯಿತು. ಜಿಲ್ಲಾಧಿಕಾರಿ ವೆಂಕಟ್ ರಾಜಾ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಮಡಿಕೇರಿ ಶಾಸಕ ಡಾ.ಮಂಥರ್‌ಗೌಡ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಘಟನಾ ವಿವರ: ಪಟ್ಟಣದ ರೆಡ್‌ಕ್ರಾಸ್ ಕಟ್ಟಡದ ಹಿಂಭಾಗದಲ್ಲಿ ಪ್ರತಿಷ್ಠ್ ಎಂಬುವರು ಕಟ್ಟಡವನ್ನು ನಿರ್ಮಿಸಲು ಪಿಲ್ಲರ್ ಕಾಮಗಾರಿ ಮುಗಿಸಿದ್ದು, ಕಟ್ಟಡದ ಸುತ್ತ ಕಾಂಪೌಂಡ್ ನಿರ್ಮಿಸಲು ಅಡಿಪಾಯ ತೆಗೆಯುತ್ತಿದ್ದಾಗ ಎತ್ತರದ ಗುಡ್ಡದಿಂದ ಬರೆ ಭೂ ಕುಸಿತ ಉಂಟಾಗಿದೆ. ಹುಬ್ಬಳ್ಳಿ ಮತ್ತು ಚಿತ್ರದುರ್ಗ ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ಒಟ್ಟು 9 ಮಂದಿ ಕಾರ್ಮಿಕರು ಗುತ್ತಿಗೆದಾರ ಅವರ ನೇತೃತ್ವದಲ್ಲಿ ಕಟ್ಟಡದ ಮಣ್ಣು ಕೆಲಸಕ್ಕೆಂದು ಮಡಿಕೇರಿಗೆ ಆಗಮಿಸಿದ್ದರು. ಮಂಗಳವಾರ ಸಂಜೆ 5.45 ಗಂಟೆಗೆ ಎಂದಿನಂತೆ ಸ್ಥಳದಲ್ಲಿ ಪಾಯ ತೆಗೆಯುತ್ತಿದ್ದ ಸಂದರ್ಭದಲ್ಲಿ ಸುಮಾರು 15 ಅಡಿಗೂ ಎತ್ತರದಿಂದ ಭೂ ಕುಸಿತ ಉಂಟಾಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಮೇಲೆ ಬಿದ್ದಿದೆ. ಇದರಿಂದ ಮಣ್ಣಿನಡಿ ಸಿಲುಕಿ 3 ಮಂದಿ ಸಾವನ್ನಪ್ಪಿದ್ದಾರೆ. ಈ ಸಂದರ್ಭ ಮಣ್ಣಿನಡಿ ಸಿಲುಕಿದ್ದ ರಾಜು ಎಂಬಾತನನ್ನು ಇತರ ಕೆಲಸಗಾರರು ಎಳೆದು ರಕ್ಷಿಸಿದ್ದಾರೆ. ಮಣ್ಣಿನ ಕೆಲಸ ಮಾಡುತ್ತಿದ್ದ ಇನ್ನಿಬ್ಬರು ಕಾರ್ಮಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದು, ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೃತದೇಹ ಪತ್ತೆ: ಸ್ಥಳಕ್ಕಾಗಮಿಸಿದ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಜೆಸಿಬಿ ಯಂತ್ರದ ಮೂಲಕ ಕಾರ್ಯಾಚರಣೆ ನಡೆಸಿ ಭಾರೀ ಪ್ರಮಾಣದ ಮಣ್ಣನ್ನು ತೆರವು ಮಾಡುವ ಮೂಲಕ ಸಂಜೆ 7 ಗಂಟೆ ವೇಳೆಗೆ ಮೂವರನ್ನು ಮಣ್ಣಿನ ಅಡಿಯಿಂದ ಹೊರತೆಗೆದು ತುರ್ತು ವಾಹನದ ಮೂಲಕ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಿದರು. ವೈದ್ಯರು ಮೂವರೂ ಮೃತಪಟ್ಟಿದ್ದಾರೆ ಎಂದು ದೃಢಪಡಿಸಿದರು. ಈ ಘಟನೆ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ನಿರ್ಲಕ್ಷ್ಯದಿಂದ ಅನಾಹುತ: ಈ ಸಂದರ್ಭ ಮಾತನಾಡಿದ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಕಟ್ಟಡ ಕಾಮಗಾರಿ ಸಂದರ್ಭ ನಿರ್ಲಕ್ಷ್ಯವಹಿಸಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿ ಕಾನೂನು ರೀತಿ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಶಾಸಕ ಡಾ.ಮಂಥರ್ ಗೌಡ ಮಾತನಾಡಿ, ಸ್ಥಳದಲ್ಲಿ 7 ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾಗ ಈ ಘಟನೆ ನಡೆದು 4 ಮಂದಿ ಮಣ್ಣಿನಡಿ ಸಿಲುಕಿದ್ದರು. ಓರ್ವನನ್ನು ಕಾರ್ಮಿಕರೇ ರಕ್ಷಿಸಿದ್ದಾರೆ. ಮಣ್ಣಿನಡಿ ಸಿಲುಕಿದವರನ್ನು ಹೊರತೆಗೆದು ಜಿಲ್ಲಾಸ್ಪತ್ರೆಗೆ ಸಾಗಿಸಲಾಗಿದೆ. ಈ ಕುರಿತು ಸೂಕ್ತ ತನಿಖೆ ನಡೆಸುವಂತೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸುವುದಾಗಿ ಹೇಳಿದರು.

ಉಸ್ತುವಾರಿ ಸಚಿವರ ಭೇಟಿ: ವಿಷಯ ತಿಳಿಯುತ್ತಿದ್ದಂತೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರಲ್ಲದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುವವರನ್ನು ಭೇಟಿ ಮಾಡಿ ಧೈರ್ಯ ತುಂಬಿದರು.

ಆತಂಕಪಡುವ ಅಗತ್ಯ ಇಲ್ಲ

ತಮಗಿಷ್ಟ ಬಂದಂತೆ ವರ್ತಿಸುತ್ತಿದ್ದಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು. 1972ರ 'ವನ್ಯ ಜೀವಿ ಸಂರಕ್ಷಣಾ ಕಾಯ್ದೆ' ವನ್ಯ ಜೀವಿಗಳ ಹತ್ಯೆ ಮತ್ತು ಅವುಗಳ ದೇಹಗಳ ಭಾಗಗಳ ಮಾರಾಟ ನಿಯಂತ್ರಣಕ್ಕೆ ಅನ್ವಯವಾಗಲಿದೆ. ಈ ಕಾಯಿದೆ ಅಡಿ ಅವುಗಳನ್ನು ಮಾರಾಟ ಮಾಡುವುದು ಅಪರಾಧವಾಗುತ್ತದೆ. ಆದರೆ, ಪಾರಂಪರಿಕವಾಗಿ ಅವುಗಳ ಸಂಗ್ರಹ ಹಾಗೂ ಬಳಕೆ ಮಾಡಿಕೊಂಡು ಬಂದಿದ್ದರೆ ಅದು ಅಪರಾಧವಾಗದು. ಆದರೆ, ಕೊಡಗು ಜಿಲ್ಲೆಯ ಐನ್‌ಮನೆ ಸೇರಿದಂತೆ ವಿವಿಧೆಡೆಗಳಲ್ಲಿ ಪಾರಂಪರಿಕವಾಗಿ ಪೂರ್ವಜರ ಕಾಲದಿಂದಲೇ ಜಿಂಕೆಯ ಕೊಂಬುಗಳು, ನವಿಲು ಗರಿ ಮತ್ತು ಆನೆಯ ದಂತ ಬಳಸಿ ಮಾಡಿರುವ ಪೀಚೆ ಕತ್ತಿಗಳಿವೆ. ಇವುಗಳನ್ನು ಹೊಂದಿರುವವರನ್ನು ಬಂಧನ ಮಾಡಲು ಸಾಧ್ಯವೇ? ಎಂದು ಪ್ರಶ್ನಿಸಿದ ಪೊನ್ನಣ್ಣ, ಪಾರಂಪರಿಕವಾಗಿ ವನ್ಯಜೀವಿ ಅಂಗಾಂಗಗಳ ಇರಿಸಿಕೊಳ್ಳುವುದಕ್ಕೆ ಯಾವುದೇ ಸಮಸ್ಯೆ ಇಲ್ಲವೆಂದು ಸ್ಪಷ್ಟಪಡಿಸಿದರು. ತಲೆತಲಾಂತರಗಳಿಂದ ಜಿಲ್ಲೆಯ ಐನ್‌ಮನೆ ಸೇರಿದಂತೆ ಹಲವರ ಬಳಿ ಇರುವ ವನ್ಯಜೀವಿ ಉತ್ಪನ್ನಗಳಿಗೆ ಕಾನೂನಿನಲ್ಲಿ ರಿಯಾಯಿತಿ ಇದೆ. ಇವುಗಳು ವನ್ಯಜೀವಿ ಸಂರಕ್ಷಣಾ ಕಾಯಿದೆಯ 'ಶೆಡ್ಯೂಲ್ 1' ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಅವರು ವಿವರಿಸಿದರು. ಅರಣ್ಯ ಕಾಯಿದೆಯ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮೇಲ್ನೋಟಕ್ಕೆ ಅರಿವಿನ ಕೊರತೆ ಇದೆ. ಮೊದಲು ಅಧಿಕಾರಿಗಳು ಕಾನೂನನ್ನು ಅರಿತುಕೊಳ್ಳಬೇಕು. ಕಾನೂನು ಇರುವುದು ಜನರನ್ನು ರಕ್ಷಣೆ ಮಾಡಲು, ಆದ್ದರಿಂದ ಕೊಡಗಿನ ಜನ ಅನಗತ್ಯವಾಗಿ ಆತಂಕಕ್ಕೆ ಒಳಗಾಗುವುದು ಬೇಡವೆಂದ ಅವರು, ಎಸಿಎಫ್ ಮಟ್ಟದ ಅಧಿಕಾರಿಯಿಂದ ಈ ವಿವಾದ ಆಗಿದ್ದು, ಇದೊಂದು ವಿಷಾಧನೀಯ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಾಚರಣೆ ಕೂಡದು: ವನ್ಯಜೀವಿ ಉತ್ಪನ್ನಗಳ ವಿಚಾರದಲ್ಲಿ ಅರಣ್ಯ ಅಧಿಕಾರಿಗಳಿಗೆ ಸರಕಾರವಾಗಲೀ, ಸಚಿವರಾಗಲೀ ಯಾವುದೇ ನಿರ್ದೇಶನ ನೀಡಿಲ್ಲ. ಅಧಿಕಾರಿಗಳು ತಮಗಿಷ್ಟ ಬಂದಂತೆ ವರ್ತಿಸುತ್ತಿದ್ದು, ಅವರೇ ಕಾನೂನು ಮೀರುತ್ತಿರುವುದು ಕಂಡು ಬಂದಿದೆ. ನಟ ಹಾಗೂ ಸಂಸದ ಜಗ್ಗೇಶ್, ವರ್ತೂರು ಸಂತೋಷ್ ಅವರ ಪ್ರಕರಣ ಹೈಕೋರ್ಟ್‌ನಲ್ಲಿದೆ. ಇದು ಇತ್ಯರ್ಥವಾಗುವವರೆಗೆ ರಾಜ್ಯಾದ್ಯಂತ ಅಧಿಕಾರಿಗಳು ಕಾರ್ಯಾಚರಣೆ ಮುಂದುವರೆಸಬಾರದು. ಕೋರ್ಟ್‌ಗಳಿಗಿಂತ ಅಧಿಕಾರಿ ವರ್ಗ ದೊಡ್ಡವರಲ್ಲ, ಅಧಿಕಾರಿಗಳಿಗೂ ಇತಿ ಮಿತಿ ಇದೆ. ಇದನ್ನು ಮೀರಿದಲ್ಲಿ ಅರಣ್ಯ ಅಧಿಕಾರಿಗಳು ಕೂಡ ಕಠಿಣ ಕಾನೂನು ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂದು ಪೊನ್ನಣ್ಣ ಎಚ್ಚರಿಸಿದರು. ಈ ವಿಚಾರವಾಗಿ ಅರಣ್ಯ ಸಚಿವರಿಗೆ ಈಗಾಗಲೇ ಮಾಹಿತಿ ನೀಡಿ ಮನವಿಯನ್ನು ಮಾಡಿದ್ದೇನೆ. ಮುಖ್ಯಮಂತ್ರಿಗಳು ಹಾಗೂ ಅರಣ್ಯ ಅಧಿಕಾರಿಗಳೊಂದಿಗೆ ನ.4ರಂದು ಬೆಂಗಳೂರಿನಲ್ಲಿ ಮತ್ತೊಮ್ಮೆ ಚರ್ಚಿಸಿ ವಾಸ್ತವ ಸ್ಥಿತಿಗತಿಯನ್ನು ಮನವರಿಕೆ ಮಾಡಿಕೊಡಲಾಗುತ್ತದೆ. ಆ ಮೂಲಕ ಈಗ ಸೃಷ್ಟಿಯಾಗಿರುವ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳಲಾಗುತ್ತದೆ ಎಂದು ಪೊನ್ನಣ್ಣ ಹೇಳಿದರು.

ಕರ್ನಾಟಕ ಕಗ್ಗತ್ತಲು ಭೀತಿ

ಬಳ್ಳಾರಿ, ಮಾನ್ವಿ ಸೇರಿದಂತೆ ರಾಜ್ಯದ ಬಹುತೇಕ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳು ಕಲ್ಲಿದ್ದಲಿಗಾಗಿ ಪರದಾಡುತ್ತಿವೆ. ಈ ಮಧ್ಯೆ ಮಳೆ ಕೊರತೆಯಿಂದ ಜಲವಿದ್ಯುತ್ ಘಟಕಗಳೂ ಸಂಕಷ್ಟದಲ್ಲಿದ್ದು ಲಿಂಗನಮಕ್ಕಿ ಜಲಾಶಯ, ಕಾಳಿ ಜಲಾಶಯ, ವರಾಹಿ ಜಲಾಶಯಗಳಲ್ಲಿ ಪ್ರಸ್ತುತ ಶೇಕಡಾ 40ರಿಂದ 60ರಷ್ಟು ನೀರು ಸಂಗ್ರಹ ಇದೆ.

ಸಂಕಷ್ಟ ಸಂದರ್ಭದಲ್ಲಿ ಜಲವಿದ್ಯುತ್ ಬಳಕೆ ಮಾಡಿಕೊಳ್ಳಲು ನಿರ್ಧರಿಸಿರುವ ಸರ್ಕಾರ, ಮುಂಬರುವ ಲೋಕಸಭಾ ಚುನಾವಣೆ ಏಪ್ರಿಲ್-ಮೇನಲ್ಲಿ ನಡೆಯಲಿದ್ದು ಆ ಸಂದರ್ಭದಲ್ಲಿ ಜಲ ವಿದ್ಯುತ್ ಬಳಕೆಗೆ ನಿರ್ಧರಿಸಿದೆ. ಚುನಾವಣಾ ಸಂದರ್ಭದಲ್ಲಿ ವಿದ್ಯುತ್ ಅಭಾವ ಉಂಟಾದರೆ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಹಿನ್ನಡೆ ಆಗಬಹುದೆಂಬ ಮುಂದಾಲೋಚನೆಯಿಂದ ಈ ಕ್ರಮಕ್ಕೆ ಮುಂದಾಗಿದೆ. ಈ ಸಂದರ್ಭದಲ್ಲಿ ವಿದ್ಯುತ್ ಉತ್ಪಾದನೆಗೆ ಅವಕಾಶ ಮಾಡಿಕೊಡಲು ನೀರಿನ ಸಂಗ್ರಹವನ್ನು ಕಾಯ್ದಿಟ್ಟುಕೊಂಡಿದೆ. ಆರ್ಥಿಕ ಸಂಕಷ್ಟದಲ್ಲಿರುವ ರಾಜ್ಯ ಸರ್ಕಾರ ಕೆಪಿಟಿಸಿಎಲ್ ಮತ್ತು ವಿದ್ಯುತ್ ಕಂಪನಿಗಳಿಗೆ ಒಟ್ಟು 40,000 ಕೋಟಿ ರೂ. ಬಾಕಿ ಕೊಡಬೇಕಿದೆ. ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಗೆ ಕೆಪಿಟಿಸಿಎಲ್, ಸರ್ಕಾರದಿಂದ ಬರಬೇಕಿರುವ 40,000 ಕೋಟಿ ರೂ.ಗಳನ್ನು ಪಡೆಯಲು ಪರದಾಡುತ್ತಿದೆ. ಒಂದು ರೇಕ್‌ನಷ್ಟು ಕಲ್ಲಿದ್ದಲನ್ನು ಕೇಂದ್ರ ಸರ್ಕಾರ ಕಳಿಸುತ್ತಿದ್ದು, ಇದರಿಂದ ಉಷ್ಣ ವಿದ್ಯುತ್ ಸ್ಥಾವರಗಳು ಇನ್ನೊಂದು ವಾರ ಉಸಿರಾಡಬಹುದಾಗಿದೆ.

ಆಹಾರ ಮೇಳದಲ್ಲಿ ಮಳಿಗೆದಾರರಿಗೆ ಭಾರಿ ನಷ್ಟ

ಪ್ರಾಯೋಜಕತ್ವದ ಹಣದಲ್ಲಿ ನಷ್ಟ ಭರಿಸಲು ಆಗ್ರಹ



ಮೈಸೂರು,ಅ.31(ಎಂಟಿವೈ)- ದಸರಾ ಮಹೋತ್ಸವದ ಅಂಗವಾಗಿ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ನಡೆದ ಆಹಾರ ಮೇಳದಲ್ಲಿ ಪಾಲ್ಗೊಂಡಿದ್ದ ಮಳಿಗೆದಾರರಿಗೆ ಭಾರೀ ನಷ್ಟವುಂಟಾಗಿದ್ದು, ಪ್ರಾಯೋಜಕತ್ವದಲ್ಲಿ ಸಂಗ್ರಹವಾದ ಮೊತ್ತದಿಂದ ವ್ಯಾಪಾರಿಗಳಿಗೆ ನಷ್ಟ ಭರಿಸುವಂತೆ ದಸರಾ ಆಹಾರ ಮೇಳ ತಿಂಡಿ ತಿನಿಸುಗಳ ಮಾರಾಟಗಾರರ ಸಂಘ ಅಧ್ಯಕ್ಷ ಎಸ್.ನಾಗರಾಜು ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ದಸರಾ ಆಹಾರ ಮೇಳದಲ್ಲಿ ಮಳಿಗೆ ಪಡೆಯಲು ನಿಗದಿ ಮಾಡಿದ್ದ ಭಾರಿ ಮೊತ್ತದ ಹಣ ಪಾವತಿಸಿರುವ ವ್ಯಾಪಾರಿಗಳು ವ್ಯಾಪಾರವಿಲ್ಲದೆ ಕಂಗೆಟ್ಟಿದ್ದಾರೆ. ಕಳೆದ ವರ್ಷ ಆಹಾರ ಮೇಳದಲ್ಲಿ ಸಸ್ಯಾಹಾರಿ ಮತ್ತು ಮಾಂಸಾಹಾರಿ ಮಳಿಗೆಗೆ 30 ಸಾವಿರ ರೂ., ಶುಲ್ಕ ನಿಗದಿ ಮಾಡಲಾಗಿತ್ತು. ಈ ಬಾರಿ ಸಸ್ಯಾಹಾರಿ ಮಳಿಗೆಗೆ 59 ಸಾವಿರ ರೂ, ಮಾಂಸಾಹಾರಿ ಮಳಿಗೆಗೆ 88.500 ರೂ.ನಿಗದಿ ಮಾಡಲಾಗಿತ್ತು. ಇಲಾಖೆ ನಿಗದಿ ಮಾಡಿದ್ದ ಮೊತ್ತವನ್ನು ವ್ಯಾಪಾರಿಗಳು ಡಿಡಿ ಅಥವಾ ನಗದು ಪಾವತಿಸುವ ಮೂಲಕ ಮಳಿಗೆಯನ್ನು ಪಡೆದಿದ್ದರು. ಆದರೆ ಈ ಬಾರಿ ನಿರೀಕ್ಷಿಸಿದ ಪ್ರಮಾಣದಲ್ಲಿ ವ್ಯಾಪಾರವಾಗದ ಕಾರಣ ಮಳಿಗೆದಾರರಿಗೆ ಭಾರಿ ಪ್ರಮಾಣದ ನಷ್ಟ ವುಂಟಾಗಿದೆ ಎಂದು ಅಳಲು ತೋಡಿಕೊಂಡರು.

ಈ ಸಾಲಿನ ಆಹಾರ ಮೇಳದಲ್ಲಿ 101 ಸಸ್ಯಾಹಾರಿ ಮಳಿಗೆ, 33 ಮಾಂಸಾಹಾರಿ ಮಳಿಗೆ ಇದ್ದವು. ಇದರೊಂದಿಗೆ ಪ್ರಾಯೋಜಕತ್ವದ ಮಳಿಗೆಗಳೂ ಇದ್ದವು. 13 ಕಂಪನಿಗಳ ಪ್ರಾಯೋಜಕತ್ವ ಆಹಾರ ಮೇಳಕ್ಕೆ ದೊರೆತಿದ್ದು, ಇದರಿಂದ 80 ಲಕ್ಷ ರೂ. ಸಂದಾಯವಾಗಿದೆ. ಪ್ರಾಯೋಜಕತ್ವದ ಹಣದ ಬಗ್ಗೆ ಆಹಾರ ಮೇಳ ಉಪಸಮಿತಿ ಸಭೆಯಲ್ಲಿ ಪ್ರಸ್ತಾಪಿಸಿಲ್ಲ. ಇದರಿಂದ ಅಕ್ರಮ ನಡೆದಿದೆ ಎಂಬ ಅನುಮಾನ ಮೂಡಿದೆ. ಈ ಕುರಿತು ತನಿಖೆ ನಡೆಸಬೇಕು. ಅಲ್ಲದೆ, ವ್ಯಾಪಾರಿಗಳಿಗೆ ಆಗಿರುವ ನಷ್ಟ ತುಂಬಿಕೊಡಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಕಂಸಾಳೆ ರವಿ, ಶಿವಕುಮಾರ್ ಇದ್ದರು.

ನಾಳೆಯಿಂದ ರಾಜ್ಯಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ



ಮೈಸೂರು,ಅ.31(ಎಂಟಿವೈ)- ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ವತಿಯಿಂದ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನ.2 ಮತ್ತು 3ರಂದು 44ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ-2023 ಆಯೋಜಿಸಲಾಗಿದೆ ಎಂದು ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಎಂ. ಪ್ರಕಾಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಸಂಸ್ಥೆ ವತಿಯಿಂದ ಈ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ. ನ.2ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದಾರೆ. ನ.3ರಂದು ಸಂಜೆ 5ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ರಾಜ್ಯದ ಎಲ್ಲ ಜಿಲ್ಲೆಗಳಿಂದ ಸುಮಾರು 2250 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಗ್ರಾಮೀಣ ಕ್ರೀಡೆಗೂ ಪ್ರೋತ್ಸಾಹ ನೀಡಲೆಂದು ಈ ಬಾರಿ ಕಬಡ್ಡಿ ಮೊದಲಾದವನ್ನು ಸೇರ್ಪಡೆ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿಪಿಸಿ ಪಾಲಿಟೆಕ್ನಿಕ್ ಸಂಸ್ಥೆಯ ಸಿಬ್ಬಂದಿಗಳಾದ ವೆಂಕಟೇಶ್, ಡಾ. ಅರಸು ಕುಮಾರ್, ಗಿರೀಶ್, ಎಸ್.ಎಂ. ಮಧುಸೂದನ್, ಎಸ್.ವಿ. ದೊಡ್ಡಯ್ಯ ಇದ್ದರು.

ಕನ್ನಡ ರಾಜ್ಯೋತ್ಸವ: ಮಹಾರಾಷ್ಟ್ರದ ಸಂಸದ, ಮೂವರು ಸಚಿವರಿಗೆ ಬೆಳಗಾವಿ ಪ್ರವೇಶಕ್ಕೆ ನಿರ್ಬಂಧ

ಬೆಳಗಾವಿ, ಅ.31- ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಎಂಇಎಸ್ 'ಕರಾಳ ದಿನ'ವನ್ನು ಆಚರಿಸುವ ಭೀತಿಯ ನಡುವೆ ಕರ್ನಾಟಕ ಸರ್ಕಾರವು ಮಹಾರಾಷ್ಟ್ರದ ಮೂವರು ಸಚಿವರು ಮತ್ತು ಓರ್ವ ಸಂಸದರು ಗಡಿ ಜಿಲ್ಲೆ ಬೆಳಗಾವಿಗೆ ಪ್ರವೇಶಿಸುವುದನ್ನು ನಿಷೇಧಿಸಿ ಮಂಗಳವಾರ ಆದೇಶ ಹೊರಡಿಸಿದೆ.



ಬೆಳಗಾವಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ್ ಹೊರಡಿಸಿರುವ ಅಧಿಕೃತ ಆದೇಶದಲ್ಲಿ, ಅಕ್ಟೋಬರ್ 31 ರಿಂದ ನವೆಂಬರ್ 2ರ ಸಂಜೆಯವರೆಗೆ ಮಹಾರಾಷ್ಟ್ರದ ಸಚಿವರಾದ ಶಂಭುರಾಜ ದೇಸಾಯಿ, ಚಂದ್ರಕಾಂತ ಪಾಟೀಲ್, ದೀಪಕ್ ಕೇಸರಕರ್ ಮತ್ತು ಸಂಸದ ಧೈರ್ಯಶೀಲ ಮಾನೆ ಅವರ ಪ್ರವೇಶವನ್ನು ನಿಷೇಧಿಸಿದ್ದಾರೆ.

ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವಕ್ಕೆ ವಿರುದ್ಧವಾಗಿ ಎಂಇಎಸ್ ಕರಾಳ ದಿನ ಆಚರಣೆಗೆ ಕರೆ ನೀಡಿದ್ದು, ಸಿದ್ಧತೆ ನಡೆಸಿದೆ. ಇದರಲ್ಲಿ ಪಾಲ್ಗೊಳ್ಳುವಂತೆ ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವ ಶಂಭುರಾಜ ದೇಸಾಯಿ, ಚಂದ್ರಕಾಂತ ಪಾಟೀಲ, ದೀಪಕ್ ಕೇಸರಕರ್ ಹಾಗೂ ಸಂಸದ ಧೈರ್ಯಶೀಲ ಮಾನೆ ಅವರಿಗೆ ಆಹ್ವಾನ ನೀಡಿದೆ.

ಈ ನಾಲ್ವರು ಗಡಿಜಿಲ್ಲೆ ಬೆಳಗಾವಿಗೆ ಬಂದರೆ ಪ್ರಚೋದನಕಾರಿ ಭಾಷಣ ಮಾಡುವ ಸಾಧ್ಯತೆ ಹೆಚ್ಚಿದ್ದು, ಕನ್ನಡ ಸಂಘಟನೆಗಳು ಮುತ್ತಿಗೆ ಹಾಕುವ ಎಚ್ಚರಿಕೆ ನೀಡಿವೆ. ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಹಿನ್ನೆಲೆಯಲ್ಲಿ ಮೂವರು ಸಚಿವರು ಮತ್ತು ಓರ್ವ ಸಂಸದರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬೆಳಗಾವಿಯಲ್ಲಿ ಕನ್ನಡಪರ ಸಂಘಟನೆಗಳು ಮಹಾರಾಷ್ಟ್ರ ನಾಯಕರ ಪ್ರವೇಶವನ್ನು ವಿರೋಧಿಸಿ ಘೇರಾವ್ ಮಾಡುವ ಸಾಧ್ಯತೆಗಳಿವೆ. ಇದು ಕನ್ನಡಪರ ಹೋರಾಟಗಾರರು ಮತ್ತು ಎಂಇಎಸ್ ಕಾರ್ಯಕರ್ತರ ನಡುವೆ ಘರ್ಷಣೆಗೆ ಕಾರಣವಾಗುವ ಸಾಧ್ಯತೆಯಿದೆ ಎಂದು ಜಿಲ್ಲಾಡಳಿತ ತಿಳಿಸಿದ್ದು, ಪರಿಸ್ಥಿತಿ ತಡೆಯಲು ಕ್ರಮ ಕೈಗೊಳ್ಳಲಾಗಿದೆ ಎಂದಿದೆ.

ದಕ್ಷಿಣ ಶಿಕ್ಷಕರ ಕ್ಷೇತ್ರ ಮತದಾರರ ಪಟ್ಟಿಗೆ ಹೆಸರು ನೋಂದಣಿಗೆ ಮನವಿ

ಮೈಸೂರು,ಅ.31(ಎಂಟಿವೈ)- ವಿಧಾನಪರಿಷತ್‌ಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಡೆಯಲಿರುವ ಚುನಾವಣೆಯಲ್ಲಿ ಮತದಾನ ಮಾಡಲು ಅರ್ಹ ಶಿಕ್ಷಕರು ಹೆಸರು ನೋಂದಣಿ ಮಾಡಿಕೊಳ್ಳುವಂತೆ ನಗರ ಮತ್ತು ಗ್ರಾಮಾಂತರ ಬಿಜೆಪಿ ಸಹ ವಕ್ತಾರ ಡಾ. ವಸಂತ್‌ಕುಮಾರ್ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆ ವ್ಯಾಪ್ತಿಗೆ ಬರುವ ಪ್ರೌಢಶಾಲೆ ಸೇರಿದಂತೆ ಎಲ್ಲ ಶಿಕ್ಷಣ ಸಂಸ್ಥೆಗಳ ಬೋಧಕ ಸಿಬ್ಬಂದಿ ಹೆಸರು ನೋಂದಣಿ ಮಾಡಿಕೊಳ್ಳಬಹುದಾಗಿದೆ. ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುವ ಇಚ್ಛೆ ಇದ್ದು, ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಎಲ್.ಜಗದೀಶ್, ಶಿವರಾಜ್ ಇದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೆಆರ್ ಮಿಲ್ ನೌಕರರ ಕುಟುಂಬ ಪ್ರತಿಭಟನೆ

ಮೈಸೂರು,ಅ.31(ಎಂಟಿವೈ)- ಕಾರ್ಮಿಕರಿಗೆ ನ್ಯಾಯ ಬದ್ಧ ಪರಿಹಾರ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನ.2ರಂದು ಬೆಳಗ್ಗೆ 11 ಗಂಟೆಯಿಂದ ಮೈಸೂರಿನ ಕೆ.ಆರ್.ಮಿಲ್ ಕಾರ್ಖಾನೆಯ ನೌಕರರು ಹಾಗೂ ಕುಟುಂಬ ಸದಸ್ಯರು ಕಾರ್ಖಾನೆ ಮುಂಭಾಗ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದು ಸಾರ್ವಜನಿಕ ಹಿತಾಸಕ್ತಿ ಸಂಘಟನೆ ಹಾಗೂ ಹಿರಿಯ ನಾಗರಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವೈ. ರಘು ತಿಳಿಸಿದ್ದಾರೆ.




ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆ.ಆರ್. ಮಿಲ್ ಕಾರ್ಖಾನೆಯನ್ನು 1984ರಲ್ಲಿ ಮುಚ್ಚಲಾಗಿದೆ. ಉತ್ತಮ ಸ್ಥಿತಿಯಲ್ಲಿದ್ದ ಕಾರ್ಖಾನೆಯನ್ನು ಮುಚ್ಚಿದ್ದರಿಂದ ಅಲ್ಲಿನ ನೌಕರರು ಬೀದಿಗೆ ಬಿದ್ದಿದ್ದಾರೆ. ಆದರೆ, ಇಷ್ಟು ವರ್ಷವಾದರೂ ಕಾರ್ಮಿಕರಿಗೆ ನೀಡಬೇಕಾದ ಪರಿಹಾರ ನೀಡಿಲ್ಲ. 1991ರಲ್ಲಿ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಲಿಕ್ವಿಡೇಷನ್‌ಗೆ ಒಳಪಡಿಸಲಾಗಿತ್ತು. ಲಿಕ್ವಿಡೇಷನ್‌ಗೆ ಒಳಪಡಿಸಿರುವ ವಿಚಾರವನ್ನು ಕೆಎಸ್‌ಐಐಡಿಸಿಯವರು ಉಚ್ಚನ್ಯಾಯಾಲಯದ ಗಮನಕ್ಕೆ ತರದೆ ಅಡಮಾನ ಮಾಡುವ ಅನುಮತಿಯನ್ನು ಪಡೆದುಕೊಂಡಿದ್ದಾರೆ. ಇದು ನ್ಯಾಯಾಲಯವನ್ನೇ ವಂಚಿಸಿದಂತಾಗಿದೆ ಎಂದು ಆರೋಪಿಸಿದರು.

200 ಕೋಟಿ ರೂ. ಬೆಲೆಬಾಳುವ ಕಾರ್ಖಾನೆಗೆ ಸೇರಿದ ಭೂಮಿಯನ್ನು ಕೇವಲ 7 ಕೋಟಿ ರೂಗೆ ಮಾರಾಟ ಮಾಡಿ ಅಕ್ರಮ ಎಸಗಲಾಗಿದೆ. ಅಲ್ಲದೆ, ಲಿಕ್ವಿಡೇಟರ್ ಪರ ನ್ಯಾಯಾಲಯದಲ್ಲಿ ಆದೇಶ ಬಂದಿದ್ದರೂ ಅಟ್ಲಾಂಟಿಕ್ ಸ್ಪಿನ್ನಿಂಗ್‌ನವರು ಅದನ್ನು ಉಲ್ಲಂಘಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಲು ಈ ಹೋರಾಟ ಮುಂದುವರೆಸುತ್ತಿದ್ದು, ನ.2ರಂದು ಕೆ.ಆರ್.ಮಿಲ್‌ನಿಂದ ಸುಮಾರು ಎರಡು ಸಾವಿರ ಮಂದಿಯೊಂದಿಗೆ ಪ್ರತಿಭಟನೆ ನಡೆಸುತ್ತಿರುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎನ್. ಸ್ವಾಮಿ, ನಾಗರಾಜು, ಆರ್. ಚಂದ್ರಣ್ಣ, ಎಚ್.ಆರ್. ನಾಗರಾಜು ಇದ್ದರು.

ನಾಳೆಯಿಂದ ಅಮೃತ ವಿದ್ಯಾಪೀಠಂನಲ್ಲಿ ವಿಚಾರ ಸಂಕಿರಣ

ಮೈಸೂರು,ಅ.31(ಎಂಟಿವೈ)- ಮೈಸೂರಿನ ಬೋಗಾದಿಯಲ್ಲಿರುವ ಅಮೃತ ವಿಶ್ವವಿದ್ಯಾಪೀಠಂನಲ್ಲಿ ನ.2ರಿಂದ 4ರವರೆಗೆ 'ಕ್ಲೌಡ್ ಕಂಪ್ಯೂಟಿಂಗ್ ಇನ್ ಎಮರ್ಜಿಂಗ್ ಮಾರ್ಕೆಟ್ಸ್' ವಿಷಯ ಕುರಿತು 12ನೇ ಐಇಇಇ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಪ್ರಾಂಶುಪಾಲ ಜಿ. ರವೀಂದ್ರನಾಥ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಚಾರ ಸಂಕಿರಣವನ್ನು ನ.2ರಂದು ಬೆಳಗ್ಗೆ 9.30ಕ್ಕೆ ಕ್ಯಾಟಮಾರನ್ ವೆಂಚರ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ಡಿ.ರಂಗನಾಥ್ ಉದ್ಘಾಟಿಸಿ, ಕ್ಲೌಡ್ ಕಂಪ್ಯೂಟಿಂಗ್ ಕುರಿತು ಮಾತನಾಡಲಿದ್ದಾರೆ. ವಿಚಾರ ಸಂಕಿರಣದ ಅಂಗವಾಗಿ ಪ್ರಧಾನ ಉಪನ್ಯಾಸ ಹಾಗೂ ವಿಚಾರಗೋಷ್ಠಿ ಆಯೋಜಿಸಲಾಗಿದೆ. ಪ್ರಧಾನ ವಿಷಯ ಕುರಿತ ಸುಮಾರು 170 ಸಂಶೋಧನಾ ಲೇಖನ ಸಲ್ಲಿಕೆಯಾಗಿದ್ದು, ಇವುಗಳಲ್ಲಿ ಉತ್ಕೃಷ್ಟ ಹಾಗೂ ಗುಣಮಟ್ಟದ 50 ಸಂಶೋಧನಾ ಲೇಖನಗಳನ್ನು ವಿಚಾರ ಸಂಕಿರಣಕ್ಕೆ ಆಯ್ಕೆ ಮಾಡಲಾಗಿದೆ ಎಂದರು.

ಈ ವಿಚಾರ ಸಂಕಿರಣದಲ್ಲಿ ಆಹ್ವಾನಿತ ಭಾಷಣ, ಪಿಯರ್ ರಿವ್ಯೂ ಪೇಪರ್ ಪ್ರೆಸೆಂಟೇಷನ್, ವಿದ್ಯಾರ್ಥಿ ಯೋಜನೆಗಳ ಪ್ರದರ್ಶನ ಹಾಗೂ ಟೆಕ್ನೋಬಿಜ್ ನಡೆಯಲಿದೆ. ಮಾಹಿತಿ ತಂತ್ರಜ್ಞಾನದಲ್ಲಿ ಕ್ಲೌಡ್ ಕಂಪ್ಯೂಟಿಂಗ್ ಮಹತ್ವದ ಪಾತ್ರ ವಹಿಸಿದ್ದು, ಆಡಳಿತ, ಆರ್ಥಿಕತೆ, ಶಿಕ್ಷಣ, ಶಕ್ತಿ, ಸಾರಿಗೆ, ದೂರ ಸಂಪರ್ಕ ಹಾಗೂ ರೀಟೇಲ್ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದೆ. ಹೀಗಾಗಿ ಇದು ಮಹತ್ವದ ವಿಚಾರ ಸಂಕಿರಣವಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಂಸ್ಥೆಯ ಡಾ. ಶೇಖರ್ ಬಾಬು, ಅದ್ವಿತೀಯ ಮುಖ್ಯೋಪಾಧ್ಯಾಯ, ದರ್ಶನ್ ಮಂಜುನಾಥ್, ಡಾ.ಎನ್. ಮನೋಹರ್ ಇದ್ದರು.



ಕೊರೊನಾ ಸಮಸ್ಯೆ ಎದುರಿಸಿದವರು ಹೃದಯಾಘಾತದಿಂದ ಪಾರಾಗಲು ಕಠಿಣ ವ್ಯಾಯಾಮ, ಕೆಲಸ ಮಾಡಬೇಡಿ

ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಸಲಹೆ

ನವದೆಹಲಿ, ಅ.31– ಭಾರತದಲ್ಲಿ ವೇಗವಾಗಿ ಹೆಚ್ಚುತ್ತಿರುವ ಹೃದಯಾಘಾತ ಪ್ರಕರಣಗಳು ಕೊರೊನಾ ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿವೆಯೇ ಎಂಬ ಪ್ರಶ್ನೆ ಇಂದು ಎಲ್ಲರ ಮನದಲ್ಲಿ ಮೂಡುತ್ತಿದೆ. ಹೌದು, ಈಗ ಈ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಹೃದಯಾಘಾತಕ್ಕೆ ನಿಜವಾದ ಕಾರಣ ಮತ್ತು ಅದನ್ನು ತಡೆಗಟ್ಟುವ ಮಾರ್ಗಗಳನ್ನು ಹೇಳಿದ್ದಾರೆ.



ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ (ಐಸಿಎಂಆರ್) ನಡೆಸಿದ ಅಧ್ಯಯನವನ್ನು ಮಾಂಡವಿಯಾ ಉಲ್ಲೇಖಿಸಿದ್ದಾರೆ. ಈ ಹಿಂದೆ ತೀವ್ರವಾದ ಕೋವಿಡ್–19 ಕಾಯಿಲೆಯಿಂದ ಬಳಲುತ್ತಿದ್ದ ಜನರು ಒಂದು ಅಥವಾ ಎರಡು ವರ್ಷಗಳ ಕಾಲ ಹೃದಯಾಘಾತದಿಂದ ಪಾರಾಗಬೇಕಾದರೆ ಹೆಚ್ಚು ಕಷ್ಟಪಟ್ಟು ಕೆಲಸ ಮಾಡುವುದನ್ನು ತಪ್ಪಿಸಬೇಕು. ಕಠಿಣ ವ್ಯಾಯಾಮ ಮಾಡಬಾರದು ಎಂದು ಹೇಳಿದರು.

ಗುಜರಾತ್‌ನಲ್ಲಿ ಇತ್ತೀಚೆಗೆ ನವರಾತ್ರಿ ಉತ್ಸವದ 'ಗರ್ಬಾ' ಕಾರ್ಯಕ್ರಮಗಳು ಸೇರಿದಂತೆ ಹೃದಯ ಸಂಬಂಧಿ ಸಮಸ್ಯೆಗಳಿಂದಾಗಿ ಹಲವು ಸಾವುಗಳು ಸಂಭವಿಸಿತ್ತು. ಇದು ಗುಜರಾತ್ ಆರೋಗ್ಯ ಸಚಿವ ರುಶಿಕೇಶ್ ಪಟೇಲ್ ಹೃದ್ರೋಗ ತಜ್ಞರು ಸೇರಿದಂತೆ ವೈದ್ಯಕೀಯ ತಜ್ಞರೊಂದಿಗೆ ಸಭೆ ನಡೆಸಲು ಪ್ರೇರೇಪಿಸಿದರು.

ಹೃದಯಾಘಾತದ ಕಾರಣಗಳು ಮತ್ತು ಅದನ್ನು ತಡೆಗಟ್ಟುವ ಕ್ರಮಗಳನ್ನು ಕಂಡುಹಿಡಿಯಲು ಸಾವಿನ ಡೇಟಾವನ್ನು ಸಂಗ್ರಹಿಸಲು ಪಟೇಲ್ ತಜ್ಞರನ್ನು ಕೇಳಿದ್ದರು.

ಇನ್ನು ಮಾಂಡವಿಯಾ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಐಸಿಎಂಆರ್ ವಿವರವಾದ ಅಧ್ಯಯನವನ್ನು ಮಾಡಿದೆ. ಈ ಅಧ್ಯಯನದ ಪ್ರಕಾರ, ತೀವ್ರ ಕೋವಿಡ್ – 19 ಸೋಂಕಿನಿಂದ ಬಳಲುತ್ತಿರುವ ಜನರು ಶ್ರಮದಾಯಕ ಕೆಲಸವನ್ನು ಮಾಡಬಾರದು. ಅವರು ಸ್ವಲ್ಪ ಸಮಯದವರೆಗೆ ವಿಶ್ರಾಂತಿ ಪಡೆಯಬೇಕು. ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚು ಕಾಲ ವ್ಯಾಯಾಮ, ಓಟ ಮತ್ತು ಭಾರಿ ವ್ಯಾಯಾಮದಿಂದ ದೂರವಿರಿ, ಇದರಿಂದ ಹೃದಯಾಘಾತವನ್ನು ತಪ್ಪಿಸಬಹುದು ಎಂದು ಸಲಹೆ ನೀಡಿದ್ದಾರೆ.

ಗುಜರಾತ್‌ನಲ್ಲಿ ಹೃದಯಾಘಾತದಿಂದ ಸಾವನ್ನಪ್ಪಿದವರಲ್ಲಿ ಖೇಡಾ ಜಿಲ್ಲೆಯ 12ನೇ ತರಗತಿ ವಿದ್ಯಾರ್ಥಿ ವೀರ್ ಶಾ, ಅಹಮದಾಬಾದ್‌ನ ರವಿ ಪಾಂಚಾಲ್ (28) ಮತ್ತು ವಡೋದರದ ಶಂಕರ್ ರಾಣಾ (55) ಸೇರಿದ್ದಾರೆ.

ನವರಾತ್ರಿ ಉತ್ಸವಗಳು ಪ್ರಾರಂಭವಾಗುವ ಮೊದಲು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅಧಿಸೂಚನೆಯ ಮೂಲಕ, ಭಾಗವಹಿಸುವವರಿಗೆ ತಕ್ಷಣದ ನೆರವು ನೀಡಲು ಗರ್ಬಾ ಕಾರ್ಯಕ್ರಮದ ಆಯೋಜಕರು ಸ್ಥಳದಲ್ಲಿ ಆಂಬ್ಯುಲೆನ್ಸ್ ಮತ್ತು ವೈದ್ಯಕೀಯ ತಂಡವನ್ನು ನಿಯೋಜಿಸುವುದನ್ನು ಕಡ್ಡಾಯಗೊಳಿಸಿತ್ತು.

ವಿಪಕ್ಷಗಳ ಸಂಸದರಿಗೆ ಆ್ಯಪಲ್ ಎಚ್ಚರಿಕೆ ಸಂದೇಶ; ತನಿಖೆಗೆ ಆದೇಶಿಸಿದ ಕೇಂದ್ರ

ನವದೆಹಲಿ, ಅ.31– ಸರ್ಕಾರಿ ಪ್ರಾಯೋಜಿತ ದಾಳಿಕೋರರು ತಮ್ಮ ಐಫೋನ್‌ಗಳಿಂದ ಮಾಹಿತಿಯನ್ನು ಕದಿಯಲು ಪ್ರಯತ್ನಿಸುತ್ತಿದ್ದಾರೆ ಎಂದು ಸೂಚಿಸುವ ಎಚ್ಚರಿಕೆ ಸಂದೇಶಗಳನ್ನು ಆ್ಯಪಲ್ ಕಂಪನಿಯಿಂದ ಸ್ವೀಕರಿಸಿರುವ ಬಗ್ಗೆ ವಿಪಕ್ಷಗಳ ಸಂಸದರು ಹೇಳಿದ ನಂತರ ಕೇಂದ್ರಸರ್ಕಾರ ಈ ಬಗ್ಗೆ ತನಿಖೆಗೆ ಆದೇಶಿಸಿದೆ.

ಈ ಕುರಿತು ಟ್ವೀಟ್ ಮಾಡಿರುವ ಐಟಿ ಸಚಿವ ಅಶ್ವಿನಿ ವೈಷ್ಣವ್, ದೇಶದ ಎಲ್ಲಾ ನಾಗರಿಕರ ಗೌಪ್ಯತೆ ಮತ್ತು ಭದ್ರತೆಯನ್ನು ರಕ್ಷಿಸುವಲ್ಲಿ ಸರ್ಕಾರವು ಬದ್ಧವಾಗಿದೆ. ಈ ವಿಚಾರವನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತದೆ ಮತ್ತು ಈ ಎಚ್ಚರಿಕೆ ಸಂದೇಶಗಳಿಗೆ ಸಂಬಂಧಿಸಿದಂತೆ ಪರಿಸ್ಥಿತಿಯನ್ನು ಕೂಲಂಕಷವಾಗಿ ಅರ್ಥಮಾಡಿಕೊಳ್ಳಲು ಮತ್ತು ಪರಿಹರಿಸಲು ತನಿಖೆ ನಡೆಸುತ್ತದೆ ಎಂದು ಹೇಳಿದ್ದಾರೆ.

ರಾಜ್ಯ ಪ್ರಾಯೋಜಿತ ದಾಳಿಗಳ ಬಗ್ಗೆ ಮಾಹಿತಿ ಮತ್ತು ವ್ಯಾಪಕವಾದ ವದಂತಿಗಳ ಬೆನ್ನಲ್ಲೇ, ಆಪಾದಿತ ಆರೋಪಗಳ ಮೇಲಿನ ತನಿಖೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ನಾವು ಆ್ಯಪಲ್ ಕಂಪನಿಯನ್ನು ಕೇಳಿದ್ದೇವೆ ಎಂದು ಸಚಿವರು ತಿಳಿಸಿದ್ದಾರೆ

ಭೋಪಾಲ್‌ನಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ದೇಶದ ಪ್ರಗತಿಯನ್ನು ಸಹಿಸಲಾಗದವರು ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಮತ್ತು ಗೊಂದಲವನ್ನು ಸೃಷ್ಟಿಸುವ ರಾಜಕೀಯದಲ್ಲಿ ತೊಡಗಿದ್ದಾರೆ ಎಂದು ಪ್ರತಿಪಕ್ಷಗಳನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು.

ಆ್ಯಪಲ್ ಎಚ್ಚರಿಕೆ ಸಂದೇಶ ಕಳುಹಿಸಿದ್ದು ಯಾರಿಗೆ: ಸರ್ಕಾರಿ ಪ್ರಾಯೋಜಿತ ದಾಳಿಕೋರರು ನಿಮ್ಮ ಐಫೋನ್‌ಗಳನ್ನು ಹ್ಯಾಕ್ ಮಾಡಬಹುದು ಎಂದು ತಂತ್ರಜ್ಞಾನ ಕಂಪನಿ ಆ್ಯಪಲ್ ಮಂಗಳವಾರ ಪ್ರತಿಪಕ್ಷಗಳ ಐವರು ಸಂಸದರಿಗೆ ಎಚ್ಚರಿಕೆ ಸಂದೇಶ ರವಾನಿಸಿದ್ದು, ಅದನ್ನು ವಿರೋಧ ಪಕ್ಷಗಳು ಸಂಸದರು ತಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ವರದಿಗಳ ಪ್ರಕಾರ, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ, ಶಿವಸೇನೆಯ (ಯುಬಿಟಿ) ಸಂಸದೆ ಪ್ರಿಯಾಂಕಾ ಚತುರ್ವೇದಿ ಮತ್ತು ಎಎಪಿಯ ರಾಘವ್ ಚಡ್ಡಾ, ಕಾಂಗ್ರೆಸ್ ನಾಯಕ ಶಶಿ ತರೂರ್ ಮತ್ತು ಎಐಎಂಐಎಂನ ಅಸಾದುದ್ದೀನ್ ಓವೈಸಿ ಎಚ್ಚರಿಕೆ ಸಂದೇಶಗಳನ್ನು ಸ್ವೀಕರಿಸಿದ್ದಾರೆ.

ಆ್ಯಪಲ್ ಹೇಳಿದ್ದೇನು: ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಆ್ಯಪಲ್, ಇದು ಯಾವುದೇ ನಿರ್ದಿಷ್ಟ ಸರ್ಕಾರಿ ಪ್ರಾಯೋಜಿತ ದಾಳಿ ಎಂದು ಹೇಳಲು ಸಾಧ್ಯವಿಲ್ಲ. ಅಲ್ಲದೆ, ಈ ಎಚ್ಚರಿಕೆ ಸಂದೇಶಗಳನ್ನು ನೀಡಿರುವ ಹಿಂದಿನ ಕಾರಣ ಏನೆಂಬುದರ ಬಗ್ಗೆಯೂ ಮಾಹಿತಿ ನೀಡಲು ಸಾಧ್ಯವಿಲ್ಲ ಎಂದಿದೆ.

ಕೆಲವು ಎಚ್ಚರಿಕೆ ಸಂದೇಶಗಳು ತಪ್ಪು ಮಾಹಿತಿಯೂ ಆಗಿರಬಹುದು ಮತ್ತು ಇನ್ನೂ ಕೆಲವು ದಾಳಿಗಳು ಗೊತ್ತಾಗದೇ ಇರಬಹುದು. ಹೀಗಾಗಿ, ಯಾವುದೇ ನಿರ್ದಿಷ್ಟ ಸರ್ಕಾರಿ ಪ್ರಾಯೋಜಿತ ಹ್ಯಾಕಿಂಗ್ ಯತ್ನ ನಡೆದಿದೆ ಎಂದು ಹೇಳಲು ಸಾಧ್ಯವಿಲ್ಲ. ಅಂತಹ ದಾಳಿಗಳನ್ನು ಪತ್ತೆಹಚ್ಚುವುದು ಗುಪ್ತಚರ ಸಂಕೇತಗಳ ಮೇಲೆ ಅವಲಂಬಿತವಾಗಿದೆ ಎಂದು ಹೇಳಿದೆ.

ಬೆಂಗಳೂರಿನ ಈದ್ಗಾ ಮೈದಾನದಲ್ಲಿ ರಾಜ್ಯೋತ್ಸವ ಆಚರಣೆಗೆ ಹೈಕೋರ್ಟ್ ಷರತ್ತುಬದ್ಧ ಅನುಮತಿ

ಬೆಂಗಳೂರು, ಅ.31– ರಾಜಧಾನಿ ಬೆಂಗಳೂರು ನಗರದ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಚಾಮರಾಜಪೇಟೆ ನಾಗರಿಕರ ಒಕ್ಕೂಟದಿಂದ ನವೆಂಬರ್ 1ರಿಂದ 3 ದಿನಗಳ ಕರ್ನಾಟಕ ರಾಜ್ಯೋತ್ಸವ ಆಚರಣೆಗೆ ಹೈಕೋರ್ಟ್ ಷರತ್ತುಬದ್ಧ ಅನುಮತಿ ಕೊಟ್ಟಿದೆ. ಅಲ್ಲದೆ, ಈದ್ಗಾ ಮೈದಾನ ಬಳಕೆ ಮಾಡಲು ಒಂದು ವೇಳೆ ಕಾನೂನು ಅಡಚಣೆಗಳು ಉಂಟಾದಲ್ಲಿ ಅರ್ಜಿದಾರರ ಒಕ್ಕೂಟದಿಂದ ರಾಜ್ಯೋತ್ಸವ ಆಚರಣೆ ಮಾಡಲು ಜಿಲ್ಲಾಡಳಿತದಿಂದ ಪರ್ಯಾಯ ಮೈದಾನ ಒದಗಿಸಬೇಕು ಎಂದು ಆದೇಶದಲ್ಲಿ ನ್ಯಾಯಪೀಠ ಸ್ಪಷ್ಟ ನಿರ್ದೇಶನ ನೀಡಿದೆ. ಈದ್ಗಾ ಮೈದಾನದಲ್ಲಿ ರಾಜ್ಯೋತ್ಸವ ಆಚರಣೆಗೆ ಅವಕಾಶ ನಿರಾಕರಿಸಿ ಜಿಲ್ಲಾಧಿಕಾರಿ ನೀಡಿದ್ದ ಹಿಂಬರಹ ಪ್ರಶ್ನಿಸಿ ಚಾಮರಾಜಪೇಟೆ ನಾಗರಿಕರ ಒಕ್ಕೂಟ ಹೈಕೋರ್ಟ್ ಮೊರೆ ಹೋಗಿತ್ತು. ಈ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಮತ್ತು ನ್ಯಾ.ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ನ್ಯಾಯಪೀಠ ನಡೆಸಿತು.



ನಟ ಪುನೀತ್ ರಾಜಕುಮಾರ್ 2ನೇ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಮೈಸೂರಿನ ಬೃಂದಾವನ ಬಡಾವಣೆಯ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯನ್ನು ಮೈಸೂರು ಮಹಾನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅವರು ಬ್ಯಾಟ್ ಬೀಸುವ ಮೂಲಕ ಉದ್ಘಾಟಿಸಿದರು. ಈ ವೇಳೆ ಆಯೋಜಕರಾದ ಮಂಜುನಾಥ್, ರಮೇಶ್, ದೀಪಕ್, ಪ್ರದೀಪ್ ಕುಮಾರ್ ಇನ್ನಿತರರಿದ್ದರು

ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಅಲೈಡ್ ಹೆಲ್ತ್ ಸೈನ್ಸ್‌ನ ಪದವೀಧರರ ದಿನಾಚರಣೆ

ನಿರಂತರ ಕಲಿಕೆ ಇಲ್ಲವಾದರೆ ಬೆಳವಣಿಗೆ ಕುಂಠಿತ

ಸಿಡಿಎಸ್‌ಎ ತರಬೇತಿ ವಿಭಾಗದ ಮುಖ್ಯಸ್ಥೆ ಡಾ.ಸುಚೇತಾ ಬ್ಯಾನರ್ಜಿ ಕುರುಂದ್ಕರ್

ಮೈಸೂರು,ಅ.31(ಪಿಎಂ)– ಪರಿಶ್ರಮವೇ ಯಶಸ್ಸಿನ ಗುಟ್ಟು. ಪ್ರತಿದಿನ ಕಲಿಯುವುದೇ ಜ್ಞಾನ. ಕಲಿಯುವುದನ್ನು ನಿಲ್ಲಿಸಿದರೆ ನಮ್ಮ ಬೆಳವಣಿಗೆ ಕುಂಠಿತವಾಗುತ್ತದೆ ಎಂದು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಜೈವಿಕ ತಂತ್ರಜ್ಞಾನ ಇಲಾಖೆಯ ಟ್ರಾನ್ಸ್‌ಲೇಷನಲ್ ಹೆಲ್ತ್ ಸೈನ್ಸ್ ಅಂಡ್ ಟೆಕ್ನಾಲಜಿ ಇನ್ಸ್‌ಟಿಟ್ಯೂಟ್‌ನ ಕ್ಲಿನಿಕಲ್ ಡೆವಲಪ್‌ಮೆಂಟ್ ಸರ್ವೀಸಸ್ ಏಜೆನ್ಸಿಯ (ಸಿಡಿಎಸ್‌ಎ) ತರಬೇತಿ ವಿಭಾಗದ ಮುಖ್ಯಸ್ಥೆ ಡಾ.ಸುಚೇತಾ ಬ್ಯಾನರ್ಜಿ ಕುರುಂದ್ಕರ್ ಹೇಳಿದರು.

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರೀಸರ್ಚ್ (ಜೆಎಸ್‌ಎಸ್ ಎಹೆಚ್‌ಇಆರ್) ಮತ್ತು ಜೆಎಸ್‌ಎಸ್ ವೈದ್ಯಕೀಯ ಕಾಲೇಜು ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಕಾಲೇಜಿನ ಅಲೈಡ್ ಹೆಲ್ತ್ ಸೈನ್ಸ್‌ನ (ವೈದ್ಯಕೀಯ ವಿಜ್ಞಾನ ಸಂಬಂಧಿತ ಕೋರ್ಸ್‌ಗಳು)



ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪದವೀಧರರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಯಶಸ್ಸಿಗೆ ಯಾವುದೇ ಅಡ್ಡ ದಾರಿಗಳಿಲ್ಲ. ಅದಕ್ಕೆ ಯಾವುದೇ ರಹಸ್ಯ ಸೂತ್ರಗಳೂ ಇಲ್ಲ. ಅದಕ್ಕೆ ಬೇಕಿರುವುದು ಪರಿಶ್ರಮ ಮಾತ್ರ. ಎಂದಿಗೂ ಬೀಳದೇ ಇರುವುದು ದೊಡ್ಡ ಸಾಧನೆಯಲ್ಲ. ಬದಲಿಗೆ ಬಿದ್ದ ನಂತರ ಮತ್ತೆ ಎದ್ದು ನಿಲ್ಲುವುದು ದೊಡ್ಡ ಸಾಧನೆಯಾಗಿದೆ. ವಿದ್ಯಾರ್ಥಿಗಳು ಈ ಸತ್ಯ ಅರಿಯಬೇಕು. ಪ್ರತಿಯೊಬ್ಬ ವ್ಯಕ್ತಿಯೂ ನಿರ್ಭೀತಿಯಿಂದ ಬದುಕುವುದನ್ನು ಕಲಿಯಬೇಕು. ಕಷ್ಟಕರ ಕೆಲಸಗಳನ್ನು ಸುಲಭವಾಗಿ ಮಾಡುವ ಜಾಣ್ಮೆ ಅರಿಯಬೇಕು. ಸಾವಿರ ಮೈಲುಗಳ ಪ್ರಯಾಣವಾದರೂ ಅದು ಆರಂಭಗೊಳ್ಳುವುದು ಮೊದಲ ಒಂದು ಹೆಜ್ಜೆಯಿಂದಲೇ ಎಂಬ ಧನಾತ್ಮಕ ಚಿಂತನೆ ನಮ್ಮಲ್ಲಿರಬೇಕು ಎಂದು ತಿಳಿಸಿದರು.

ಮನಸ್ಸು ಒಂದು ಉದ್ಯಾನದಂತೆ. ಅಲ್ಲಿ ನಾವು ಏನನ್ನೂ ಬಿತ್ತುತ್ತೇವೆ ಎಂಬುದರ ಮೇಲೆ ಎಲ್ಲವೂ ಅವಲಂಬಿತವಾಗಿದೆ. ಅಲ್ಲಿ ಸುಂದರ ಹೂಗಳನ್ನಾದರೂ ಬೆಳೆಯಬಹುದು ಅಥವಾ ಕಳೆ ಗಿಡಗಳು ಬೆಳೆಯಲೂ ಬಿಡಬಹುದು. ಎಲ್ಲದಕ್ಕೂ ನಾವೇ ಕಾರಣಕರ್ತರು. ಆಸಕ್ತಿದಾಯಕ ಕ್ಷೇತ್ರದಲ್ಲಿ ವೃತ್ತಿ ಜೀವನ ಆರಂಭಿಸಬೇಕು. ಎಂದಿಗೂ ಹಣದ ಹಿಂದೆ ಓಡಬಾರದು. ಬದಲಿಗೆ ನಮ್ಮ ಹಿಂದೆ ಹಣ ಬರುವಂತಿರಬೇಕು. ಎಷ್ಟೇ ಶ್ರೀಮಂತಿಕೆ ಬಂದರೂ ನಮ್ರತೆಯಿಂದ ಬದುಕಬೇಕು. ಜೀವನದಲ್ಲಿ ಎಷ್ಟೇ ಕಷ್ಟಗಳು ಎದುರಾದರೂ ಧನಾತ್ಮಕ ಆಲೋಚನೆ ಹೊಂದಬೇಕು ಎಂದು ಹೇಳಿದರು.

ಇದೇ ವೇಳೆ 13 ಬಿಎಸ್‌ಸಿ, 9 ಎಂಎಸ್‌ಸಿ ಪದವಿ ಕೋರ್ಸ್‌ಗಳು ಹಾಗೂ ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ (ಎಂಪಿಹೆಚ್) ಪದವಿ ಕೋರ್ಸ್‌ನ 313 ಮಂದಿ ಪದವಿ ಸ್ವೀಕರಿಸಿದರು. ಈ ಪೈಕಿ ಉನ್ನತ ಶ್ರೇಣಿ ಗಳಿಸಿದ ಪಿಜಿಯ ಡಾ.ಎಸ್.ಸಾಯಿಪ್ರಿಯ, ಸಿ.ಎಂ.ಹರ್ಷ, ಎನ್.ಮೋನಿಕಾ, ಡಾ.ವಿನು ಮರಿಯಾ ರೋಸ್, ಭಾತು ನಿಮಿಷಾ ದೇವ್ ಶಿಭಾಯಿ, ಬರ್ಷಾ ನಮಸುದ್ರ, ಸುಶಾಂತ ದೇಬನಾಥ್, ಎಂ.ತಸ್ಮಿಯಾ ಅರ್ಬೀನ್, ಯುಜಿಯ ಡಿನೋ ಎಲ್ದೋಸ್, ಪಾಯಲ್ ಭಟ್ಟಿ, ಡಿ.ಆರ್.ಅಮೃತಾ, ಮದಿಹಾ ಫಾತಿಮಾ, ಕೆ.ಎಸ್.ದೀಪಿಕಾ, ಎಂ.ಆರ್.ಲಾಲಿತ್ಯ, ಗಾಯತ್ರಿ ಪ್ರಕಾಶ್, ಅತುಲ್ಯ ಸೂಸನ್, ನಾನೆಟ್, ಆಶಿಕಾ ಎಸ್.ದಿನೇಶ್, ಎಂ.ಎಂ.ಶ್ರೀಲಕ್ಷ್ಮಿ, ಎನ್.ಹರಿಪ್ರಿಯಾ ಅವರಿಗೆ ಪದಕಗಳನ್ನು ಪ್ರದಾನ ಮಾಡಲಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಜ್ಯ ಸರ್ಕಾರದ ವೈದ್ಯಕೀಯ ಶಿಕ್ಷಣ ನಿರ್ದೇಶಕಿ ಡಾ.ಬಿ.ಎಲ್.ಸುಜಾತ ರಾಥೋಡ್ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಜೆಎಸ್‌ಎಸ್ ಎಹೆಚ್‌ಇಆರ್‌ನ ಉಪಕುಲಪತಿ ಡಾ.ಸುರೀಂದರ್ ಸಿಂಗ್, ಕುಲಸಚಿವ ಡಾ.ಬಿ.ಮಂಜುನಾಥ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ ಮತ್ತಿತರರು ಹಾಜರಿದ್ದರು.

ಮೈಸೂರಲ್ಲಿ ರಾಜಾರೋಷವಾಗಿ ಮರಗಳ ಹನನ; ಜನರ ಬೇಸರ

ಮೈಸೂರು,ಅ.31(ಎಸ್‌ಪಿಎನ್)– ಉದ್ಯಾನವನಗಳ ನಿರ್ವಹಣೆ ಹಾಗೂ ಮರಗಳ ಹನನ ತಡೆಗಟ್ಟುವಲ್ಲಿ ದಿವ್ಯ ನಿರ್ಲಕ್ಷ್ಯವಹಿಸಿರುವ ನಗರಪಾಲಿಕೆ, ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕುವೆಂಪುನಗರದ ವಾಯುವಿಹಾರಿಗಳು ಮಂಗಳವಾರ ಲವ–ಕುಶ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.



ಮೈಸೂರು ಕುವೆಂಪುನಗರದ ಲವ–ಕುಶ ಉದ್ಯಾನವನದಲ್ಲಿನ ಬೃಹತ್ ಮರವೊಂದನ್ನು ಕ್ಷುಲ್ಲಕ ಕಾರಣಕ್ಕೆ ಕಡಿದು ಹಾಕಿದ್ದಾರೆ. ಈ ಕುರಿತು ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ತಮಗೂ ಇದಕ್ಕೂ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಈಗಾದರೆ, ನಗರ ಉದ್ಯಾನವನಗಳ ರಕ್ಷಣೆ ಹಾಗೂ ಮರಗಳ ರಕ್ಷಣೆ ಹೇಗೆ ಎಂದು ವಾಯುವಿಹಾರಿಗಳು ಪ್ರಶ್ನಿಸಿದರು.

ಇತ್ತೀಚಿನ ದಿನಗಳಲ್ಲಿ ಲವ–ಕುಶ ಪಾರ್ಕ್‌ನಲ್ಲಿ ಹಿರಿಯ ನಾಗರಿಕರು ಒಂದೆಡೆ ಕುಳಿತು ಧ್ಯಾನ, ಸರಳ ವ್ಯಾಯಾಮ ಮಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪಾರ್ಕ್‌ನಲ್ಲಿ ಕುಳಿತುಕೊಳ್ಳುವ ಆಸನಗಳಲ್ಲಿ ಕೆಲವು ಮುರಿದುಹೋಗಿವೆ. ಉಳಿದ ಕೆಲವು ಆಸನಗಳನ್ನು ಒಟ್ಟಿಗೆ ಹಾಕಿ, ಹರಟೆ ಹೊಡೆಯುವ ಜಾಗದಂತೆ ಪರಿವರ್ತಿಸಿದ್ದಾರೆ. ಅಲ್ಲದೆ, ಈ ಪಾರ್ಕ್‌ನಲ್ಲಿ ಫೌಂಟೇನ್ ಅಗತ್ಯವಿಲ್ಲದಿದ್ದರೂ ನಿರ್ಮಿಸಿ, ಸಾರ್ವಜನಿಕ ತೆರಿಗೆ ಹಣ ವ್ಯರ್ಥ ಮಾಡಿದ್ದಾರೆ ಎಂದು ಆರೋಪಿಸಿದರು.

ಬೆಳಗ್ಗೆ 10 ಗಂಟೆ ನಂತರ ಕಾಲೇಜು ಯುವಕ–ಯುವತಿಯರು ಅಧ್ಯಯನ ನೆಪದಲ್ಲಿ ಪಾರ್ಕ್‌ನಲ್ಲಿ ಕುಳಿತು ಸಾರ್ವಜನಿಕವಾಗಿ ಅಸಭ್ಯ ರೀತಿ ವರ್ತಿಸುತ್ತಿರುತ್ತಾರೆ. ಇದನ್ನು ತಡೆಗಟ್ಟುವಂತೆ ಅನೇಕ ಬಾರಿ ಪಾಲಿಕೆ ಅಧಿಕಾರಿಗಳು, ಸಮೀಪದ ಪೊಲೀಸ್ ಠಾಣೆಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಉದ್ಯಾನಗಳ ರಕ್ಷಣೆಗೆ ಸಾರ್ವಜನಿಕರಿಂದ ತೆರಿಗೆ ಪಡೆಯುತ್ತಿರುವ ನಗರ ಪಾಲಿಕೆ, ಉದ್ಯಾನವನ ರಕ್ಷಣೆ ಮತ್ತು ನಿರ್ವಹಣೆಗೆ ಆದ್ಯತೆ ನೀಡುತ್ತಿಲ್ಲ. ಇನ್ನು ಮುಂದಾದರೂ ಹಿರಿಯ ನಾಗರಿಕರು, ಮಹಿಳೆಯರು ಸೇರಿದಂತೆ ಎಲ್ಲರೂ ಉದ್ಯಾನವನ ಬಳಕೆಗೆ ಅನುಕೂಲವಾಗುವ ರೀತಿ ಅಭಿವೃದ್ಧಿಪಡಿಸುವಂತೆ ಪಾಲಿಕೆ ಅಧಿಕಾರಿಗಳಲ್ಲಿ ಮನವಿ ಮಾಡಿದರು. ಈ ವೇಳೆ ಹಿರಿಯ ನಾಗರಿಕ ರಾದ ರಮೇಶ್, ಜಿ.ಡಿ.ಗಿರೀಶ್, ಪ್ರಸಾದ್, ಡಾ. ರಾಜಶೇಖರ್ ಸೇರಿದಂತೆ ಇತರರಿದ್ದರು.

ಗೋಕುಲಂನಲ್ಲಿ ಹೊಂಗೆಮರಗಳ ಹನನ

ಗೋಕುಲಂ 9ನೇ ಕ್ರಾಸ್‌ನಲ್ಲಿ ಸಮೃದ್ಧವಾಗಿ ಬೆಳೆದು ನೂರಾರು ಜನರಿಗೆ ನೆರಳು ನೀಡಿದ ಮೂರು ಬೃಹತ್ ಹೊಂಗೆ ಮರಗಳನ್ನು ಕಡಿದುರುಳಿಸಲಾಗಿದೆ. ಮೈಸೂರು ನಗರ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆ ನಿಷ್ಕ್ರಿಯವಾಗಿರುವುದಕ್ಕೆ ಇದೊಂದು ಜ್ವಲಂತ ಸಾಕ್ಷಿ. ಬಸ್ ಪ್ರಯಾಣಿಕರ ತಂಗುದಾಣಕ್ಕೆ ಹೊಂದಿಕೊಂಡಂತಿದ್ದ ಈ ಹೊಂಗೆ ಮರಗಳು ಅದೆಷ್ಟೋ ಜನರಿಗೆ ನೆರಳಾಗಿದ್ದವು. ಆಟೋ ಚಾಲಕರಿಗೆ, ಪಾದಚಾರಿಗಳಿಗೆ ಆಶ್ರಯವಾಗಿದ್ದವು. ಆದರೆ, ಇವುಗಳನ್ನು ಈಗ ಬುಡ ಸಮೇತ ಕಡಿದು, ಪಕ್ಕದ ಖಾಲಿ ನಿವೇಶನದಲ್ಲಿ ಹಾಕಲಾಗಿದೆ. ಈಗಲಾದರೂ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕಿದೆ. ಇಲ್ಲದಿದ್ದರೆ ಅರಣ್ಯ ಸಚಿವರ ಅರಣ್ಯ ಸಂರಕ್ಷಣೆ ಪೊಳ್ಳು ಭರವಸೆ ಆಗಲಿದೆ.

ಲವ–ಕುಶ ಪಾರ್ಕ್‌ನ ಸುತ್ತಲೂ ಕಬ್ಬಿಣದ ತಡೆಗೋಡೆ ಕಾಮಗಾರಿ ನಡೆಯುತ್ತಿದೆ. ಆದರೆ, ಪಾರ್ಕ್‌ನ ಸೌಂದರ್ಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಇಲ್ಲಿ ಯಾವುದೇ ವಿವಾದ ಇಲ್ಲ. ಕೆಲವರು ಸುಮ್ಮನೆ ವಿವಾದ ಸೃಷ್ಟಿಸುತ್ತಿದ್ದಾರೆ. ಟೊಳ್ಳು ಬಿದ್ದಿದ್ದ ಮರವೊಂದರ ರೆಂಬೆಯನ್ನು ಕಡಿಯಲಾಗಿದೆ ಅಷ್ಟೆ

– **ರಮೇಶ್,** ಸದಸ್ಯರು, ಮೈಸೂರು ನಗರಪಾಲಿಕೆ



ಬಾಂಗ್ಲಾ ವಿರುದ್ಧ ಪಾಕಿಸ್ತಾನಕ್ಕೆ ಜಯ



ಕೋಲ್ಕತ್ತಾ, ಅ.31– ಸತತ ಸೋಲಿನಿಂದ ಕಂಗೆಟ್ಟಿದ್ದ ಪಾಕಿಸ್ತಾನ ಬಾಂಗ್ಲಾದೇಶದ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಗೆಲುವಿನ ಲಯಕ್ಕೆ ಮರಳಿ ವಿಶ್ವಕಪ್ ಅಗ್ರ ನಾಲ್ಕರ ಸಣ್ಣ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ. ಮತ್ತೊಂದೆಡೆ ಬಾಂಗ್ಲಾದೇಶ ಟೂರ್ನಿಯಿಂದ ಹೊರಬಿದ್ದಿದೆ.

ಇಲ್ಲಿನ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ 45.1 ಓವರ್‌ಗಳಲ್ಲಿ 204ರನ್‌ಗಳಿಗೆ ಆಲೌಟಾಯಿತು. ತಂಡದ ಮೊತ್ತ 23 ರನ್ ಆಗುವಷ್ಟರಲ್ಲೇ ಬಾಂಗ್ಲಾದೇಶ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ನಾಲ್ಕನೇ ವಿಕೆಟ್‌ಗೆ ಜೊತೆಯಾದ ಲಿಟಾನ್ ದಾಸ್ ಹಾಗೂ ಮಹಮುದ್‌ವುಲ್ಲಾ 79 ರನ್ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 45ರನ್ ಗಳಿಸಿದ್ದ ಲಿಟಾನ್ ದಾಸ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಮಹಮುದ್‌ವುಲ್ಲಾ 1 ಸಿಕ್ಸರ್, 6 ಬೌಂಡರಿ ಒಳಗೊಂಡ 56 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಶಕೀಬ್ ಅಲ್ ಹಸನ್ 43, ಮೆಹೆದಿ ಹಸನ್ ಮಿರಾಜ್ 25 ರನ್ ಗಳಿಸಿದರು. ಪಾಕ್ ಪರ ಶಾಹೀನ್ ಶಾ ಅಫ್ರಿದಿ, ಮೊಹಮ್ಮದ್ ವಸೀಮ್ ತಲಾ 3, ಹ್ಯಾರಿಸ್ ರೌಫ್ 2, ಇಫ್ತಿಕಾರ್ ಅಹಮ್ಮದ್ ಹಾಗೂ ಉಸಾಮ ಮೀರ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.

ಬಾಂಗ್ಲಾದೇಶ ನೀಡಿದ 205 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಾಕಿಸ್ತಾನ 32.3 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗೆಲುವಿನ ಗುರಿ ತಲುಪಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಅಬ್ದುಲ್ಲಾ ಶಫಿಕ್ ಮತ್ತು ಫಖರ್ ಜಮಾನ್ ಮೊದಲ ವಿಕೆಟ್‌ಗೆ 128 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ವೇಳೆ 68 ಗಳಿಸಿದ್ದ ಅಬ್ದುಲ್ಲಾ ಶಫಿಕ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಫಖರ್ ಜಮಾನ್ 81 ರನ್ ಸಿಡಿಸಿ ನಿರ್ಗಮಿಸಿದರು. ಉಳಿದಂತೆ ನಾಯಕ ಬಾಬರ್ ಅಜಂ 9, ಮೊಹಮ್ಮದ್ ರಿಜ್ವಾನ್ 26, ಇಫ್ತಿಕಾರ್ ಅಹಮ್ಮದ್ 17 ರನ್ ಗಳಿಸಿದರು. ಬಾಂಗ್ಲಾದೇಶ ಪರ ಮೆಹಿದಿ ಹಸನ್ ಮಿರಾಜ್ 3 ವಿಕೆಟ್ ಪಡೆದರು. ಫಖರ್ ಜಮಾನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ನೊಂದವರ ಮನದಲ್ಲಿ ಡಾ.ಅಂಬೇಡ್ಕರ್ ಸದಾ ಇರುತ್ತಾರೆ

● ಮಹಿಳಾ ಬರಹಗಾರ್ತಿ ಡಾ.ಹೆಚ್.ಎಸ್.ಅನುಪಮಾ ಅಭಿಮತ ● ಅಂಬೇಡ್ಕರ್ ಅವರನ್ನು ಶ್ರೇಷ್ಠ ಮಾನವನಾಗಿ ಪರಿಗಣಿಸಿ; ಗೌರವಿಸಿ

ಮೈಸೂರು,ಅ.31(ಎಸ್‌ಪಿಎನ್)– ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ದೇವರು ಮಾಡುವುದು ಸುಲಭ. ಆದರೆ, ನಂತರದ ಪರಿಣಾಮವನ್ನು ಎದುರಿಸುವುದು ಕಷ್ಟಸಾಧ್ಯ ಎಂದು ಹಿರಿಯ ವೈದ್ಯೆ ಹಾಗೂ ಮಹಿಳಾ ಬರಹಗಾರ್ತಿ ಡಾ.ಹೆಚ್.ಎಸ್. ಅನುಪಮಾ ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜ ಕಾಲೇಜು ಆವರಣದ ಮಹಾರಾಜ ಶತಮಾನೋತ್ಸವ ಭವನದಲ್ಲಿ ಬಿಇಎಂಎಲ್ ಪ.ಜಾ–ಪ.ಪಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಬಂಡವಾಳಶಾಹಿ, ವೈದಿಕಶಾಹಿ ಇವೆರಡು ಪ್ರಜಾಪ್ರಭುತ್ವದ ಸಮಾನತೆಯ ವಿರೋಧಿಗಳು. ಬಂಡವಾಳಶಾಹಿಗಳು, ವ್ಯಾಪಾರದಲ್ಲಿ ಎಷ್ಟೇ ಲಾಭ ಬಂದರೂ ಮತ್ತಷ್ಟು ನನಗೆ, ನನ್ನ ಕಂಪನಿಗೆ ಬರಬೇಕು ಎನ್ನುವ ದುರಾಸೆ ಇರುತ್ತದೆ. ಅದೇ ರೀತಿ ವೈದಿಕಶಾಹಿಗಳು ನಾನೇ ಶ್ರೇಷ್ಠ ಎನ್ನುವ ಭಾವನೆ ಇರುವುದರಿಂದ ಸಮಾಜದಲ್ಲಿ ಸಮಾನತೆ ಕಾಣುವುದು ಕಷ್ಟ ಎಂದು ತಿಳಿಸಿದರು.

75 ವರ್ಷಗಳ ಹಿಂದೆ ಈ ದೇಶದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕರು ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ವಿವಿಧ ಭಾಷೆ, ವೈವಿಧ್ಯಮಯ ಸಂಸ್ಕೃತಿಯನ್ನು ಸಾಮೂಹಿಕ ನಾಯಕತ್ವ (ಸಂವಿಧಾನ)ದ ಮೂಲಕ ದೇಶವನ್ನು ಪ್ರಗತಿಯತ್ತ ಸಾಗುವಂತೆ ಮಾಡುವಲ್ಲಿ



ಡಾ.ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆ ಅಪಾರ ಎಂದರು.

ಶೋಷಣೆ, ಅಸಮಾನತೆ, ಸರ್ವಾಧಿಕಾರ, ಬಂಡವಾಳಶಾಹಿ ದರ್ಪದಿಂದ ನೊಂದವರ ಮನದಲ್ಲಿ ಸದಾ ಡಾ.ಬಿ.ಆರ್.ಅಂಬೇಡ್ಕರ್ ಇದ್ದೇ ಇರುತ್ತಾರೆ. ಇದನ್ನು ಅರಿತ ಅಂಬೇಡ್ಕರ್ ಅದನ್ನು ಈ ನೆಲದ ಸಂಸ್ಕೃತಿಗೆ ಒಪ್ಪುವಂತೆ 2 ವರ್ಷ, 11 ತಿಂಗಳು, 17 ದಿನಗಳು ರಚಿಸಿ, ನಮಗೆ ಶ್ರೇಷ್ಠ ಸಂವಿಧಾನ ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಂತಹ ಮಹಾನ್ ವ್ಯಕ್ತಿಯನ್ನು ನೆನೆಯುತ್ತಿರುವುದು ಸಂತೋಷದ ಸಂಗತಿ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ರಾಮ, ಕೃಷ್ಣನಂತೆ ದೇವರು ಮಾಡುವುದು ಸುಲಭ. ನಂತರ ಅವರ ಧ್ಯೇಯ ಏನಾಗುತ್ತವೆ ಎಂದು ನಾನು ಹೇಳಬೇಕಾಗಿಲ್ಲ. ಪ್ರತ್ಯಕ್ಷವಾಗಿ ಕಂಡಿದ್ದೇವೆ. ಹಾಗಾಗಿ ಅವರನ್ನು ಶ್ರೇಷ್ಠ ಮಾನವರಂತೆ ಕಂಡು ಅವರ ವಿಚಾರಗಳ ಮೂಲಕ ವಿಶೇಷ ಗೌರವ ಸಲ್ಲಿಸಿದರೆ, ಅವರನ್ನು ನಿತ್ಯ ಗೌರವಿಸಿದಂತೆ ಎಂದರು.

ಸ್ವಾತಂತ್ರ್ಯ ಪೂರ್ವದ ರಾಜರ ಆಳ್ವಿಕೆಯಲ್ಲಿ ರಾಜರ ಮಾತೇ ಆದೇಶವಾಗಿರುತ್ತಿತ್ತು. ಪ್ರಸ್ತುತ ನಾವೇ ಒಪ್ಪಿಕೊಂಡಿರುವ ಸಂವಿಧಾನದಡಿ ಚುನಾಯಿತ ಸರ್ಕಾರ ಸ್ಥಾಪಿಸಿ, ಜೀವನ ರೂಪಿಸಿಕೊಂಡಿದ್ದೇವೆ. ಆದರೂ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಬಂದಿಲ್ಲದಿರುವುದು ಬೇಸರದ ಸಂಗತಿ. ಈಗಿನ ಪ್ರಜಾಪ್ರಭುತ್ವದಲ್ಲಿ ಭಕ್ತಿ, ಹೊಗಳಿಕೆಯಿಂದ ರಚನೆಯಾದ ಸರ್ಕಾರ ಬಂದಿದೆ. ಅಂತಹ ಸರ್ಕಾರ, ಸರ್ವಾಧಿಕಾರಿ ಆಡಳಿತ ಸ್ಥಾಪಿಸುತ್ತದೆ ಎಂಬುದಕ್ಕೆ ಪ್ರತ್ಯಕ್ಷ ಕಂಡಿದ್ದೇವೆ ಎಂದರು.

ಅಂಬೇಡ್ಕರ್ ಅವರ ಬದುಕು–ಬರಹಗಳನ್ನು ಪೂರ್ತಿ ಅಧ್ಯಯನ ಮಾಡಿದರೆ, ಅವರೊಬ್ಬ ದೊಡ್ಡ ಆರ್ಥಿಕ ತಜ್ಞ ಎಂಬುದು ತಿಳಿಯುತ್ತದೆ. ಅಲ್ಲದೆ, ಆರ್‌ಬಿಐ ಸ್ಥಾಪನೆಗೆ ಹೆಚ್ಚಿನ ಆದ್ಯತೆ ನೀಡಿದ್ದ ಪ್ರಸಂಗವನ್ನು ವಿವರಿಸಿದರು. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ನೆಹರು ನೇತೃತ್ವದಲ್ಲಿ ಸಮಾಜವಾದಿ ಹಿನ್ನೆಲೆಯ ಪ್ರಜಾಪ್ರಭುತ್ವ ಸರ್ಕಾರ ಬಂತು. ಆಗ ಬಿಇಎಂಎಲ್, ಹೆಚ್‌ಎಎಲ್, ಇಸ್ರೋ ಸೇರಿದಂತೆ ಅನೇಕ ಸಾರ್ವಜನಿಕ ಉದ್ಯಮ ವಲಯ ಸ್ಥಾಪಿತವಾದವು. ಇವು ಭಾರತ ಆರ್ಥಿಕತೆಯ ನವರತ್ನದಂತೆ ತಮ್ಮ ತಮ್ಮ ಕ್ಷೇತ್ರದಲ್ಲಿ ಕೊಡುಗೆ ನೀಡಿದವು. ಅದರಲ್ಲಿ ಬಿಇಎಂಎಲ್ ಸಂಸ್ಥೆಯ ಕೊಡುಗೆ ದೊಡ್ಡದು ಎಂದರು.

ಮುಂದುವರೆದು 1980ರ ದಶಕದಲ್ಲಿ ಸಾರ್ವಜನಿಕ ಉದ್ಯಮಗಳು ಬಿಳಿಯಾನೆಯಂತೆ ಇಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂಬಂತೆ ಸಾರ್ವಜನಿಕವಾಗಿ ಬಿಂಬಿಸಿ, ಸಾರ್ವಜನಿಕ ಉದ್ಯಮವನ್ನು ಖಾಸಗಿಯವರಿಗೆ ಒಪ್ಪಿಸುವ ಪ್ರವೃತ್ತಿ ಬೆಳೆದು, ಅದಕ್ಕೊಂದು ಸಚಿವಾಲಯವನ್ನೇ ಸ್ಥಾಪಿಸಲಾಯಿತು. ಇದು ಪ್ರಜಾಪ್ರಭುತ್ವಕ್ಕೆ ದೊಡ್ಡ ಹಿನ್ನಡೆ ಎಂದೇ ನಾನು ಭಾವಿಸುತ್ತೇನೆ. ಅಲ್ಲದೆ, 1994ರ ನಂತರ ಭಾರತದ ಆರ್ಥಿಕತೆ, ಸಮಾನತೆಯ ಬೆನ್ನೆಲುಬು ಆಗಿದ್ದ ಸಾರ್ವಜನಿಕ ಉದ್ಯಮಗಳು ಬಂಡವಾಳಶಾಹಿಗಳ ಪಾಲಾದ ನಂತರ ಪ್ರಜಾಪ್ರಭುತ್ವ ಯಾವ ಕಡೆ ಸಾಗುತ್ತಿದೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವೇದಿಕೆಯಲ್ಲಿ ಬಿಇಎಂಎಲ್ ನಿರ್ದೇಶಕ (ಸೇನಾ ವ್ಯವಹಾರ) ಅಜಿತ್ ಕುಮಾರ್ ಶ್ರೀವತ್ಸ, ಬಿಇಎಂಎಲ್(ಆರ್ಥಿಕ ವಿಭಾಗ) ನಿರ್ದೇಶಕ ಅನಿಲ್ ಜೆರತ್, ಚೀಫ್ ಜನರಲ್ ಮ್ಯಾನೇಜರ್ ಎ.ಎಸ್.ತಮಿಳು ಸೆಲ್ವನ್, ಹಿರಿಯ ಅಧಿಕಾರಿ ಆರ್.ನಾಗರಾಜ್, ಪ.ಜಾ–ಪ.ಪಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಘಟಕದ ಅಧ್ಯಕ್ಷ ಗೋವಿಂದ ರೆಡ್ಡಿ, ಬಿಇಎಂಇಜಿ ಜಂಟಿ ಕಾರ್ಯದರ್ಶಿ ಎಸ್.ಜಿ.ಮಾದೇಗೌಡ, ಸಂಘದ ಪದಾಧಿಕಾರಿಗಳಾದ ಎ.ಅಂಬಿ ಕುಮಾರ್ ಬಾಬು, ಕೋದಂಡರಾಮ, ಸಿ.ಜಗನ್ನಾಥ್, ಸಿ.ಚೆಲುವರಾಜು, ಚಿಕ್ಕಬಸವಯ್ಯ, ದೊರೆಸ್ವಾಮಿ, ಪಿ.ಕೆಂಪರಾಜು, ಜಿ.ಪ್ರಜ್ವಲ್ ಕುಮಾರ್, ಎಂ.ವಿ.ದಯಾನಂದ ಬಾಬು, ಎಸ್.ಸಿದ್ದಣ್ಣ ಉಪಸ್ಥಿತರಿದ್ದರು.

ಬಿಇಎಂಎಲ್ ಸಾರ್ವಜನಿಕ ಉದ್ಯಮವಾಗಿದ್ದು, ಇಲ್ಲಿ ಅಧಿಕಾರಿಗಳು, ನೌಕರರು ಒಂದು ಕುಟುಂಬವಾಗಿ ಕೆಲಸ ಮಾಡುತ್ತಿರುವುದರಿಂದ ಯಶಸ್ವಿ ಉದ್ಯಮವಾಗಿ ಬೆಳೆಯಲು ಸಾಧ್ಯವಾಗಿದೆ. ಅಲ್ಲದೆ, ನಮ್ಮ ದೇಶಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಡಾ.ಬಿ. ಆರ್.ಅಂಬೇಡ್ಕರ್ ಅವರ ಆದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಿ, ದೇಶಕ್ಕೆ ಕೀರ್ತಿ ತರಬೇಕು. ಅಲ್ಲದೆ, ಸಮಾಜದಲ್ಲಿನ ಅಸಮಾನತೆ ತೊರೆದು, ಸಮಾನತೆಯನ್ನು ಸ್ಥಾಪಿಸಲು ಪ್ರತಿಯೊಬ್ಬರು ಶ್ರಮಿಸಬೇಕು.

– **ಸಂತನುರಾಯ್,** ಎಂ.ಡಿ, ಬಿಇಎಂಎಲ್,

ಮೈಸೂರು ಮಿತ್ರ

ಬುಧವಾರ 1 ನವೆಂಬರ್ 2023



ಚಾ.ನಗರ ಲೋಕಸಭೆಯಿಂದ ಸ್ಪರ್ಧಿಸಲು ಅವಕಾಶ

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ವಿಶ್ವಾಸ



ತಿ.ನರಸೀಪುರ, ಅ.31–ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಪ್ರಬಲ ಆಕಾಂಕ್ಷಿಯಾಗಿದ್ದು, ಎರಡು ಬಾರಿ ಟಿಕೆಟ್ ವಂಚಿತಳಾಗಿರುವ ನನಗೆ ಈ ಬಾರಿ ಹೈಕಮಾಂಡ್ ಅವಕಾಶ ನೀಡಲಿದೆ ಎಂದು ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣ ಸಮೀಪದ ತಿರುಮಕೂಡಲಿನಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಕಾಂಗ್ರೆಸ್ ನಿಷ್ಠಾವಂತ ಕಾರ್ಯಕರ್ತೆಯಾಗಿ ಅನೇಕ ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಕೆಪಿಸಿಸಿ ಮಹಿಳಾ ಅಧ್ಯಕ್ಷೆಯಾಗಿ ಹಾಗೂ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜನಗರ, ಕೊಳ್ಳೇಗಾಲ, ನಂಜನಗೂಡು ಕ್ಷೇತ್ರಗಳಲ್ಲಿ ಉಸ್ತುವಾರಿ ಯಾಗಿ ಕಾರ್ಯನಿರ್ವಹಿಸಿದ್ದೇನೆ. ಎರಡು ಬಾರಿ ಜಿಲ್ಲಾ ಪಂಚಾಯಿತಿ ಸದಸ್ಯೆ ಹಾಗೂ ಅಧ್ಯಕ್ಷೆಯಾಗಿ ಜನಪರ ಸೇವೆ ಸಲ್ಲಿಸಿದ್ದೇನೆ. ಈ ಎಲ್ಲಾ ಹಿನ್ನೆಲೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಸ್ಪರ್ಧಿಸಲು ಬಯಸಿದ್ದೇನೆ. ಈ ಬಗ್ಗೆ ಪಕ್ಷದ ವರಿಷ್ಠರಿಗೂ ಮನವಿ ಮಾಡಿದ್ದೇನೆ. ಅಂತಿಮವಾಗಿ ಪಕ್ಷ ಯಾರಿಗೆ ಅವಕಾಶ ನೀಡುತ್ತದೋ ಅವರೊಂದಿಗೆ ಕೆಲಸ ಮಾಡುವುದಾಗಿ ತಿಳಿಸಿದರು.

ಗೆಲ್ಲುವ ಅವಕಾಶ ಇರುವವರಿಗೆ ಟಿಕೆಟ್: ಎರಡು ಬಾರಿ ಜಿಪಂ ಅಧ್ಯಕ್ಷೆಯಾಗಿದ್ದ ನನಗೆ ಅಸೆಂಬ್ಲಿಗೆ ಹೋಗಲು ಅವಕಾಶ ಸಿಗಲಿಲ್ಲ. ಅದಕ್ಕೆ ಕಾರಣ ಹುಡುಕುತ್ತಾ ಕೂರದೇ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡೆ. 2018 ಹಾಗೂ 2023ರಲ್ಲಿ ಪಕ್ಷದ ಟಿಕೆಟ್ ದೊರಕಲಿಲ್ಲ. ಹಾಗಾಗಿ ಈ ಬಾರಿ ಲೋಕಸಭಾ ಕ್ಷೇತ್ರಕ್ಕೆ ನಾನು ಪಕ್ಷದ ಪ್ರಬಲ ಆಕಾಂಕ್ಷಿಯಾಗಿದ್ದೇನೆ. ಈ ವಿಷಯವನ್ನು ಪಕ್ಷದ ನಾಯಕರಿಗೆ ತಿಳಿಸಿದ್ದೇನೆ. ವರಿಷ್ಠರ ಸರ್ವೇಯಲ್ಲಿ ಯಾರ ಹೆಸರು ಬರುತ್ತದೋ, ಗೆಲ್ಲುವ ಅವಕಾಶ ಯಾರಿಗಿದೆಯೋ ಅವರಿಗೆ ಟಿಕೆಟ್ ಕೊಡುವುದಾಗಿ ತಿಳಿಸಿದ್ದಾರೆ ಎಂದರು.

ನಾನು ಬನ್ನೂರಿನವಳೇ: 2018ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಕೊಳ್ಳೇಗಾಲ, ಸಕಲೇಶಪುರ, ಮಹದೇವಪುರ ಮೀಸಲು ಕ್ಷೇತ್ರದಿಂದ ಅರ್ಜಿ ಸಲ್ಲಿಸಿದ್ದೆ. ಆದರೆ, ಅವಕಾಶ ಸಿಕ್ಕಿಲ್ಲ. ವಿಧಾನ ಪರಿಷತ್‌ಗೂ ಪ್ರಯತ್ನ ಮಾಡಿದ್ದೆ, ಅವಕಾಶ ದೊರಕಲಿಲ್ಲ. ಈ ಬಾರಿ ಅವಕಾಶ ಸಿಗುವ ನಿರೀಕ್ಷೆ ಇದೆ ಎಂದರು.

ನಾನು ಹುಟ್ಟಿ ಬೆಳೆದ ಊರು ಬನ್ನೂರು. ಇಲ್ಲಿ ನನಗೆ ಒಡನಾಟವಿದೆ. ಜತೆಗೆ ಚಾಮರಾಜನಗರ, ಕೊಳ್ಳೇಗಾಲ, ನಂಜನಗೂಡು ಕ್ಷೇತ್ರಗಳಲ್ಲಿ ಪಕ್ಷದ ಹಿರಿಯ ನಾಯಕರು, ಮಹಿಳಾ ಮುಖಂಡರು ನನಗೆ ಆತ್ಮವಿಶ್ವಾಸ ತುಂಬಿ ಸ್ಪರ್ಧಿಸುವಂತೆ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಆಕಾಂಕ್ಷಿಯಾಗಿದ್ದಾನೆ ಎಂದು ಹೇಳಿದರು.

ಯಾರಿಗೆ ಟಿಕೆಟ್ ಸಿಕ್ಕರೂ ಚಿಂತೆಯಿಲ್ಲ: ಸಚಿವ ಹೆಚ್.ಸಿ.ಮಹದೇವಪ್ಪ ಅವರ ಪುತ್ರ ಸುನಿಲ್ ಬೋಸ್ ಚಾಮರಾಜನಗರದಿಂದ ಸ್ಪರ್ಧೆ ಮಾಡುವ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಸುನಿಲ್ ಬೋಸ್ ಅವರು ಕೂಡ ಪಕ್ಷದ ಮುಖಂಡರಾಗಿ ಸೇವೆ ಸಲ್ಲಿಸುತ್ತಿರುವುದರಿಂದ ಟಿಕೆಟ್ ಕೇಳುವುದರಲ್ಲಿ ತಪ್ಪೇನಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಟಿಕೆಟ್ ಕೇಳಬಹುದು. ಆದರೆ, ಟಿಕೆಟ್ ಸಿಗುವುದು ಒಬ್ಬರಿಗೆ ಮಾತ್ರ. ಸುನೀಲ್ ಬೋಸ್‌ಗೆ ಟಿಕೆಟ್ ಸಿಕ್ಕರೆ ಚಿಂತೆ ಇಲ್ಲ. ನಾನು ಕೂಡ ಆಕಾಂಕ್ಷಿಯಾಗಿದ್ದೇನೆ. ಹೈಕಮಾಂಡ್ ನನ್ನ ಆಯ್ಕೆಗೆ ಹೆಚ್ಚಿನ ಆದ್ಯತೆ ಕೊಡುತ್ತದೆ ಎಂಬ ನಂಬಿಕೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಮಾಜಿ ಉಪಮೇಯರ್ ಪುಷ್ಪವಲ್ಲಿ, ಜಿಪಂ ಮಾಜಿ ಸದಸ್ಯೆ ಶಶಿರೇಖಾ, ಡಿಸಿಸಿ ಪ್ರಧಾನ ಕಾರ್ಯದರ್ಶಿ ಶಾರದಾ ಸಂಪತ್, ನಗರ ಪಾಲಿಕೆ ಮಾಜಿ ಸದಸ್ಯೆ ಸುಶೀಲಾ ಮರಿಗೌಡ, ಗ್ರಾಪಂ ಸದಸ್ಯೆ ಪಾರ್ವತಮ್ಮ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲಿಯೋ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಿಯೋ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಲಿಯೋ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ(ತ)	4 ಪ್ರದರ್ಶನಗಳು
ಪ್ರಭಾ	
ರೋನಿ (ಕ)	2 ಪ್ರದರ್ಶನಗಳು
ಇನಾಮ್‌ದಾರ್(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಲಿಯೋ (ತ):** ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, **ಘೋಸ್ಟ್ (ಕ):** ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	**ದಸರಾ ಚಿತ್ರಗಳು:** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, **ಗಣಪತ್ (ಹಿಂ):** ರಾ.10.20ಕ್ಕೆ.
ಸ್ಕ್ರೀನ್ 3	**ಯಾರಿಯನ್ 2 (ಹಿಂ):** ಬೆ.10.05ಕ್ಕೆ, **ಗಣಪತ್ (ಹಿಂ):** ಮ.1ಕ್ಕೆ, **ಟೈಗರ್ ನಾಗೇಶ್ವರ್ ರಾವ್ (ತೆ):** ಮ.3.35ಕ್ಕೆ, ರಾ.7ಕ್ಕೆ, **ಭಗವಂತ್ ಕೇಸರಿ (ತೆ):** ರಾ.10.25ಕ್ಕೆ.
ಸ್ಕ್ರೀನ್ 4	**ಘೋಸ್ಟ್ (ಕ):** ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, **ಲಿಯೋ (ತ):** ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಲಿಯೋ (ತ):** ಬೆ.9.35ಕ್ಕೆ, ಮ.3.55ಕ್ಕೆ, **ಘೋಸ್ಟ್ (ಕ):** ಮ.1ಕ್ಕೆ, ರಾ.7.20ಕ್ಕೆ, **ಗಣಪತ್ (ಹಿಂ):** ರಾ.10.15ಕ್ಕೆ.
ಸ್ಕ್ರೀನ್ 2	**ಲಿಯೋ (ತ):** ರಾ.10.20ಕ್ಕೆ.
ಸ್ಕ್ರೀನ್ 3	**ಭಗವಂತ್ ಕೇಸರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ಟೈಗರ್ ನಾಗೇಶ್ವರ್ ರಾವ್ (ತೆ):** ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪರಿಶುದ್ಧಂ (ಕ):** ಬೆ.10.30ಕ್ಕೆ, **ಹನಿಮೂನ್ ಇನ್ ಬ್ಯಾಂಕಾಕ್(ಕ):** ಮ.1.30ಕ್ಕೆ, **ಧ್ವಂದ್ವ (ಕ):** ಸಂ.4.20ಕ್ಕೆ, **ಬನ್ ಟೀ (ಕ):** ಸಂ.6.45ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಜವಾನ್ (ಹಿಂ):** ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	**ದಿ ನನ್ 2 (ಇಂ):** ಸಂ.4.45ಕ್ಕೆ, **ಜವಾನ್ (ಹಿಂ):** ರಾ.7ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.10.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಮ.1.45ಕ್ಕೆ, ಸಂ.4.45ಕ್ಕೆ, **ದಿ ನನ್ 2 (ಇಂ):** ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, **ಗಣಪತ್ (ಹಿಂ):** ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, **ಘೋಸ್ಟ್ (ಕ):** ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, **ಲಿಯೋ (ಕ):** ಮ.12.15ಕ್ಕೆ, **ಲಿಯೋ (ತ):** ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, **ಲಿಯೋ (ತ):** ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, **ಟೈಗರ್ ನಾಗೇಶ್ವರ್ ರಾವ್ (ತೆ):** ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, **ಯಾರಿಯನ್ 2 (ಹಿಂ):** ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸ್ವಇಚ್ಛೆಯ ಶಿಕ್ಷಕ ವೃತ್ತಿಯಿಂದ ಮಾತ್ರ ಗುಣಮಟ್ಟದ ಶಿಕ್ಷಣ ಸಾಧ್ಯ



ನಂಜನಗೂಡು, ಅ.31–ಶಿಕ್ಷಕ ವೃತ್ತಿಗೆ ಸ್ವಇಚ್ಛೆಯಿಂದ ಬಂದಾಗ ಮಾತ್ರ ಮಕ್ಕಳಿಗೆ ಪರಿಣಾಮಕಾರಿಯಾಗಿ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ ಎಂದು ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಎಸ್.ಸ್ವಾಮಿ ಹೇಳಿದರು.

ತಾಲೂಕಿನ ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಏರ್ಪಡಿಸಿದ್ದ ವಿದ್ಯಾರ್ಥಿ ಸಂಘದ ಸಮಾರೋಪ ಹಾಗೂ ಅಂತಿಮ ಬಿ.ಇಡಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಕ ವೃತ್ತಿಯಲ್ಲಿ ಆಸಕ್ತಿ, ಕಠಿಣ ಪರಿಶ್ರಮ ಹಾಗೂ ವೃತ್ತಿ ನೈತಿಕತೆ ಇದ್ದಾಗ ಮಾತ್ರ ಯಶಸ್ವಿಯಾಗಲು ಸಾಧ್ಯ. ಈ ವೃತ್ತಿಗೆ ಸಮಾಜದಲ್ಲಿ ತನ್ನದೇ ಆದ ಗೌರವ ಮತ್ತು ಶ್ರೇಷ್ಠತೆಯಿದ್ದು, ಇದರಿಂದ ಉತ್ತಮ ಸಮಾಜ ನಿರ್ಮಾಣ ಮಾಡಬಹುದು ಎಂದರು.

ಜೆಎಸ್‌ಎಸ್ ಬಿ.ಇಡಿ ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಎಂ.ಮಹೇಶ್ ಮಾತನಾಡಿ, ವೃತ್ತಿಯಿಂದ ಗೌರವ ಪಡೆಯುವ ಜತೆಗೆ ವ್ಯಕ್ತಿತ್ವದಿಂದ ವೃತ್ತಿಗೆ ಶ್ರೇಷ್ಠತೆ ತಂದುಕೊಡಬೇಕು. ಇದಕ್ಕೆ ಆದರ್ಶ ಮೌಲ್ಯಗಳ ಅಳವಡಿಕೆ ಅವಶ್ಯಕ. ಇವುಗಳಿಂದ ವಿದ್ಯಾರ್ಥಿಗಳಿಗೆ ಮಾದರಿಯಾಗಲು ಸಾಧ್ಯ ಎಂದು ಹೇಳಿದರು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಕೆ.ವಿ.ಯೋಗೀಶ್, ಆದರ್ಶ್, ನಾಗರಾಜು, ವೀಣಾ, ಜಿ.ಎನ್.ಮಂಜುನಾಥ್, ಶಾಂತರಾಜು ಉಪಸ್ಥಿತರಿದ್ದರು.

ಆಸ್ಪತ್ರೆಗೆ ಸೌಲಭ್ಯ ಒದಗಿಸುವಂತೆ ಆಗ್ರಹಿಸಿ ಪ್ರತಿಭಟನೆ



ಬನ್ನೂರು, ಅ.31–ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಮೂಲಸೌಲಭ್ಯ ಒದಗಿಸಬೇಕು ಹಾಗೂ ವರ್ಗಾವಣೆಗೊಂಡಿರುವ ಆಸ್ಪತ್ರೆಯ ಹೆರಿಗೆ ವಿಭಾಗದ ವೈದ್ಯ ಪುರುಷೋತ್ತಮ್ ಅವರನ್ನು ಇಲ್ಲೇ ಮುಂದುವರಿಸಬೇಕು ಎಂದು ಒತ್ತಾಯಿಸಿ ರಾಜ್ಯ ರೈತ ಸಂಘದ (ಮೂಲ ಸಂಘಟನೆ) ಕಾರ್ಯಕರ್ತರು ಮಂಗಳವಾರ ಆಸ್ಪತ್ರೆ ಮುಂಭಾಗ ಪ್ರತಿಭಟನೆ ನಡೆಸಿದರು.

ಆಸ್ಪತ್ರೆಗೆ ಅಗತ್ಯವಾಗಿ ಚುಚ್ಚುಮದ್ದು, ಔಷಧ ಸೇರಿದಂತೆ ಮೂಲ ಸೌಕರ್ಯ ಒದಗಿಸಬೇಕು. ಸರಿಯಾದ ತಪಾಸಣೆ ಹಾಗೂ ಚಿಕಿತ್ಸೆ ಇಲ್ಲದೆ ಸಾರ್ವಜನಿಕರು ಪ್ರತಿನಿತ್ಯ ಅಲೆದು ಖಾಸಗಿ ವೈದ್ಯರು ಮತ್ತು ಸಿಬ್ಬಂದಿಯನ್ನು ಅವಲಂಬಿಸಬೇಕಾಗಿದೆ. ಆಸ್ಪತ್ರೆಯಲ್ಲಿ ಶೌಚಾಲಯಗಳು ದುಸ್ಥಿತಿಯಲ್ಲಿದ್ದು, ಅವುಗಳು ಉಪಯೋಗಕ್ಕೆ ಬಾರದಂತಾಗಿವೆ. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಆಸ್ಪತ್ರೆಗೆ ಬೀಗ ಜಡಿದು ಸಾರ್ವಜನಿಕರೊಂದಿಗೆ ಪ್ರತಿಭಟಿಸುವುದಾಗಿ ಎಚ್ಚರಿಸಿದರು.

ಬಡ ಮಹಿಳೆಯರ ಹೆರಿಗೆಗೆ ಸಹಾಯ ಮಾಡುತ್ತಿದ್ದ ವೈದ್ಯ ಪುರುಷೋತ್ತಮ್ ಅವರನ್ನು ವರ್ಗಾವಣೆ ಮಾಡಿರುವುದರಿಂದ ಈ ಭಾಗದ ಜನರಿಗೆ ತೊಂದರೆ ಯಾಗುತ್ತಿದೆ. ಆದ್ದರಿಂದ ಜಿಲ್ಲಾ ಆರೋಗ್ಯಾಧಿಕಾರಿಗಳು ಇತ್ತಕಡೆ ಗಮನ ಹರಿಸಿ, ಪುರುಷೋತ್ತಮ್ ಅವರ ವರ್ಗಾವಣೆಯನ್ನು ರದ್ದು ಗೊಳಿಸಿ ಇಲ್ಲೇ ಮುಂದುವರಿಸಬೇಕು. ಅಗತ್ಯ ಔಷಧ, ತಪಾಸಣೆ ಹಾಗೂ ಚಿಕಿತ್ಸೆ ದೊರಕುವಂತಾಗಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ನಾರಾಯಣ್, ಸಮಾಜ ಸೇವಕ ವೈ.ಎಸ್.ರಾಮಸ್ವಾಮಿ, ಅತ್ತಹಳ್ಳಿ ರಾಜು, ಹರೀಶ್, ಎಂ.ವಿ.ಕೃಷ್ಣಪ್ಪ, ಜಯರಾಂ ಇದ್ದರು.

ಶಿಕ್ಷಣದಿಂದ ಸುಸಂಸ್ಕೃತ ಸಮಾಜ ನಿರ್ಮಾಣ



ಚುಂಚನಕಟ್ಟೆ, ಅ.31–ಪ್ರಸ್ತುತ ಸಮಾಜ ಸುಸಂಸ್ಕೃತವಾಗಿರ ಬೇಕಾದರೇ ಶಿಕ್ಷಕರ ನೀಡುವ ಶಿಕ್ಷಣದಿಂದ ಮಾತ್ರ ಸಾಧ್ಯವಾಗಿದ್ದು, ಈ ನಿಟ್ಟಿನಲ್ಲಿ ಶಿಕ್ಷಕರು ಕೆಲಸ ನಿರ್ವಹಿಸಬೇಕಾಗಿದೆ ಎಂದು ಆದಿಚುಂಚನಗಿರಿಯ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಹೇಳಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ಮೈಸೂರಿನ ಬಿಜಿಎಸ್ ಬಿ.ಇಡಿ ಕಾಲೇಜಿನ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸಮುದಾಯ ಜೀವನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶಿಕ್ಷಕರನ್ನು ತಯಾರಿಸಲು ಸರ್ಕಾರ ಮತ್ತು ಪೋಷಕರು ಸಾಕಷ್ಟು ಹಣವನ್ನು ವ್ಯಯ ಮಾಡುತ್ತಿದ್ದಾರೆ. ಇದನ್ನು ಸದ್ಬಳಿಕೆ ಮಾಡಿಕೊಂಡು ಉತ್ತಮ ಶಿಕ್ಷಕರಾಗಬೇಕು ಎಂದು ಬಿ.ಇಡಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬಾವಿ ಶಿಕ್ಷಕರಾಗಿರುವ ನೀವು ವೃತ್ತಿಯಲ್ಲಿನ ಗೌರವ, ಘನತೆ, ಶಿಸ್ತು, ಮಹತ್ವವನ್ನು ಮನ್ನಣೆ ನೀಡಿದಾಗ ಮಾತ್ರ ಉತ್ತಮ ಶಿಕ್ಷಕರಾಗಲು ಸಾಧ್ಯ ಅಲ್ಲದೇ, ಸಮಾಜದ ವ್ಯವಸ್ಥೆ ಬದಲಾಯಿಸಲು ಸಾಧ್ಯವಾಗುತ್ತದೆ. ನಗರ ಪ್ರದೇಶದಲ್ಲಿ ವ್ಯಾಸಂಗ ಮಾಡುವರಿಗೆ ಗ್ರಾಮಾಂತರ ಪ್ರದೇಶಲ್ಲಿನ ಸಮಸ್ಯೆಗಳ ಅರಿವು ತಿಳಿಯುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಆಯೋಜಿಸುವ ಈ ಶಿಬಿರರಲ್ಲಿ ಭಾಗವಹಿಸಿ ಈ ಪ್ರದೇಶದ ಜನರ ನೋವು–ನಲಿವುಗಳ ಕುರಿತು ಚಿಂತನೆ ನಡೆಸಿದಾಗ ಏಕಾಗ್ರತೆ ಜತೆಗೆ ಜಾಗೃತಿ ಮೂಡಲಿದೆ ಎಂದರು.

ಪಿರಿಯಾಪಟ್ಟಣ ತಾಲೂಕಿನ ಪಿಎಂ ಪೋಷಣಾ ಅಭಿಯಾನದ ಸಹಾಯಕ ನಿರ್ದೇಶಕ ಎನ್.ಸಿ.ಪ್ರಶಾಂತ್ ಮಾತನಾಡಿ, ಸಮಾರಿದ ವ್ಯವಸ್ಥೆಯನ್ನು ನಿರ್ಧರಿಸುವ ಜವಾಬ್ದಾರಿ ಶಿಕ್ಷಕರ ಮೇಲಿದ್ದು, ಇದಕ್ಕಾಗಿ ಶಿಕ್ಷಕರ ವೃತ್ತಿಗೆ ಬರುವರು ವೃತ್ತಿ ಗೌರವ ಮತ್ತು ಘನತೆಯನ್ನು ಉಳಿಸಿಕೊಂಡಾಗ ಮಾತ್ರ ಉತ್ತಮ ಶಿಕ್ಷಕನಾಗಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಶಿಬಿರದಲ್ಲಿ ರೋಹಿತ್ ಮತ್ತು ಐಶ್ವರ್ಯ ತಂಡ ಜಾನಪದ ಸಾಹಿತ್ಯದ ಹಾಡುಗಳಿಗೆ ನೃತ್ಯ ಪ್ರದರ್ಶಿಸಿದರು. ಕೆ.ಆರ್.ನಗರ ಅಗ್ನಿಶಾಮಕ ದಳದ ಜಿ.ಲಕ್ಷ್ಮಿಕಾಂತಯಾದವ್ ನೇತೃತ್ವದಲ್ಲಿ ಅಗ್ನಿ ಸುರಕ್ಷತೆಯ ಕ್ರಮಗಳ ಕುರಿತು ಪ್ರಾತ್ಯಕ್ಷತೆ ನೀಡಲಾಯಿತು. ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಳ್ಳಿ ಸೋಮು, ಮೈಸೂರು ಬಿಜಿಎಸ್ ಬಿಇಡಿ ಕಾಲೇಜಿನ ಆಡಳಿತಾಧಿಕಾರಿ ಯಶೋಧಾ, ಪ್ರಾಂಶುಪಾಲ ನಾಗರಾಜು, ಶಿಬಿರದ ಸಂಚಾಲಕರಾದ ಸಿ.ಆರ್.ಶರತ್ ಕುಮಾರ್, ಡಾ.ಎಚ್.ಬಿ.ಬೆಟ್ಟಸ್ವಾಮಿ, ಪ್ರಾಧ್ಯಾಪಕರಾದ ಕೆ.ಟಿ.ಬಸವರಾಜು, ಡಿ.ಎನ್.ನಾಗರಾಜು, ಡಾ.ಶರ್ಮಿಷ್ಠಾ ಚಕ್ರವರ್ತಿ, ಡಾ.ಸುಮತಿ, ದಿನೇಶ್, ಶೋಭಾ, ರಾಧಿಕಾ, ನಂಜುಂಡ ಸ್ವಾಮಿ, ಶಿಬಿರದ ಲೀಡರ್‌ಗಳಾದ ಪ್ರಶಾಂತ್, ಶ್ಯಾಮಲಾ, ಚುಂಚನಕಟ್ಟೆ ಶಿಕ್ಷಣ ಸಂಸ್ಥೆಯ ಮುಖ್ಯಶಿಕ್ಷಕಿ ಚಾಂದಿನಿ, ಶಿಕ್ಷಕರಾದ ಮಹೇಶ್, ಗಿರೀಶ್, ಸತ್ಯನಾರಾಯಣ್, ಧರ್ಮರಾಜ್, ಮಠದ ವ್ಯವಸ್ಥಾಪಕ ರಾಮಲಿಂಗಪ್ಪ ಇದ್ದರು.


ಕೃಷಿ ಮಾರಾಟ ಸಹಕಾರ ಸಂಘಕ್ಕೆ ನೇಮಕ




ಕೆಆರ್.ನಗರ, ಅ.31– ತಾಲೂಕು ವ್ಯವಸಾಯೋತ್ಪನ್ನ ಕೃಷಿ ಮಾರಾಟ ಸಹಕಾರ ಸಂಘದ ನಿರ್ದೇಶಕರಾಗಿ ಹಂಪಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಪಿ.ಪ್ರಶಾಂತ್ ಹಾಗೂ ಗಳಿಗೆಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ರಾಮಕೃಷ್ಣೇಗೌಡ ಅವರನ್ನು ನೇಮಕ ಮಾಡಲಾಯಿತು.

ಪಟ್ಟಣದ ಟಿಎಪಿಸಿಎಂಎಸ್‌ನ ಕಚೇರಿಯಲ್ಲಿ ಗುರುವಾರ ನಿರ್ದೇಶಕ ಜಿ.ಕೆ.ತೋಟಪ್ಪ ನಾಯಕ ಅಧ್ಯಕ್ಷತೆಯ ಸಭೆಯಲ್ಲಿ ಚರ್ಚಿಸಿ ಆಡಳಿತ ಮಂಡಳಿಯಲ್ಲಿ ಖಾಲಿಯಿದ್ದ ಎರಡು ನಿರ್ದೇಶಕರ ಸ್ಥಾನಗಳಿಗೆ ನೇಮಕ ಮಾಡಲಾಯಿತು. ಇದೇ ವೇಳೆ ಇಬ್ಬರು ನಿರ್ದೇಶಕರನ್ನು ಆಡಳಿತ ಮಂಡಳಿ ಪರವಾಗಿ ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಟಿ.ಎಲ್.ಪರಶಿವಮೂರ್ತಿ ಹಾಗೂ ಉಪಾಧ್ಯಕ್ಷ ಹೆಚ್.ಆರ್. ಮಹೇಶ್ ಗೈರಾಗಿದ್ದರು. ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಅಮಿತ್ ವಿ.ದೇವರ ಹಟ್ಟಿ, ಟಿಎಪಿಸಿಎಂಎಸ್ ನಿರ್ದೇಶಕರಾದ ಎಸ್. ಸಿದ್ದೇಗೌಡ, ಕೃಷ್ಣಮೂರ್ತಿ, ಪ್ರಮಿಳಾ ಜಯರಾಮು, ದೊಡ್ಡಕೊಪ್ಪಲು ರವಿ, ಸಹಕಾರ ಇಲಾಖೆಯ ನಿಬಂಧಕರಾದ ಅನುಸೂಯ, ಕಾರ್ಯದರ್ಶಿ ಧರ್ಮರಾಜು ಹಾಜರಿದ್ದರು.

ಆರ್. ರಮೇಶ್‌ಗೆ ಪಿಎಚ್.ಡಿ



ಮೈಸೂರು, ಅ. 31–ಡಾ. ಮದಿಯಾಲಗನ್ ಅವರ ಮಾರ್ಗದರ್ಶನದಲ್ಲಿ ಆರ್. ರಮೇಶ ಅವರು ದೈಹಿಕ ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ತಿ.ನರಸೀಪುರದ ಹೊಸ ತಿರುಮಕೂಡಲಿನ ವಾಲ್ಮೀಕಿ ಯುವಕರ ಸಂಘದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಬೈರಾಪುರ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪುಟ್ಟು, ಶೇಖರ್, ರಮೇಶ, ಮಾಧುಪುಟ್ಟ, ಮಾದಣ್ಣ, ರಮೇಶ, ಚಿಕ್ಕಯಜಮಾನ್ ಮಹದೇವಣ್ಣ, ಮಲ್ಲಿಕಾ, ರೇಷ್ಮೆ ಇಲಾಖೆಯ ನಿವೃತ್ತ ನೌಕರ ಸಿದ್ದಪ್ಪ, ಚಂದ್ರಶೇಖರ್, ನಾಗಣ್ಣ, ಮಿಥುನ್ ನಾಯಕ್ ಇದ್ದರು.

ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಕಾರ್ಯ ಚುರುಕು



ಹುಣಸೂರು, ಅ.31–ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಗ್ರಾಮದ ಶಾಲೆಯ ಪಕ್ಕದ ನಿವೇಶನದಲ್ಲಿ ಪ್ರತಿಮೆ ನಿರ್ಮಿಸಲಾಗುತ್ತಿದ್ದು, ದಲಿತ ಮುಖಂಡ ನಾಗರಾಜ್ ಮಲ್ಲಾಡಿ ಮತ್ತು ಅವರ ತಂಡ ಅಂಬೇಡ್ಕರ್ ಪುತ್ಥಳಿ ಪ್ರತಿಸ್ಥಾಪನಾ ಸಮಿತಿ ರಚಿಸಿಕೊಂಡು ನಿರ್ಮಾನ ಕಾರ್ಯಕ್ಕೆ ಶ್ರಮಿಸುತ್ತಿದೆ. ಇತ್ತೀಚಿಗೆ ಸಂಸದ ಪ್ರತಾಪ್ ಸಿಂಹ ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಿ, ತಮ್ಮ ಸಂಸದರ ನಿಧಿಯಿಂದ 10 ಲಕ್ಷ ರೂ. ನೀಡಿವುದಾಗಿ ಭರವಸೆ ನೀಡಿದ್ದಾರೆ.

ದಲಿತ ಚಳುವಳಿ ನವ ನಿರ್ಮಾಣ ವೇದಿಕೆಯ ಮುಖ್ಯಸ್ಥ ಹರಿಹರ ಆನಂದಸ್ವಾಮಿ, ಅಂಬೇಡ್ಕರ್ ಪುತ್ಥಳಿ ಪ್ರತಿಸ್ಥಾಪನಾ ಸಮಿತಿಯ ಮುಖ್ಯಸ್ಥರು ಹಾಗೂ ಸದಸ್ಯರೊಂದಿಗೆ ಭೇಟಿ ನೀಡಿ ನಿರ್ಮಾಣ ಕಾರ್ಯ ಶ್ಲಾಘಿಸಿ 10 ಸಾವಿರ ರೂ. ದೇಣಿಗೆ ನೀಡಿದರು.

ಡೀಡ್ ನಿರ್ದೇಶಕ ಡಾ.ಎಸ್. ಶ್ರೀಕಾಂತ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಟರಾಜು, ಸಂತೋಷ್, ಸಂಜು, ಕುಮಾರು, ಮಂಜುನಾಥ್, ರಾಜು ಇದ್ದರು.

ಹುಲಿ ದಾಳಿ: ರೈತನಿಗೆ ತೀವ್ರ ಗಾಯ, ಹಸು ಬಲಿ





ಮಲ್ಕುಂಡಿ, ಅ.31–ಹುಲಿ ದಾಳಿ ನಡೆಸಿ ಹಸುವನ್ನು ಕೊಂದುಹಾಕಿ, ರೈತನಿಗೆ ತೀವ್ರವಾಗಿ ಗಾಯಗೊಳಿಸಿರುವ ಘಟನೆ ನಂಜನಗೂಡು ತಾಲೂಕಿನ ಮಲ್ಕುಂಡಿ ಸಮೀಪದ ಹೆಡಿಯಾಲದ ಕುದುರೆಗುಂಡಿ ಹಿನ್ನೀರು ಪ್ರದೇಶದಲ್ಲಿ ಮಂಗಳವಾರ ಮಧ್ಯಾಹ್ನ ನಡೆದಿದೆ.


ನಂಜನಗೂಡು ತಾಲೂಕಿನ ಮಹದೇವನಗರ ಗ್ರಾಮದ ವೀರಭದ್ರ ಭೋವಿ (71) ಹುಲಿ ದಾಳಿಯಿಂದ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದು, ಇವರಿಗೆ ಸೇರಿದ ಹಸು ಬಲಿಯಾಗಿದೆ.

ಈತ ಕುದುರೆಗುಂಡಿ ಕಿರು ಜಲಾಶಯದ ಹಿನ್ನೀರು ಪ್ರದೇಶದಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದಾಗ ಪೊದೆಯಲ್ಲಿದ್ದ ಹುಲಿ ಏಕಾಏಕಿ ದಾಳಿ ನಡೆಸಿ ಹಸುವನ್ನು ಕೊಂದು ತಿನ್ನುತ್ತಿತ್ತು. ಇದನ್ನು ಕಂಡ ರೈತ ವೀರಭದ್ರ ಭೋವಿ ಹಸುವನ್ನು ರಕ್ಷಿಸಲು ಕೂಗಾಡಿದ್ದಾರೆ. ಈ ವೇಳೆ ವೀರಭದ್ರ ಭೋವಿ ಮೇಲೂ ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿ ಪರಾರಿಯಾಗಿದೆ.

ಇದರಿಂದ ಈತನಿಗೆ ಬೆನ್ನು, ಮುಖ ಹಾಗೂ ಕೈನಲ್ಲಿ ತೀವ್ರವಾಗಿ ಗಾಯವಾಗಿದ್ದು, ನಂಜನಗೂಡು ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಕೆಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಹೆಡಿಯಾಲ ವಿಭಾಗದ ಉಪ ವಲಯ ಅರಣ್ಯಾಧಿಕಾರಿಗಳಾದ ಮಹಾಂತೇಶ್ ಕುಮಾರ್ ಹಾಗೂ ರಘುನಾಥಗೌಡ ಭೇಟಿ ನೀಡಿ, ಪರಿಶೀಲಿಸಿದರು. ಇದೇ ವೇಳೆ ಈ ಘಟನೆಯಿಂದ ಭಯಗೊಂಡಿರುವ ಸುತ್ತಮುತ್ತಲ ಗ್ರಾಮಸ್ಥರು ತಕ್ಷಣ ಹುಲಿ ಸೆರೆ ಹಿಡಿಯುವಂತೆ ಒತ್ತಾಯಿಸಿದರು.

ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಚಿರತೆ ಪತ್ತೆ



ಹೆಚ್.ಡಿ.ಕೋಟೆ, ಅ.31–ಪಟ್ಟಣದ ಕನಕ ಭವನ ಬಳಿಯ ಬಣ್ಣಾರಿ ಅಮ್ಮನ ದೇವಸ್ಥಾನ ಹತ್ತಿರ ಸೋಮವಾರ ರಾತ್ರಿ ಚಿರತೆ ಕಾಣಿಸಿಕೊಂಡಿದ್ದು, ಇದರಿಂದ ಪಟ್ಟಣದ ನಿವಾಸಿಗಳು ಭಯಭೀತರಾಗಿದ್ದಾರೆ.

ಪಟ್ಟಣದ ಕೆಲ ನಿವಾಸಿಗಳು ರಾತ್ರಿ ಸುಮಾರು 9.30ರಲ್ಲಿ ವಾಕಿಂಗ್ ಮಾಡುತ್ತಿದ್ದಾಗ ದೇವಸ್ಥಾನ ಹತ್ತಿರ ಚಿರತೆ ರಸ್ತೆ ದಾಟುತ್ತಿರುವುದನ್ನು ನೋಡಿ ಗಾಬರಿಗೊಂಡಿದ್ದಾರೆ. ಇತ್ತೀಚಿಗೆ ಪಟ್ಟಣದ ಹೌಸಿಂಗ್‌ಬೋರ್ಡ್ ಬಡಾವಣೆ ಸಮೀಪದ ಸಿದ್ದಪ್ಪಾಜಿ ರಸ್ತೆಯ ನಿವಾಸಿ ಸಣ್ಣಯ್ಯ ಅವರು ವಿವೇಕ್ ಎಂಬುವರ ತೋಟದ ಮನೆ ಸಮೀಪ ಮೇಕೆಗಳನ್ನು ಮೇಯಿಸುತ್ತಿದ್ದಾಗ 2 ಮೇಕೆಗಳನ್ನು ಚಿರತೆ ಕೊಂದುಹಾಕಿತ್ತು. ಆದರೆ, ಸೋಮವಾರ ರಾತ್ರಿ ಪಟ್ಟಣದಲ್ಲಿ ಚಿರತೆ ಕಾಣಿಸಿಕೊಂಡಿರುವುದು ಜನರ ಭಯಕ್ಕೆ ಕಾರಣವಾಗಿದೆ.

ಈ ಭಾಗದಲ್ಲಿ ಚಿರತೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಬಗ್ಗೆ ಅರಣ್ಯಾಧಿಕಾರಿಗಳಿಗೆ ತಿಳಿಸಿದರೂ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಚಿರತೆ ಸೆರೆಗೆ ಮುಂದಾಗದೇ ಬೇಜವಾಬ್ದಾರಿ ತೋರುತ್ತಿದ್ದಾರೆ ಎಂದು ಪಟ್ಟಣದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಪಟ್ಟಣದ ಕೆಲ ಭಾಗಗಳಲ್ಲಿ ಚಿರತೆ ಕಾಣಿಸಿಕೊಳ್ಳುತ್ತಿದೆ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ. ಶೀಘ್ರದಲ್ಲೇ ಬೋನು ಇರಿಸಿ ಚಿರತೆ ಸೆರೆ ಹಿಡಿಯಲಾಗುವುದು. ಪಟ್ಟಣದ ಜನತೆ ರಾತ್ರಿ ವೇಳೆ ತಿರುಗಾಡುವಾಗ ಎಚ್ಚರಿಕೆಯಿಂದಿರುವಂತೆ ಹೆಚ್.ಡಿ.ಕೋಟೆ ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಪೂಜಾ ತಿಳಿಸಿದ್ದಾರೆ.

ಪ್ರೊ.ಸಿ.ಶಿವರುದ್ರಯ್ಯ ನಿಧನ



ಹುಣಸೂರು, ಅ.31– ಪಟ್ಟಣದ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಸಿ.ಶಿವರುದ್ರಯ್ಯ ಮಂಗಳವಾರ ಮಧ್ಯಾಹ್ನ ಮೈಸೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ ಸಾವಿತ್ರಮ್ಮ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಬುಧವಾರ ಮಧ್ಯಾಹ್ನ 3.30ಕ್ಕೆ ಮೈಸೂರಿನ ಲಲಿತಮಹಲ್ ರಸ್ತೆಯ ಲಲಿತಾದ್ರಿಪುರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಚ್.ಬಿ.ಅಣ್ಣಯ್ಯ



ತಿ.ನರಸೀಪುರ, ಅ.31– ತಾಲೂಕು ಶಿಕ್ಷಕರ ಸಂಘದ ಉಪಾಧ್ಯಕ್ಷ ತಲಕಾಡು ನಾಗೇಂದ್ರ ಅವರ ಮಾವ ಹಾಗೂ ಹಿಟ್ಟುವಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಎಚ್.ಬಿ.ಅಣ್ಣಯ್ಯ (75) ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಮೃತರು ಮೂವರು ಪುತ್ರಿಯರು, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಹಿಟ್ಟುವಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಮಾಜಿ ಶಾಸಕರಾದ ವಾಸು, ಎಸ್.ಕೃಷ್ಣಪ್ಪ, ಎಂ.ಅಶ್ವಿನ್ ಕುಮಾರ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್ ಅಂತಿಮ ದರ್ಶನ ಪಡೆದರು.

ನಾಡಿನ ಸಮಸ್ತ ಜನತೆಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಬನ್ನೂರು ನಾಗರಾಜು
ಅಧ್ಯಕ್ಷರು
ಸುವರ್ಣ ಕರ್ನಾಟಕ ಶಿವಾರ್ಚಕ ಪ್ರಗತಿಪರ ಸಂಘ
ಮೈಸೂರು.
9945896702

Neem BOND PLATINUM
PLYWOOD & DOORS
@ FACTORY DEPOT RATES
10 YEARS WARRANTY*
97315 91267 / 99012-91267

ARE YOU A REAL ESTATE AGENT?
40 + APARTMENTS FOR SALE
CALL NOW FOR TIE UP
8884455464

RAJGOPAL RAO RASHINKAR KALYANA MANTAPA
Marriage Dates available for booking
November 28th - 29th
December 6th - 7th
Contact : 76762 95279
T. Narasipura Road, Nazarbad, Mysore-11.



ಹೆರಿಟೇಜ್ ಹೋಮ್ಸ್
MUDA LIMITS
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
MEGA RESIDENTIAL TOWNSHIP
30x40 30x50 40x60 50x80
ಅಚಿತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹550/ ಪ್ರತಿ ಚದರ ಅಡಿ
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಅಧ್ವಿಕಾ ವೆಂಚರ್ಸ್
90713 86615
95133 01854

ಬೇಕಾಗಿದ್ದಾರೆ
ಫ್ಯಾಷನ್ ಜ್ಯುವೆಲರಿ ಶೋರೂಂನಲ್ಲಿ ಕೆಲಸ ಮಾಡಲು
ಸೇಲ್ಸ್ ಗರ್ಲ್ಸ್
ಕನ್ನಡ ಮತ್ತು ಇಂಗ್ಲೀಷ್ ವಾಕ್‌ಚಾತುರ್ಯ ಇರಬೇಕು. ಉತ್ತಮ ಸಂಬಳ + ಇನ್‌ಸೆಂಟಿವ್
NPG Lucky Stones
Ashoka Road, Mysore
ಫೋನ್ : 93 42 42 42 41

SITE FOR SALE
MUDA APPROVED
Layout in Vijaynagar 4th stage, North Facing, Contact
9663761853

ಹಸಿರು ನಮ್ಮ ಉಸಿರು



Brand New Muda Residential Property For Sale
In J.P Nagar Outer Ring Road.
Individual Independent G+1 Floors with Semi-Furnished & Clear Documents from Muda Including Completion Report
BANK LOAN AVAILABLE
9380098724

BECOME A TEACHER
NURSERY TEACHER TRAINING (NTT)
PRIMARY TEACHER TRAINING (PTT)
FOR SSLC, PUC OR ANY DEGREE (PASS OR FAIL)
Course provided by All India Early Childhood Care & Education (R)
ADMISSIONS OPEN
• 100% JOB GUARANTEE
Call / WhatsApp : 91139 80741

WALK- IN- INTERVIEW

Designation – Process Associate / Sr Process Associate (Non-Voice)
Positions – 30
Experience – Fresher and experience (0 to 3 years)
Education – Any Graduation
Shift – General /Day
Location – Mysore

Eligibility:
- Good in English Communication skills.
- Knowledge of E-commerce.
- Basic Computer skills and knowledge of MS Office suite.
- Problem-solving and attention to detail.
- Ability to work independently and in a team environment.
- Immediate joiners are preferred.

Interested candidates can walk in with an updated resume for an interview.

WALK-IN DETAILS
Day: 02-Nov-2023 to 04-Nov-2023
Timing: 9:30 am to 4:00 pm

Venue: Kriya Nextwealth Pvt. Ltd. #331-B, KIADB Hebbal Industrial Layout, Mysuru – 570018
Contact Number – 9380778518/7676156798 (WhatsApp)
Applicants can also forward their resumes to careers@kriyanxw.in

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಯುವರಾಜ YUVARAJA HOME APPLIANCES
ಕನ್ನಡ ರಾಜ್ಯೋತ್ಸವದ ಶುಭಾಶಯಗಳು

SONY 65" LED TV – ₹ 2995/-* EMI Up to 36 Months
SAMSUNG 65" LED TV – ₹ 2990/-* EMI Up to 36 Months
LG 65" LED TV – ₹ 3999/-* EMI Up to 36 Months
Haier 65" LED TV – ₹ 1994/-* EMI Up to 36 Months
SAMSUNG REFRIGERATOR (Samsung Washing Machine Free!) – ₹ 3990/-* EMI Up to 36 Months
LG REFRIGERATOR (LG Double Door Refrigerator Free!) – ₹ 4990/-* EMI Up to 36 Months
Haier REFRIGERATOR – EMI ₹ 2994/-* Up to 36 Months
SAMSUNG GALAXY S23 ULTRA MOBILE – EMI ₹ 4790/-* Up to 24 Months
IFB WASHING MACHINE – EMI ₹ 1950/-* Up to 36 Months
SAMSUNG WASHING MACHINE – EMI ₹ 1490/-* Up to 36 Month
LG WASHING MACHINE – EMI ₹ 3299/-*
Haier WASHING MACHINE – EMI ₹ 1994/-* Up to 36 Month

0%* INTEREST up to 36 Months EMI on BAJAJ FINSERV, 1 EMI Free* *Conditions Apply
up to 25%* DISCOUNT ON SELECTED CREDIT CARD *Conditions Apply

ಯುವರಾಜ YUVARAJA HOME APPLIANCES
N.R. Mohalla, Mysore
☎ 0821-2457705
Mob : 9448753227

ದೀಪಾವಳಿ ಹಬ್ಬದ ಪ್ರಯುಕ್ತ
50% ರಿಯಾಯಿತಿ
ಕಾಂಚೀಪುರಂ ರೇಷ್ಮೆ ಸೀರೆಗಳು ಮಾರಾಟ ಮತ್ತು
ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಹೋಟೆಲ್ ಮಯೂರ ಯಾತ್ರಿನಿವಾಸ್
ಜೆ.ಎಲ್.ಬಿ. ರಸ್ತೆ, ಮೈಸೂರು - 5
ಮೊ. : 9481820079

BLAZERS & SUITS @ HEAVENLYS GENERATIONS
DHANVANTHRI ROAD, MYSURU
PH: +91 821 2422370

5ನೇ ವರ್ಷದ ಸವಿನೆನಪು



ಯಜಮಾನ್ ತಿಮ್ಮೇಗೌಡರು

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಮಕ್ಕಳು, ಮೊಮ್ಮಕ್ಕಳು, ಹೂಟಗಳ್ಳಿ ಗ್ರಾಮಸ್ಥರು ಹಾಗೂ ಬಂಧುಮಿತ್ರರು



A LEADING REAL ESTATE FIRM IS HIRING

• **EXECUTIVE - CUSTOMER RELATIONSHIP MANAGEMENT (CRM)**
Min 2+ years in handling CRM related activities which includes logging sales, Execution of agreements, payment follow-up and loan process. Should have a good command over local language and English. Candidate with Civil Engineering Background or Real Estate Exp. will be an advantage.

• **TELE CALLER**
Outbound Caller with Min. 2 years of experience with good communication skills. Real estate experience would be added advantage. Should have hands on experience on MS office.

Interested candidates may drop their profiles to
inframys@engineer.com
JOB LOCATION : MYSORE
Female candidates preferred
or Whatsapp : 74115 99797


SITES FOR SALE
In prime location, fully developed 32x40, 36x40, 38x40, 50x70.
Park facing North East corner sites, middle of Vasanth Nagar & Vijayanagar 3rd stage
30x40 sites Available
80% Bank loan available
Contact:
90608 28384

Sri Murugan Pharma @ Vijayanagar 3rd Stage
REQUIRED STAFFS
Freshers and Experienced
Attractive Salary
Call: 99802 53762
Email: srimuruganpharmacymysuru@gmail.com





ಛತ್ರ ಖಾಲಿ ಇದೆ
ವಿ.ಸೂ : [ಛತ್ರವನ್ನು ಹೊಸದಾಗಿ ನವೀಕರಿಸಲಾಗಿದೆ.]
ಮದುವೆ ಮತ್ತು ಇತರೆ ಶುಭ ಸಮಾರಂಭಗಳಿಗೆ
2024 ರ ಜನವರಿ: 16, 17 ,20, 21, 22, 23, 27, 28, 30, 31
ಫೆಬ್ರವರಿ: 4, 6, 7, 8, 12, 13, 14, 17, 24, 25, 26, 29
ಮಾರ್ಚ್: 1, 2, 3, 4, 5, 6, 7, 10, 11, 12
ಏಪ್ರಿಲ್: 18, 19, 20, 21, 22
ದಿನಾಂಕಗಳಂದು ಛತ್ರ ಖಾಲಿ ಇದೆ.
ವಿಳಾಸ : ಶ್ರೀಮತಿ ಲೀಲಾ ಶ್ರೀ ಹೆಚ್ ಚನ್ನಯ್ಯ ಕಲ್ಯಾಣಮಂಟಪ
ವಾಲ್ಮೀಕಿ ರಸ್ತೆ, ಹೊಸ ಮಹಾರಾಣಿ ವಾಣಿಜ್ಯ ಕಾಲೇಜು ಪಕ್ಕ, ಪಡುವಾರಹಳ್ಳಿ, ಮೈಸೂರು
ಫೋನ್: 63624 21885, 93530 69499



ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ, ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು